ಪುಸ್ತಕ ಪ್ರಪಂಚ

ಸಂಪುಟ ೪೪ ಮಾರ್ಚಿ ೧೯೯೪ ಸಂಚಿಕೆ ೭



ವಿಷಯ ಸೂಚಿಕೆ

ಮುಖಚಿತ್ರ: ಚದುರಂಗ

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು

ಸಂಪುಟ ೪೪ ಮಾರ್ಚ್ ೧, ೧೯೯೪ ಸಂಚಿಕೆ ೭

ಚದುರಂಗ

ಚದುರಂಗ ಕನ್ನಡದ ಹಿರಿಯ ತಲೆಮಾರಿನ ಲೇಖಕರಲ್ಲಿ ಬಹಳ ಪ್ರಮುಖ ರಾದವರು. ಮೃದು ಮನದ ಬಂಡಾಯಗಾರ, ಸ್ನೇಹ, ಸಜ್ಜನಿಕೆಗಳ ಸಾಕಾರ ವಾದ ಚದುರಂಗ ಅವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮಾಡಿರುವ ಸಾಧನೆ ಬಹಳ ಮಹತ್ವಪೂರ್ಣವಾದದ್ದು.

ಚದುರಂಗ ಎಂಬುದು ಎಂ. ಸುಬ್ರಹ್ಮಣ್ಯರಾಜೇ ಅರಸ್, ಅವರ ಕಾವ್ಯನಾಮ. ಇವರು ೧-೧-೧೯೧೬ರಲ್ಲಿ ಹುಣಸೂರು ತಾಲ್ಲೂಕಿನ ಕಲ್ಲಹಳ್ಳಿಯಲ್ಲಿ ಜನಿಸಿದರು. ಇವರ ತಂದೆ ಮುದ್ದರಾಜೇ ಅರಸು, ತಾಯಿ ಮರುದೇವಮ್ಮಣ್ಣಿ. ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರು ಚದುರಂಗರ ದೊಡ್ಡಪ್ಪನ ಮಗ. ಇಬ್ಬರೂ ಸಹಪಾಠಿಗಳು.

ಮೈಸೂರು ಅರಸು ಮನೆತನಕ್ಕೆ ಸೇರಿದ ಚದುರಂಗ ತಾವು ನಂಬಿದ ಮೌಲ್ಯ ಗಳಿಗಾಗಿ ಅರಮನೆಯ ವೈಭವ, ಸುಖಭೋಗಗಳನ್ನು ಧಿಕ್ಕರಿಸಿ ಅಲ್ಲಿಂದ ಹೊರ ಬಂದರು. ತಾವು ಹುಟ್ಟಿದ ಹಳ್ಳಿಗೆ ಹೋಗಿ ಗುಡಿಸಲನ್ನು ಕಟ್ಟಿ ವಾಸ ಮಾಡ ತೊಡಗಿದರು. ಶಾಲೆ, ಕಾಲೇಜಿನಲ್ಲಿ ತಾವು ಕಲಿತ ವಿದ್ಯೆಯನ್ನು ಬದಿಗಿಟ್ಟು ನೇಗಿಲನ್ನು ಹಿಡಿದರು. ಹೊಲದಲ್ಲಿ ಉತ್ತು, ಬಿತ್ತು ಬೆಳೆ ತೆಗೆದರು. ಹಳ್ಳಿಯ ಬದುಕಿನ ಸಂಭ್ರಮ, ವಿಭ್ರಮಗಳನ್ನು ಅನುಭವಿಸಿದರು. ತಮ್ಮ ಈ ಗ್ರಾಮೀಣ ಬದುಕಿನ ಅನುಭವವನ್ನೇ ದ್ರವ್ಯವಾಗಿಸಿಕೊಂಡು ಕೃತಿಗಳನ್ನು ರಚಿಸಿದರು. ಶವದ ಮನೆ, ಮೀನಿನ ಹೆಜ್ಜೆ, ಸ್ವಪ್ನ ಸುಂದರಿ, ಬಣ್ಣದ ಬೊಂಬೆ ಮತ್ತು ಇತರ ಕಥೆಗಳು ಹಾಗೂ ಕ್ವಾಟೆ ಮುಂತಾದ ಏಳು ಕಥಾ ಸಂಕಲನಗಳನ್ನು ಪ್ರಕಟಿಸಿದರು.

ಸರ್ವಮಂಗಳ, ಉಯ್ಯಾಲೆ, ವೈಶಾಖ—ಚದುರಂಗರ ಮೂರು ಮಹತ್ವಪೂರ್ಣ ಕಾದಂಬರಿ ಕೃತಿಗಳು. ಸರ್ವಮಂಗಳ ಹಾಗೂ ಉಯ್ಯಾಲೆ ಚಲನಚಿತ್ರಗಳಾಗಿವೆ. ಇವರ ವೈಶಾಖ ಕಾದಂಬರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿಗಳ ಪ್ರಶಸ್ತಿ ದೊರಕಿದೆ. ವಿಶ್ವವಿದ್ಯಾನಿಲಯಗಳ ಪದವಿ ಪರೀಕ್ಷೆಗಳಿಗೆ ಪಠ್ಯ ಪುಸ್ತಕವಾಗಿದೆ. ಭಾರತೀಯ ವಿವಿಧ ಭಾಷೆಗಳಿಗೆ ಅನುವಾದಗೊಂಡಿದೆ. ಇದರಲ್ಲಿ ಪ್ರಮುಖವಾಗಿ ತಮಿಳಿನಲ್ಲಿ ಅನುವಾದಗೊಂಡಿರುವ "ಮೌನ ಓಳಂ" ಕೃತಿಗೆ ಸಹ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದಿದೆ. ಹೀಗೆ ಮೂಲ ಕೃತಿ ಮತ್ತು ಅದರ ಅನುವಾದ ಕೃತಿ ಎರಡಕ್ಕೂ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರಕಿರುವುದು ಸಾಹಿತ್ಯ ಕ್ಷೇತ್ರದಲ್ಲಿ ನಡೆದಿರುವ ಒಂದು ಅಪರೂಪದ ಪ್ರಸಂಗ.

ನಾಟಕಕಾರರಾಗಿಯೂ ಚದುರಂಗರು ಸಾಕಷ್ಟು ಕೆಲಸ ಮಾಡಿದ್ದಾರೆ. ಸಂಖ್ಯೆಯಿಂದ ಅವು ಕಡಿಮೆ. ಆದರೂ ಗುಣ, ಪ್ರಭಾವದ ದೃಷ್ಟಿಯಿಂದ ತಮ್ಮದೇ ಆದ ವೈಶಿಷ್ಟ್ಯವನ್ನು ಹೊಂದಿವೆ. ಕುಮಾರರಾಮ, ಇಲಿಬೋನು ಮತ್ತು ಬಿಂಬ ಈ ನಾಟಕಗಳು ಚದುರಂಗರು ಕಾಲಕಾಲಕ್ಕೆ ಉಂಟಾದ ಹಲವು ಸಾಹಿತ್ಯಕ ಸ್ಥಿತ್ಯಂತರಗಳಿಗೆ ಹೇಗೆ ಸ್ಪಂದಿಸಿದ್ದಾರೆ ಎನ್ನುವುದಕ್ಕೆ ಒಳ್ಳೆಯ ನಿದರ್ಶನಗಳಾಗಿವೆ.

ತಮ್ಮ ಯೌವನದ ಬಿಸಿ, ಉತ್ಸಾಹದ ದಿನಗಳಲ್ಲಿ ಚದುರಂಗರು ಕಮ್ಯುನಿಸಂನ ಪ್ರಭಾವಕ್ಕೆ ಒಳಗಾದರು. ಅನಂತರ ಎಂ. ಎನ್. ರಾಯ್ ಅವರ ವಿಚಾರಧಾರೆಯ ಬಗೆಗೆ ಆಕರ್ಷಿತರಾಗಿದ್ದರು. ಮುಂದೆ ಕನ್ನಡದ 'ಪ್ರಗತಿಶೀಲ' ಚಳುವಳಿಯಲ್ಲಿ ಸೇರಿದ ಅವರು ಇದೇ ಗ್ರಹಿಕೆಯಲ್ಲಿ ತಮ್ಮ ಸಾಹಿತ್ಯ ಕೃತಿಗಳನ್ನು ಸೃಷ್ಟಿಸಿದರು.

ಚದುರಂಗ ಅವರದು ಪ್ರೇಮ ವಿವಾಹ. ತಾವು ಪ್ರೀತಿಸಿದ ಹುಡುಗಿಯನ್ನು ಮದುವೆಯಾಗಬಯಸಿದರು. ಆದರೆ ಆ ಹುಡುಗಿಯನ್ನು ಬೇರೆಯವರಿಗೆ ಕೊಟ್ಟು ಮದುವೆ ಮಾಡಲಾಯಿತು. ಆ ಹುಡುಗಿ ದೊಡ್ಡಮಣ್ಣಿ ಬಹಳ ಛಲಗಾತಿ, ಬಂಡಾಯಗಾತಿ. ಮದುವೆ ಆದವನನ್ನು ಬಿಟ್ಟು ಬಂದು ಚದುರಂಗರ ಜೊತೆ ಬದುಕಲಾರಂಭಿಸಿದರು. ಸಿಟ್ಟಿಗೆದ್ದ ನೆಂಟರಿಷ್ಟರು ಬಹಿಷ್ಕಾರ ಹಾಕಿದರು. ಆದರೆ ಚದುರಂಗ ದಂಪತಿಗಳು ಅದನ್ನೆಲ್ಲ ಲೆಕ್ಕಿಸದೆ ಬದುಕಿದರು. ಆದರ್ಶ ದಂಪತಿಗಳು ಅನ್ನಿಸಿಕೊಂಡರು.

ಸುಮಾರು ಐದು ದಶಕಗಳಿಂದ ಚದುರಂಗ ಅವರು ಸೃಜನಶೀಲ ಲೇಖಕರಾಗಿ ಕೆಲಸಮಾಡುತ್ತ ಬಂದಿದ್ದಾರೆ. ಈ ಅವಧಿಯಲ್ಲಿ ಕನ್ನಡ ಸಾರಸ್ವತ ಲೋಕದಲ್ಲಿ

ವಿವಿಧ ಚಳುವಳಿಗಳು ಬಂದು ಹೋಗಿವೆ. ಕಾಲಕಾಲಕ್ಕೆ ಬಂದ ಈ ಎಲ್ಲ ಪಂಥಗಳ ಉತ್ತಮ ಅಂಶಗಳನ್ನು ಅವರು ತಮ್ಮ ಕೃತಿಗಳಲ್ಲಿ ಅಳವಡಿಸಿಕೊಂಡಿದ್ದಾರೆ. ತಮಗೆ ಒಗ್ಗದ ವಿಚಾರಗಳನ್ನು ಬದಿಗೆ ಸರಿಸಿದ್ದಾರೆ. ಹೀಗಾಗಿ ನಲವತ್ತಾರು ವರ್ಷಗಳ ಹಿಂದೆ ಪ್ರಕಟವಾದ ಅವರ ಮೊದಲ ಕಥಾ ಸಂಕಲನ 'ಸ್ವಪ್ನ ಸುಂದರಿ' ಯಿಂದ ಇತ್ತೀಚಿನ 'ಇಲಿಬೋನು' ಅಸಂಗತ ನಾಟಕದವರೆಗೆ, ಅದೇ ರೀತಿ 'ವೈಶಾಖ' ಕಾದಂಬರಿಯವರೆಗೆ ಅವರ ಸಾಹಿತ್ಯ ತನ್ನ ಕುಡಿಗಳನ್ನು ಚಾಚಿದೆ; ಎಲ್ಲೆಯನ್ನು ವಿಸ್ತರಿಸಿಕೊಂಡಿದೆ.

ಚದುರಂಗರ ಮುಖ್ಯ ಕೃತಿಗಳಿಗೆ ಗ್ರಾಮೀಣ ಬದುಕೇ ಕೇಂದ್ರ, ಜೀವಾಳ, ಪ್ರಧಾನ ದ್ರವ್ಯ. ಅಲ್ಲಿನ ವಿಶಿಷ್ಟ ಜನಜೀವನ, ವ್ಯಕ್ತಿಗಳು, ಸಂಬಂಧ–ಸಿಕ್ಕುಗಳು, ಗ್ರಾಮ್ಯ ಜೀವನದ ಸಂಕೀರ್ಣತೆ, ಆಡು ಮಾತಿನ ಸೊಗಡು ಎಲ್ಲವೂ ಅವರ ಕೃತಿಗಳಲ್ಲಿ ಒಡಮೂಡಿವೆ.

ಚಲನಚಿತ್ರರಂಗದಲ್ಲಿಯೂ ಚದುರಂಗರು ಗಮನಾರ್ಹ ಸಾಧನೆ ಮಾಡಿದ್ದಾರೆ. ಕಾನೂನು ವಿದ್ಯಾಭ್ಯಾಸಕ್ಕೆಂದು ಪುಣೆಗೆ ಹೋದ ಅವರು ಅಲ್ಲಿ ಚಲನಚಿತ್ರದ ಬಗೆಗೆ ತಮಗಿದ್ದ ಆಸಕ್ತಿಯನ್ನು ಹೆಚ್ಚಿಸಿಕೊಂಡರು. ಚಲನಚಿತ್ರ ಕುರಿತಂತೆ ಲೇಖನಗಳನ್ನು ಬರೆದರು. ಚಿತ್ರಗಳಿಗೆ ಸಂಭಾಷಣೆ ಬರೆದರು. ೧೯೬೮ರಲ್ಲಿ ತಮ್ಮ ಕಾದಂಬರಿ 'ಸರ್ವಮಂಗಳ'ವನ್ನು ತಾವೇ ನಿರ್ದೇಶಿಸಿ ಅದಕ್ಕೆ ಚಿತ್ರಕಥೆ, ಸಂಭಾಷಣೆ ಬರೆದರು. ಈ ಚಿತ್ರಕ್ಕೆ ರಾಜ್ಯ ಪ್ರಶಸ್ತಿ ಬಂದಿತು. ರಾಷ್ಟ್ರಕವಿ ಕುವೆಂಪು, ಕರ್ನಾಟಕದ ಪ್ರಸಿದ್ಧ ನೃತ್ಯ ಕಲಾವಿದೆ ವೆಂಕಟಲಕ್ಷ್ಮಮ್ಮ ಅವರನ್ನು ಕುರಿತು ಚದುರಂಗರು ಮಾಡಿದ ಸಾಕ್ಷ್ಯ ಚಿತ್ರಗಳು ಇಂದಿಗೂ ಮಹತ್ವಪೂರ್ಣ ದಾಖಲೆಗಳಾಗಿ ಉಳಿದಿವೆ.

ಚದುರಂಗರ ಜೀವನ ಪ್ರೀತಿ ಅದಮ್ಯ, ಅನನ್ಯ. ಉದಾರ ಮಾನವತೆಯ ನೆಲೆಯಲ್ಲಿ ನಿಂತು ಅವರು ಜಗತ್ತನ್ನು ಪ್ರೀತಿಯಿಂದ ನೋಡಿದ್ದಾರೆ. ಅವರ ಈ ಪ್ರೀತಿ ಅವರ ಎಲ್ಲ ಕೃತಿಗಳಲ್ಲೂ ನಿರಂತರವಾಗಿ ಹರಿದುಬಂದಿದೆ. ಚದುರಂಗರು ಒಳ್ಳೆಯ ಮಾತುಗಾರರು. ಅವರ ಮಾತೆಂದರೆ ಕಥೆಯೇ! ಅಷ್ಟು ಆಪ್ತವಾಗಿ, ಮೃದುವಾಗಿ, ಮನದಾಳಕ್ಕೆ ಇಳಿದು ಬೆಚ್ಚಗೆ, ನವುರಾಗಿ ಮಾತಾಡುತ್ತಾರೆ. ಬಹಳ ಬೇಗ ಆತ್ಮೀಯವಾಗಿಬಿಡುತ್ತಾರೆ.

ಚದುರಂಗರ ಸಾಹಿತ್ಯಕ ಸಾಧನೆಯನ್ನು ಗುರುತಿಸಿ ಮೈಸೂರು ವಿಶ್ವವಿದ್ಯಾಲಯ ಅವರಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಕನ್ನಡ ಸಾಹಿತ್ಯ ಪರಿಷತ್ತು ಅವರನ್ನು ಅರುವತ್ತಮೂರನೇ ಅಖಿಲಭಾರತ

ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ತನ್ನ ಗೌರವ ಸಲ್ಲಿಸಿದೆ. ಅವರ ಸಾಹಿತ್ಯಕ ಸೇವೆಗಾಗಿ ಸಂದಿರುವ ಅಭಿನಂದನೆ, ಪುರಸ್ಕಾರಗಳು ಅನೇಕ.

ಇದೇ ಫೆಬ್ರವರಿ ೧೧ ರಂದು ಮಂಡ್ಯದಲ್ಲಿ ನಡೆದ ಅಖಿಲಭಾರತ ಅರುವತ್ತ ಮೂರನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಅವರು ಮಾಡಿದ ಭಾಷಣ ಅವಿಸ್ಮರಣೀಯ. ಅದರಲ್ಲಿ ಅವರು ಕನ್ನಡ ಪರ ಕಾಳಜಿಯನ್ನು ವ್ಯಕ್ತಪಡಿಸು ವುದರ ಜೊತೆಗೆ 'ಮನುಷ್ಯನೆಲೆ'ಯಿಂದ ಆಡಿದ ಮಾತುಗಳು ರಾಷ್ಟ್ರದ ಪ್ರಸ್ತುತ ಪರಿಸ್ಥಿತಿಯ ದೃಷ್ಟಿಯಿಂದ ತುಂಬ ಅಪೂರ್ವವೂ, ಮನನೀಯವೂ ಆಗಿವೆ.

ಸಾಹಿತ್ಯದ ಉದ್ದೇಶ ಏನು ಎಂಬ ಚರ್ಚೆಗೆ ಅವರು ತಮ್ಮ ನೇರ, ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. "ಸಾಹಿತ್ಯದ ಪರಮೋದ್ದೇಶ, ಪರಮ ಪ್ರಯೋಜನ 'ರಸಾನುಭವ' ಎಂದು ನಾನು ನಂಬಿದವನಲ್ಲ. ಮನುಷ್ಯ ಪ್ರೀತಿ ಯನ್ನು ಉಳಿಸದ ಬೆಳೆಸದ ಸಾಹಿತಿ ಹಾಗೂ ಸಾಹಿತ್ಯ ಇದ್ದರೇನು, ಇಲ್ಲದಿದ್ದ ರೇನು?" ಎನ್ನುವ ಚದುರಂಗರ ಪ್ರಶ್ನೆ ಎಂದಿಗಿಂತಲೂ ಇಂದು ಹೆಚ್ಚು ಪ್ರಸ್ತುತ. ಅದೇ ರೀತಿ, "ಜಡ್ಡುಗಟ್ಟಿ ಅಮಾನವೀಯವಾಗಿ ನಡೆದುಕೊಳ್ಳು ವುದು ವ್ಯವಸ್ಥೆಯ ಹುಟ್ಟುಗುಣ. ಅಂಥ ವ್ಯವಸ್ಥೆಯ ವಿರುದ್ಧ ಬಂಡೇಳುವುದು ಸಾಹಿತಿಗೂ ಅಷ್ಟೇ ಅನಿವಾರ್ಯ" ಎಂಬ ಅವರ ಮಾತು ಬರಹಗಾರರ ಹಾಗೂ ಕಲಾವಿದರ ಸಾಮಾಜಿಕ ಬದ್ಧತೆಯ ಬಗ್ಗೆ ಹೆಚ್ಚು ಕೇಳಿಬರುತ್ತಿರುವ ಈ ದಿನ ಗಳಲ್ಲಿ ಬಹಳ ಸಕಾಲಿಕವಾದ ನುಡಿಯಾಗಿದೆ.

"ಮನುಷ್ಯ ಪ್ರೀತಿಯನ್ನು ಉಳಿಸುವುದಕ್ಕಾಗಿಯೋ, ಬೆಳೆಸುವುದಕ್ಕಾಗಿಯೋ ಸಾಹಿತಿಯಾದವನು ಎಂದೂ ಎಲ್ಲ ಕಾಲದಲ್ಲೂ ವ್ಯವಸ್ಥೆಯ ವಿರೋಧಿ ಯಾಗಿಯೇ ಉಳಿಯುತ್ತಾನೆ" ಎಂದಿದ್ದಾರೆ. ತಮ್ಮ ಈ ಮಾತಿಗೆ ಅನುಗುಣ ವಾಗಿಯೇ ಅವರು ದೀನದಲಿತರ ದನಿಯಾಗಿ ಹುಟ್ಟಿಕೊಂಡ ದಲಿತ-ಬಂಡಾಯ ಸಾಹಿತ್ಯ ನೀಡಿರುವ "ಇಲ್ಲಿಯ ತನಕ ಯಾರೂ ಕಂಡರಿಯದ ತಣ್ಣನೆಯ ರೋಷದ ಹೊಚ್ಚ ಹೊಸ ಸಂವೇದನೆಯನ್ನು, ಸಾಮರ್ಥ್ಯವನ್ನು" ಗುರುತಿಸಿ ದ್ದಾರೆ.

ಸಾಕ್ಷರತೆ ಹಾಗೂ ಕನ್ನಡ ಶಾಲೆಗಳ ಬಗೆಗೆ ಹೆಚ್ಚು ಕಳಕಳಿಯನ್ನು ವ್ಯಕ್ತ ಪಡಿಸುವ ಅವರು ತಮ್ಮ ಕವಿತೆಯಲ್ಲಿ ಸತ್ಯ, ಪ್ರೇಮ ಹಾಗೂ ಸಹ ಬಾಳ್ವೆಯ

ಗೂಡುಗಳನ್ನು ಅರಸುತ್ತ, ಅಲೆಯುತ್ತಿರುವ ಮೂರು ಹಕ್ಕಿಗಳನ್ನು ನೆನೆದಿದ್ದಾರೆ.

ಶ್ರೀರಾಮಚಂದ್ರನ
ಅಯೋಧ್ಯೆಯ
ಮೂರು ಗುಮ್ಮಟಗಳು
ಉರುಳುರುಳಿ ಬಿದ್ದಾಗ
ನೊಂದು ನೆಲೆ ತಪ್ಪಿದ
ಮೂರು ಹಕ್ಕಿಗಳು

ಭಾರತದ ಉದ್ದಗಲ
ಚಿಂಪ ಚಿಂಪಗುಡುತ್ತ
ಸತ್ಯ ಪ್ರೇಮ
ಸಹಬಾಳ್ವೆಯ
ಗೂಡುಗಳಿಗಾಗಿ
ಅರಸುತ್ತಿವೆ

ಮಾನವನ
ಎದೆ ಮಂದಿರದ
ಬೆಚ್ಚನೆಯ
ಆಪ್ತ ಆಸರೆಗಾಗಿ
ತವಕದಲಿ ಹಂಬಲಿಸಿ
ಕಾಯುತ್ತಿವೆ

ಎಂದು ಹೇಳಿ ನೆಲೆ ತಪ್ಪಿರುವ ಮೂಲ ಮೌಲ್ಯಗಳಾದ ಅಂತಃಕರಣ, ಪ್ರೀತಿ, ಸೌಹಾರ್ದ, ಸಹಬಾಳ್ವೆ, ಸಹಿಷ್ಣುತೆ, ವಿವೇಕ ಇವುಗಳನ್ನು ಕಾಪಾಡಿಕೊಳ್ಳಲು ಕರೆ ನೀಡಿದ್ದಾರೆ.

ಹೀಗೆ ಬಹುಮುಖ ವ್ಯಕ್ತಿತ್ವದ, ಪ್ರೀತಿ ತುಂಬಿದ ಕೋಮಲ ಹೃದಯದ, ಮಾನವೀಯತೆಯ ಪ್ರತೀಕವಾದ ಚದುರಂಗರು ನೂರು ಕಾಲ ಬಾಳಲಿ ಎಂಬುದು ಕನ್ನಡಿಗರೆಲ್ಲರ ಅಪೇಕ್ಷೆ, ಹಾರೈಕೆ.

ಲತಾರಾಜಶೇಖರ್

ಇವಾಂಜೆಲಿಸ್ಟ ಟಾರೆಸಿಲಿ ಮತ್ತು ಆಟೋವಾನ್ ಗರ್ಕೆ

ಗ್ರೀಕ್ ಚಿಂತಕರು ಪ್ರಕೃತಿ ನಿರ್ದ್ರವ್ಯ ಪ್ರದೇಶವನ್ನು ಸಹಿಸುವುದಿಲ್ಲ, ನಿರ್ದ್ರವ್ಯ ಪ್ರದೇಶವನ್ನು ಕಂಡರೆ ಪ್ರಕೃತಿಗೆ 'ನಡುಕ' ಎಂದು ಅವರು ನಂಬಿದ್ದರು. ನಿರ್ದ್ರವ್ಯ ಪ್ರದೇಶವನ್ನು ನಿರ್ಮಿಸಲು ಪ್ರಯತ್ನಪಟ್ಟರೆ ಆ ಪ್ರದೇಶವ ಹತ್ತಿರವಿರುವ ಪದಾರ್ಥ, ನೀರು ಅಥವಾ ಗಾಳಿ, ಅದನ್ನು ಕೂಡಲೆ ಆಕ್ರಮಿಸಿಕೊಳ್ಳುತ್ತದೆ ಎಂಬುದು ಇದರ ತಾತ್ಪರ್ಯ. ನಿರ್ದ್ರವ್ಯ ಪ್ರದೇಶದ ಬಗ್ಗೆ ಪ್ರಕೃತಿಗಿರುವ ಅಸಹನೆಯ ಉಪಯೋಗ ಪಡೆದು ಹಿಂದಿನವರು ಪಂಪುಗಳನ್ನು ನಿರ್ಮಿಸಿ ೩೦ ಅಡಿಗಳಷ್ಟು ಎತ್ತರಕ್ಕೆ ನೀರನ್ನು ಎತ್ತುತ್ತಿದ್ದರು. ನಿರ್ದ್ರವ್ಯ ಪ್ರದೇಶಕ್ಕೆ ಪ್ರಕೃತಿ ತೋರಿಸುವ ನಿರೋಧಕ್ಕೆ ಒಂದು ಮಿತಿ ಇರಬಹುದೆಂದು ಅವರು ಆಲೋಚಿಸಲಿಲ್ಲ. ಈ ಬಗ್ಗೆ ಆಲೋಚನೆ ಮಾಡಿದ ಗೆಲಿಲಿಯೊ ಈ ನಿರೋಧಕ್ಕೆ ಒಂದು ಮಿತಿ ಇರಬಹುದು ಎಂದಷ್ಟೆ ಹೇಳಿದ. ಅವನು ಪ್ರಯೋಗಗಳನ್ನು ಮಾಡಲಿಲ್ಲ. ಅವನ ಕಾಲದಲ್ಲಿ ಜನರು ೪೦ ಅಡಿಗಳಷ್ಟು ಎತ್ತರಕ್ಕೆ ನೀರನ್ನು ಎತ್ತಲು ಪ್ರಯತ್ನಪಟ್ಟಿದ್ದರು, ಅದು ಆಗಿರಲಿಲ್ಲ. ಅವರು ಎಷ್ಟು ಶ್ರಮಪಟ್ಟು ಪಂಪು ಮಾಡಿದರೂ ನೀರು ೪೦ ಅಡಿಗಳಷ್ಟು ಎತ್ತರಕ್ಕೆ ಏರಲಿಲ್ಲ. ನಿರ್ದ್ರವ್ಯ ಪ್ರದೇಶದ ಬಗೆಗಿನ ಪ್ರಕೃತಿಯ 'ನಡುಕ' ಇಷ್ಟಕ್ಕೆ ಶಮನವಾದಂತೆ ತೋರಿತು. "ಇದು ಹೀಗೇಕೆ?" ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿದ್ದು ಇವಾಂಜೆಲಿಸ್ಟ ಟಾರೆಸಿಲಿಯ ಸಂಶೋಧನೆಯಲ್ಲಿ.

ಇಟಲಿ ದೇಶದ ಫಾನ್ಜ ಎಂಬಲ್ಲಿ ೧೬೦೮ರ ಅಕ್ಟೋಬರ್ ೧೫ರಂದು ಟಾರೆಸಿಲಿ ಜನಿಸಿದ. ಗೆಲಿಲಿಯೊ ಪ್ರಕಟಿಸಿದ್ದ 'ಸಂವಾದಗಳನ್ನು' ಓದಿ ಅವನು ತುಂಬ ಪ್ರಭಾವಿತನಾಗಿ ಚಲನೆಯ ಬಗ್ಗೆ ಒಂದು ಗ್ರಂಥವನ್ನು ರಚಿಸಿದ. ಇದು ಗೆಲಿಲಿಯೋನ ಮೆಚ್ಚಿಗೆ ಪಡೆಯಿತು. ೧೬೪೧ರ ಅಕ್ಟೋಬರಿನಲ್ಲಿ ಟಾರೆಸಿಲಿ ಫ್ಲಾರೆನ್ಸ್ ನಗರಕ್ಕೆ ಪ್ರಯಾಣ ಬೆಳೆಸಿ ಗೆಲಿಲಿಯೋನನ್ನು ಭೇಟಿಯಾದ. ಗೆಲಿಲಿಯೊ ಮರಣಶಯ್ಯೆಯಲ್ಲಿದ್ದ. ಟಾರೆಸಿಲಿ ಫ್ಲಾರೆನ್ಸಿನಲ್ಲೇ ಉಳಿದು ಗೆಲಿಲಿಯೊ ಹೇಳಿದ ಸಂಘಟ್ಟನೆ ವಿಚಾರಗಳನ್ನು ಬರೆದುಕೊಂಡ. ಗೆಲಿಲಿಯೊ ಮರಣ ಹೊಂದಿದ ಮೇಲೆ ಇವನನ್ನು ಟಸ್ಕನಿ ಡ್ಯೂಕನಾದ ಎರಡನೆ ಫರ್ಡಿನಾಂಡ್ ಫ್ಲಾರೆನ್ಸ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನನ್ನಾಗಿ ನೇಮಿಸಿದ.

ನಿರ್ದ್ರವ್ಯ ಪ್ರದೇಶದ ಬಗ್ಗೆ ಪ್ರಕೃತಿಗಿರುವ 'ನಡುಕ'ವನ್ನು ಕುರಿತು ಟಾರೆಸಿಲಿ ಹೀಗೆ ಯೋಚಿಸಿದ. ನೀರನ್ನು ೪೦ ಅಡಿಗಳಷ್ಟು ಎತ್ತರಕ್ಕೆ ಹೀರಿ

ಕೊಳ್ಳುವಷ್ಟಕ್ಕೆ ಪ್ರಕೃತಿಯು 'ನಡುಕ' ಮಿತಿಗೊಂಡರೆ ನೀರಿಗಿಂತ ೧೪ ಪಟ್ಟು ಹೆಚ್ಚು ಭಾರವಾಗಿರುವ ಪಾದರಸವನ್ನು ಅದು ೩೬ ಅಡಿಗಳಿಗಿಂತ ಹೆಚ್ಚು ಎತ್ತರಕ್ಕೆ ಹೀರಿಕೊಳ್ಳಲಾರದು. ಈ ತರ್ಕವನ್ನು ಅನುಸರಿಸಿ ಅವನು ಒಂದು ಕಡೆ ಮುಚ್ಚಿರುವ ೩ ಅಡಿ ಉದ್ದದ ಗಾಜಿನ ನಳಿಕೆಗೆ ಪಾದರಸವನ್ನು ತುಂಬಿ, ತೆರೆದಿರುವ ಬಾಯನ್ನು ಬೆರಳಿನಿಂದ ಮುಚ್ಚಿ, ಆ ಬಾಯಿ ಒಂದು ತಟ್ಟೆಯಲ್ಲಿರುವ ಪಾದರಸದ ಒಳಗಿರುವಂತೆ ಮಾಡಿ ತೆರೆಯಬೇಕೆಂದು ಯೋಚಿಸಿದ. ಅಷ್ಟು ಉದ್ದದ ಗಾಜಿನ ನಳಿಕೆ ಅವನಿಗೆ ಸಿಕ್ಕಲಿಲ್ಲ. ಈ ಪ್ರಯೋಗವನ್ನು ೧೬೪೩ ರಲ್ಲಿ ಅವನ ಒಬ್ಬ ಸ್ನೇಹಿತ ನಡೆಸಿದ. ಆಗ ನಳಿಕೆಯ ಮೇಲ್ಭಾಗದ ೬ ಇಂಚುಗಳಷ್ಟು ಜಾಗ ಖಾಲಿ ಇದ್ದದ್ದು ಕಾಣಿಸಿತು. ಇದು ನಿರ್ವಾತ ಪ್ರದೇಶ; ಮೊಟ್ಟ ಮೊದಲಿಗೆ ಕೃತಕವಾಗಿ ನಿರ್ಮಿತವಾದ ನಿರ್ವಾತ ಪ್ರದೇಶ! ಇದಕ್ಕೆ ಟಾರಿಸಿಲಿ ನಿರ್ವಾತ ಎಂದು ಹೆಸರು. ಈ ವಿಚಾರ ಪ್ಯಾರಿಸ್ ಮತ್ತು ರೋಮಿನಲ್ಲಿದ್ದ ವಿಜ್ಞಾನಿಗಳಿಗೆ ತಿಳಿಯಲು ಬಹಳ ಕಾಲ ಬೇಕಾಗಲಿಲ್ಲ. ರೋಮಿನಲ್ಲಿದ್ದ ಸ್ನೇಹಿತರಿಗೆ ಟಾರಿಸಿಲಿಯೆ ಬರೆದು ತಿಳಿಸಿದ, ಈ ವಿಚಾರ ತಿಳಿದಾಗ ಫ್ರೆಂಚ್ ವಿಜ್ಞಾನಿ ಪ್ಯಾಸ್ಕಲ್, "ನಿರ್ವಾತ ಪ್ರದೇಶ ಪ್ರಕೃತಿಯಲ್ಲಿರುವುದು ಅಸಾಧ್ಯವಾದುದೇನೂ ಅಲ್ಲ: ಪ್ರಕೃತಿ ಅದನ್ನು ದಿಗಿಲುಗೊಂಡು ವಿರೋಧಿಸುವುದೂ ಇಲ್ಲ", ಎಂದು ಪ್ರತಿಕ್ರಿಯೆ ವ್ಯಕ್ತಪಡಿಸಿದ.

ಟಾರಿಸಿಲಿಯ ಪ್ರಯೋಗಕ್ಕೆ ತಕ್ಕ ವಿವರಣೆ ಕೊಡುವುದು ಅವಶ್ಯವಾಯಿತು. ಈ ನಿಟ್ಟಿನಲ್ಲಿ ಇಟಲಿ ಮತ್ತು ಫ್ರಾನ್ಸ್ ದೇಶಗಳಲ್ಲಿ ನಡೆದ ಚರ್ಚೆ ಮತ್ತು ಪ್ರಯೋಗಗಳು ಈ ರೀತಿ ಇವೆ: U ಆಕಾರದ ಒಂದು ನಳಿಕೆಗೆ ನೀರನ್ನು ಸುರಿದರೆ ಅದು ಎರಡು ಕಡೆಯೂ ಒಂದೇ ಎತ್ತರ ಇರುವಂತೆ ನಿಲ್ಲುತ್ತದೆ. ಇಂಥ ನಳಿಕೆಯ ಒಂದು ಭಾಗಕ್ಕೆ ಹಗುರವಾದ ದ್ರವವನ್ನೂ, ಇನ್ನೊಂದು ಭಾಗಕ್ಕೆ ಭಾರವಾದ ದ್ರವವನ್ನೂ ಸುರಿದರೆ ಭಾರವಾದ ದ್ರವದ ಸ್ತಂಭ ಕಡಿಮೆ ಎತ್ತರವನ್ನೂ, ಹಗುರವಾದ ದ್ರವದ ಸ್ತಂಭ ಹೆಚ್ಚು ಎತ್ತರವನ್ನೂ ಹೊಂದಿರುವಂತೆ ದ್ರವದ ಸ್ತಂಭಗಳು ಸಮಸ್ಥಿತಿಯನ್ನು ಪಡೆಯುತ್ತವೆ. ಅಂದರೆ ಒಂದು ಸ್ತಂಭದ ಭಾರ ಇನ್ನೊಂದು ಸ್ತಂಭದ ಭಾರವನ್ನು ಸರಿದೂಗಿಸುತ್ತದೆ. ಎರಡೂ ಸ್ತಂಭಗಳ ಮೇಲೆ ಗಾಳಿ ಇದೆ. ಅಂದರೆ ಈ ಎರಡು ಸ್ತಂಭಗಳ ಮೇಲಿರುವ ಗಾಳಿಯ ತೂಕ ಸಮಸಮ ಎಂದ ಹಾಗಾಯಿತು. ಗಾಳಿಗೆ ತೂಕವಿರುವ ವಿಚಾರ ಹಿಂದಿನ ಗ್ರೀಕ್ ಚಿಂತಕರಿಗೂ ತಿಳಿದಿತ್ತು.

U–ನಳಿಕೆಯ ಒಂದು ಬಾಹುವಿನಲ್ಲಿ ಬರಿಗಾಳಿ ಮತ್ತು ಇನ್ನೊಂದು ಬಾಹುವಿನಲ್ಲಿ ಯಾವುದಾದರು ದ್ರವ ಇರುವಂತೆ ಏರ್ಪಾಡು ಮಾಡಿದರೆ ವಾಯು

ಮಂಡಲದ ಎತ್ತರಕ್ಕಿರುವ ಗಾಳಿಯ ಸ್ತಂಭ ದ್ರವದ ಸ್ತಂಭವನ್ನು ಹಿಡಿದು ನಿಲ್ಲಿಸುತ್ತದೆ. ಟಾರೆಸಿಲಿ ಪ್ರಯೋಗದಲ್ಲಿ ನಳಿಕೆಯಲ್ಲಿ ಉಳಿಯುವ ಪಾದರಸದ ತೂಕವನ್ನು ವಾಯುಮಂಡಲದಲ್ಲಿರುವ ಗಾಳಿಯ ತೂಕ ಸರಿದೂಗಿಸುತ್ತದೆ ಎಂಬ ವಿಚಾರ ಇದರಿಂದ ಸ್ಪಷ್ಟವಾಗುತ್ತದೆ. ಇದೆ ಬಾರಮಾಪಕದ ಮೂಲ ತತ್ವ, ವಾಯುಮಂಡಲದಲ್ಲಿರುವ ಗಾಳಿಯ ತೂಕ ನಳಿಕೆಯಲ್ಲಿರುವ ಪಾದರಸದ ಸ್ತಂಭವನ್ನು ಎತ್ತಿಹಿಡಿದರೆ ಬಾರಮಾಪಕವನ್ನು ಪರ್ವತದ ಮೇಲಕ್ಕೆ ತೆಗೆದು ಕೊಂಡು ಹೋದರೆ ಪಾದರಸ ಸ್ತಂಭದ ಕಡಮೆಯಾಗಬೇಕೆಂದು ಪ್ಯಾಸ್ಕಲ್ ಯೋಚಿಸಿದ. ಪ್ರಯೋಗಗಳಿಂದ ಇದು ಶ್ರುತಪಟ್ಟಿತು. ವಾಯುಮಂಡಲದಲ್ಲಿ ಬದಲಾವಣೆಗಳಾದರೂ (ಸಾಂದ್ರತೆಯಲ್ಲಿ ವ್ಯತ್ಯಾಸವಾದರೆ) ಬಾರಮಾಪಕ ಅದನ್ನು ಪ್ರತಿಬಿಂಬಿಸಬೇಕು. ಚಂಡಮಾರುತ ಸಮೀಪಿಸುತ್ತಿರುವಾಗ ಬಾರ ಮಾಪಕದ ಎತ್ತರ ಕಡಿಮೆಯಾಗುವುದು ಈಗ ಎಲ್ಲರಿಗೂ ತಿಳಿದ ವಿಚಾರ. ಇದನ್ನು ಟಾರೆಸಿಲಿ ಗ್ರಹಿಸಿದ್ದ.

ಟಾರೆಸಿಲಿ ದ್ರವಚಲನೆ, ಕ್ಷೇಪದ ಸಿದ್ಧಾಂತ, ಎರಡು ರಾಟೆಗಳ ಮೇಲೆ ಹಾಯ್ದಿರುವ ದಾರಕ್ಕೆ ಕಟ್ಟಿದ ಎರಡು ಕಾಯಗಳ ಚಲನೆ ಮುಂತಾದ ವಿಚಾರ ಗಳನ್ನು ಕುರಿತ ಲೇಖನಗಳನ್ನು ಪ್ರಕಟಿಸಿದ. ಅವನು ೧೬೪೭ರ ಅಕ್ಟೋಬರ್ ತಿಂಗಳ ೨೫ ರಂದು ಮೃತನಾದ. ಆಗ ಅವನಿಗೆ ಕೇವಲ ೩೯ ವರ್ಷ ವಯಸ್ಸಾಗಿತ್ತು.

ಗಾಳಿಯನ್ನು ಸಂಕುಚಿಸಿದರೆ ಅದು ಹಿಗ್ಗಲು ಪ್ರಯತ್ನಿಸುತ್ತದೆ. ಅದನ್ನು ಸಂಕುಚಿಸಿ ಯಾವುದಾದರು ವಸ್ತುವನ್ನು ಅದು ದಬ್ಬುವಂತೆ ಮಾಡಬಹುದು. ಇದೇ ಗುಣವನ್ನು ಅವಲಂಬಿಸಿ ಒಂದು ಪಾತ್ರೆಯಿಂದ ಗಾಳಿಯನ್ನು ಹೊರಕ್ಕೂ ತೆಗೆಯಬಹುದು. ಆಟೊವಾನ್ ಗರ್ಕೆಗೆ ಈ ವಿಚಾರ ತಿಳಿದಿತ್ತು. ಆದರೆ ನಿರ್ವಾತ ಪ್ರದೇಶವನ್ನು ನಿರ್ಮಿಸಲು ಅವನು ಮೊದಲು ಬೇರೆ ಮಾರ್ಗವನ್ನು ಹಿಡಿದ.

ಆಟೊವಾನ್ ಗರ್ಕೆ ೧೬೦೨ರ ನವಂಬರ್ ೨೦ ರಂದು ಪ್ರಷ್ಯ ದೇಶದ ಮ್ಯಾಗ್ಡಿಬರ್ಗಿನಲ್ಲಿ ಜನಿಸಿದ. ಅವನು ಲೀಡನ್ ವಿಶ್ವವಿದ್ಯಾಲಯದಲ್ಲಿ ನ್ಯಾಯಶಾಸ್ತ್ರ ಮತ್ತು ಗಣಿತದ ವ್ಯಾಸಂಗ ಮಾಡಿದ. ನಂತರ ಅವನು ಫ್ರಾನ್ಸ್ ಮತ್ತು ಇಂಗ್ಲೆಂಡ್ ದೇಶಗಳಿಗೆ ಭೇಟಿ ಕೊಟ್ಟು ಬಂದ. ೧೬೩೬ ರಲ್ಲಿ ಅವನು ಎರ್‌ಫರ್ಟಿನ ಮುಖ್ಯ ಇಂಜಿನಿಯರ್ ಆಗಿ ನೇಮಕಗೊಂಡ. ೧೬೪೬ರಲ್ಲಿ ಅವನು ಮ್ಯಾಗ್ಡಿಬರ್ಗ್ ನಗರದ ಮೇಯರ್ ಆಗಿ ಚುನಾಯಿತನಾದ.

ಬಿಡುವಿನ ಸಮಯದಲ್ಲಿ ಅವನು ಸಂಶೋಧನೆಗಳನ್ನು ನಡೆಸುತ್ತಿದ್ದ. ಗೆಲಿಲಿಯೊ, ಪ್ಯಾಸ್ಕಲ್ ಮತ್ತು ಟಾರೆಸಿಲಿ ಅವರ ಸಂಶೋಧನೆಗಳಿಂದ ಅವನು ಪ್ರಭಾವಿತನಾಗಿದ್ದ.

ಗರ್ಕೆಗೆ ಆಕಾಶಕಾಯಗಳ ಚಲನೆಯ ಬಗ್ಗೆ ಆಸಕ್ತಿ ಬೆಳೆದಿತ್ತು. ಅವುಗಳ ಚಲನೆಯಲ್ಲಿ ಅನೇಕ ಶತಮಾನಗಳಿಂದ ಯಾವ ಬದಲಾವಣೆಯೂ ಆಗಿಲ್ಲವೆಂಬುದು ಅವನಿಗೆ ತಿಳಿದಿತ್ತು. ಈ ಪರಿಸ್ಥಿತಿ ನಿಜವಾಗಿದ್ದರೆ ಆ ಕಾಯಗಳು ಚಲಿಸುವ ಪ್ರದೇಶದಲ್ಲಿ ಗಾಳಿ ಇರಬಾರದು ಎಂದು ಅವನು ಆಲೋಚಿಸಿದ. ಆ ಪ್ರದೇಶದಲ್ಲಿ ಗಾಳಿಯಿದ್ದರೆ ಆ ಕಾಯಗಳ ವೇಗ ಕ್ರಮವಾಗಿ ಕಡಿಮೆಯಾಗಬೇಕಾಗಿತ್ತು ಎಂಬುದು ಅವನ ತರ್ಕ. ಆದುದರಿಂದ ನಿರ್ವಾತ ಪ್ರದೇಶವನ್ನು ನಿರ್ಮಿಸಲು ಅವನು ಮುಂದಾದ.

ಅವನು ಒಂದು ಪೀಪಾಯಿಗೆ ನೀರು ತುಂಬಿ, ಅದರ ಒಳಗೆ ಗಾಳಿ ಹೋಗದಂತೆ ಒಂದು ನೀರು ಪಂಪನ್ನು ಅಳವಡಿಸಿ ಪೀಪಾಯಿಂದ ನೀರನ್ನು ಹೊರಗೆ ತೆಗೆದ. ಇದು ಪ್ರಯಾಸದ ಕೆಲಸವೇ ಆಗಿತ್ತು. ನೀರನ್ನು ಹೊರಗೆ ತೆಗೆದರೆ ಪೀಪಾಯಿಯ ಒಳಗೆ ನಿರ್ವಾತ ಪ್ರದೇಶ ನಿರ್ಮಾಣವಾಗುತ್ತದೆ ಎಂಬುದು ಅವನ ಹುಂಚಿಕೆಯಾಗಿತ್ತು. ಪೀಪಾಯಿಂದ ನೀರು ಹೊರಗೆ ಬರುತ್ತಿದ್ದಂತೆ ಅವನಿಗೆ ಗುಳುಗುಳು ಶಬ್ದ ಕೇಳಿಸಿತು. ಪಟ್ಟಿಗಳ ನಡುವಿಂದ ಗಾಳಿ ಪೀಪಾಯಿಯನ್ನು ಪ್ರವೇಶಿಸುತ್ತಿದ್ದುದರಿಂದ ಆ ಶಬ್ದ ಉಂಟಾಗುತ್ತಿತ್ತು. ಇದನ್ನು ತಡೆಯಲು ಅವನು ಪೀಪಾಯಿಯೊಳಗೆ ಪೀಪಾಯಿಯನ್ನಿಟ್ಟು ಮತ್ತೆ ಪ್ರಯತ್ನ ಮಾಡಿದ. ಏನೇ ಆದರು ಪೀಪಾಯಲ್ಲಿ ನಿರ್ವಾತ ಪ್ರದೇಶವನ್ನು ನಿರ್ಮಾಣ ಮಾಡಲು ಅವನಿಂದ ಆಗಲಿಲ್ಲ. ಮರದ ಪೀಪಾಯಲ್ಲಿ ನಿರ್ವಾತ ಪ್ರದೇಶವನ್ನು ನಿರ್ಮಾಣ ಮಾಡುವುದು ಕಷ್ಟ ಎಂದು ಪೀಪಾಯನ್ನು ಬಿಟ್ಟ. ಎರಡನೆ ಹೆಜ್ಜೆಯಾಗಿ ಅವನು ತಾಮ್ರದ ತಗಡಿಂದ ಮಾಡಿದ ಟೊಳ್ಳು ಚೆಂಡಿನಲ್ಲಿ ನಿರ್ವಾತ ಪ್ರದೇಶವನ್ನು ನಿರ್ಮಿಸಿದ. ಹೊರಗಿನ ಗಾಳಿಯ ಒತ್ತಡದಿಂದ ಚೆಂಡು ದೊಡ್ಡ ಸದ್ದಿನೊಂದಿಗೆ ಅಪ್ಪಚ್ಚಿಯಾಯಿತು.

ನಂತರ ಅವನು ದಪ್ಪ ಗೋಡೆಯ ಒಂದು ಗೋಳವನ್ನು ನಿರ್ಮಿಸಿದ. ಆ ಗೋಳದಲ್ಲಿ ಎರಡು ಭಾಗಗಳಿದ್ದು ಒಂದಕ್ಕೊಂದು ಅರಗು ಮತ್ತು ಟರ್ಪಂಟೈನಿನಲ್ಲಿ ಅದ್ದಿದ ಚರ್ಮದ ಉಂಗುರದ ನೆರವಿನಿಂದ ಸೇರಿಕೊಂಡಿದ್ದವು. ಗಾಳಿಯನ್ನು ಹೊರಗೆ ತೆಗೆದಂತೆ ಅರ್ಧಗೋಳಗಳು ಒಂದನ್ನೊಂದು ಭದ್ರವಾಗಿ ಹಿಡಿದುಕೊಂಡವು. ಮನುಷ್ಯರಿಂದ ಅವುಗಳನ್ನು ಬೇರ್ಪಡಿಸಲು ಆಗಲಿಲ್ಲ.

ಗರ್ಕೆ ಈ ಪ್ರಯೋಗವನ್ನು ಮತ್ತೆ ಮತ್ತೆ ಜನರ ಮುಂದೆ ಮಾಡಿ ತೋರಿಸಿದ. ತಿರುಪು ಬಿರಡೆಯನ್ನು ತೆರೆದಾಗ ಗಾಳಿ ಒಳಗೆ ಹೋಗುತ್ತಿತ್ತು. ಗೋಳ ಭಾಗಗಳು ಸುಲಭವಾಗಿ ಬೇರೆ ಬೇರೆಯಾಗುತ್ತಿದ್ದವು. ಒಂದು ಸಾರಿ ಗರ್ಕೆ ಈ ಪ್ರಯೋಗವನ್ನು ಜರ್ಮನಿಯ ಚಕ್ರವರ್ತಿ ಮತ್ತು ಅವನ ಪಾರ್ಲಿಮೆಂಟ್ ಸದಸ್ಯರ ಮುಂದೆ ಪ್ರದರ್ಶಿಸಿದ. ಗೋಳದಲ್ಲಿ ನಿರ್ವಾತ ಪ್ರದೇಶ ನಿರ್ಮಾಣ ಗೊಂಡ ಮೇಲೆ ಅವರ ಎರಡು ಭಾಗಗಳನ್ನು ಬೇರ್ಪಡಿಸಲು ೧೬ ಕುದುರೆಗಳು ಬೇಕಾಯಿತು.

ಗರ್ಕೆ ಗಾಳಿಪಂಪಿನ ನಿರ್ಮಾಪಕ. ಅವನು ಅದರ ಕಾರ್ಯ ಸಾಮರ್ಥ್ಯವನ್ನು ಉತ್ತಮಪಡಿಸಿದ. ಪಂಪು ಪಾತ್ರೆಯಲ್ಲಿರುವ ಗಾಳಿಯ ೨೯/೩೦ ಭಾಗವನ್ನು ಹೊರತೆಗೆಯುವಷ್ಟು ಶಕ್ತವಾಗಿತ್ತು. ಅದನ್ನು ನಿರ್ವಾತ ಪ್ರದೇಶದಲ್ಲಿ ಬೆಳಕಿನಂತೆ ಶಬ್ದವೂ ಪ್ರವಹಿಸಬಲ್ಲದೆ ಎಂಬುದನ್ನು ಪರೀಕ್ಷಿಸಲು ಉಪಯೋಗಿಸಿದ. ಒಂದು ಗಾಜಿನ ಪಾತ್ರೆಯಲ್ಲಿ ಒಂದು ಗಡಿಯಾರವನ್ನಿಟ್ಟು ಗಾಳಿಯನ್ನು ಪಾತ್ರೆಯಿಂದ ಹೊರತೆಗೆಯಲು ಪ್ರಾರಂಭಿಸಿದ. ಗಾಳಿ ಹೆಚ್ಚು ಹೆಚ್ಚು ಹೊರಗೆ ಬಂದಂತೆ ಗಡಿಯಾರದ ಸದ್ದು ಕೇಳಿಸುವುದು ಕ್ಷೀಣವಾಗುತ್ತ ಬಂದು ಕೊನೆಗೆ ಕೇಳಿಸುವುದು ನಿಂತೇಹೋಯಿತು. ಶಬ್ದ ಪ್ರಸಾರಕ್ಕೆ ಗಾಳಿಯ ಮಾಧ್ಯಮ ಅವಶ್ಯ ಎಂಬುದು ಈ ಪ್ರಯೋಗದಿಂದ ಸಿದ್ಧವಾಯಿತು. ಬೆಳಕಿನ ಪ್ರಸಾರಕ್ಕೆ ಯಾವ ಮಾಧ್ಯಮದ ಅವಶ್ಯಕತೆಯೂ ಇಲ್ಲ ಎಂಬುದನ್ನು ಟಾರೆಸಿಲಿ ಸಿದ್ಧಪಡಿಸಿದ್ದ.

ಖಗೋಳಶಾಸ್ತ್ರದಲ್ಲಿ ಗರ್ಕೆ ನಡೆಸಿದ ಸಂಶೋಧನೆಗಳೂ ಮಹತ್ವವಾದವು. ಅವನು ಧೂಮಕೇತುಗಳು ನಿಗದಿತ ಅವಧಿಯಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ ಎಂದು ತೋರಿಸಿದ. ಗೆಲಿಲಿಯೋನ ಅಭಿಪ್ರಾಯಕ್ಕೆ ಇದು ವಿರುದ್ಧವಾದುದೆಂಬುದನ್ನು ಇಲ್ಲಿ ನಾವು ಗಮನಿಸಬೇಕು.

೧೬೮೧ರಲ್ಲಿ ಗರ್ಕೆ ಕೆಲಸದಿಂದ ನಿವೃತ್ತನಾಗಿ ಹ್ಯಾಂಬರ್ಗಿಗೆ ಹೋಗಿ ನೆಲಸಿದ. ಅಲ್ಲಿ ಅವನು ೧೬೮೬ರ ಮೇ ತಿಂಗಳ ೧೧ರಂದು ನಿಧನ ಹೊಂದಿದ.

ಎರಡು ಸಾವಿರ ವರ್ಷಗಳ ಕಾಲ ಭದ್ರವಾಗಿ ನಿಂತಿದ್ದ ಅರಿಸ್ಟಾಟಲಿನ ಅಭಿಪ್ರಾಯಗಳು ಛಿದ್ರವಾಗಲು ಎರಡು ಶತಮಾನಗಳು ಬೇಕಾಯಿತು. ನಂಬಿಕೆಗಳ ಆಧಾರದ ಮೇಲೆ ಯಾವ ಸಿದ್ಧಾಂತವೂ ನಿಲ್ಲಲಾರದೆಂಬುದನ್ನು ಕೋಪರ್ನಿಕಸ್, ಕೆಪ್ಲರ್, ಗೆಲಿಲಿಯೋ, ಟಾರೆಸಿಲಿ ಮತ್ತು ಗರ್ಕೆ ಹಂತಹಂತವಾಗಿ ಸಿದ್ಧಪಡಿಸಿದರು. ಸುಸಂಗತ ಲಿಕ್ಕಾಚಾರಗಳ ಅಂತರಂಗವನ್ನು ಪ್ರವೇಶಿಸಿ ಸತ್ಯದರ್ಶನ

ಮಾಡುವುದು ಕಷ್ಟ. ಆದರೆ ಕಣ್ಣಿನಿಂದ ನೋಡಿದ್ದನ್ನು ನಂಬುವುದು ಸುಲಭ. ಮೊಂಡುತನದಿಂದ ಕಣ್ಣಿಗೆ ಬಟ್ಟೆ ಬಿಗಿದುಕೊಂಡು ಎಷ್ಟು ಕಾಲ ಇರಬಹುದು. ಸತ್ಯವನ್ನು, ಅವು ಎಷ್ಟೇ ಪುರಾತನವಾದುವಾಗಿರಲಿ, ಶಾಸ್ತ್ರಗಳು ಬಚ್ಚಿಡಲು ಸಾಧ್ಯವಿಲ್ಲ. ಇದನ್ನು ಗೆಲಿಲಿಯೋ ಸಿದ್ಧಪಡಿಸಿದ. ಎಲ್ಲ ಸಮಸ್ಯೆಗಳಿಗೂ ಉತ್ತರ ಹಿಂದಿನ ಶಾಸ್ತ್ರಗ್ರಂಥಗಳಲ್ಲಿ ಸಿಕ್ಕುತ್ತದೆ ಎಂಬ ಮತಗುರುಗಳ ಮಾತು ಅರ್ಥ ಕಳೆದುಕೊಂಡಿತು. ವಿಜ್ಞಾನಿಗಳ ಒಲವು ಹೆಚ್ಚು ಹೆಚ್ಚು ಪ್ರಯೋಗಗಳ ಕಡೆಗೆ ತಿರುಗಿತು. ಮತೀಯ ನಿರ್ಬಂಧ ಹೆಚ್ಚು ಇದ್ದ ಕಡೆ ವಿಜ್ಞಾನದ ಬೆಳವಣಿಗೆ ಕುಂಠಿತವಾಯಿತು. ಪ್ರಯೋಗಗಳು ಸಿದ್ಧಾಂತಗಳ ಮೇಲೂ ಸಿದ್ಧಾಂತಗಳು ಪ್ರಯೋಗಗಳ ಮೇಲೂ ಆಧಾರಗೊಂಡು ಬೆಳವಣಿಗೆ ನಡೆಯಿತು. ಈ ಬೆಳವಣಿಗೆಯ ಒಂದು ಘಟ್ಟ ಕೋಪರ್ನಿಕಸ್‌ನಿಂದ ಹಿಡಿದು ಗರ್ಕೆಯವರೆಗೆ ವ್ಯಾಪಿಸುತ್ತದೆ. ಈ ವ್ಯಾಪ್ತಿಯಲ್ಲಿ ಹಿಂದಿನ ಅಭಿಪ್ರಾಯಗಳು ಕಡಿದು ಬಿದ್ದವು. ಹೊಸ ಶಕೆ ಐಸಾಕ್ ನ್ಯೂಟನ್ನನ ಪ್ರವೇಶದೊಂದಿಗೆ ಆರಂಭವಾಗುತ್ತದೆ.

ಡಾ॥ ಎಚ್. ಸಂಜೀವಯ್ಯ



ಅಭ್ಯಾಸಬಲದಿಂದ ನಾವು ಏನನ್ನೂ ಸಾಧಿಸಬಹುದು. ಅಭ್ಯಾಸದಿಂದ ವಿಷವನ್ನು ಅಮೃತದಂತೆ ಕುಡಿಯಬಹುದು, ಅಪ್ರಿಯ ವಸ್ತುಗಳನ್ನು ಪ್ರಿಯವಾಗಿ ಕಾಣಬಹುದು.

—ಈಸೋಪ

ಸ್ವತಂತ್ರ ಜೀವನಕ್ಕೆ ಕಣ್ಣು ಮುಖ್ಯ

‘ಕಂಗಳ್ಯಾತಕೋ ಕಸ್ತೂರಿರಂಗನ ನೋಡದ’ ಎಂದು ದಾಸರು ನುಡಿದದ್ದು ನಿಜ. ಆದರೆ ಆದರ್ಶದ ಔನ್ನತ್ಯದಲ್ಲಿ ರಾರಾಜಿಸುತ್ತಿರುವ ಆ ‘ಕಸ್ತೂರಿರಂಗ’ನನ್ನು ನೋಡುವ ಮೊದಲು ವಾಸ್ತವಿಕ ಜಗತ್ತನ್ನು ನೋಡಿ ಅರಿಯುವುದು ಖುದ್ದು ವ್ಯಕ್ತಿಯ ಬದುಕಿನ ದೃಷ್ಟಿಯಿಂದ ಅಗತ್ಯ—ಅನಿವಾರ್ಯ ಕೂಡ. ಈ ಅತಿ-ಉಪಯುಕ್ತ ಅಂಗ ಅತಿ ಹಾಗೂ ಅಶಿಸ್ತಿನ ಬಳಕೆಯಿಂದ ಹಾಳಾಗುವುದು ವಿರಳವಲ್ಲ. ಸಕಾಲದಲ್ಲಿ ಎಚ್ಚರಿಕೆ ವಹಿಸುವುದು ಅಂಧತ್ವ ನಿವಾರಣೆಗೆ ವ್ಯಕ್ತಿ ಇಡಬಹುದಾದ ಮೊದಲ ಚಿಕಿತ್ಸಕ ಹೆಜ್ಜೆ.

ಸ್ವತಂತ್ರ ಜೀವನ ನಡೆಸಲು ಮಾನವನಿಗೆ ದೃಷ್ಟಿಯೂ ಅತಿ ಮುಖ್ಯ ಜ್ಞಾನೇಂದ್ರಿಯ. ಈ ದೃಷ್ಟಿಯನ್ನು ಕಣ್ಣಿಗೆ ಬರುವ ತೊಂದರೆಗಳನ್ನು ತಡೆಗಟ್ಟುವುದರ ಮೂಲಕ ಅಥವಾ ನೇತ್ರವೈದ್ಯರನ್ನು ಶೀಘ್ರವಾಗಿ ಸಂಧಿಸಿ ಸಲಹೆ ಪಡೆಯುವುದರ ಮೂಲಕ ದೃಷ್ಟಿಯನ್ನು ಕಾಪಾಡಿಕೊಳ್ಳಬಹುದು.

ನಮ್ಮ ದೃಷ್ಟಿ ಮೂರು ಮೀಟರ್‌ಗಳಿಗಿಂತ ಕಡಿಮೆ ಇದ್ದರೆ ಅದಕ್ಕೆ ‘ಅಂಧತ್ವ’ ಎಂದು ವಿಶ್ವ ಆರೋಗ್ಯ ಸಂಸ್ಥೆಯೂ ಪರಿಗಣಿಸಿದೆ. ಅಂಧರು ನೂರಕ್ಕೆ ಅರವತ್ತರಷ್ಟು ಜನ ಅರವತ್ತು ವರ್ಷ ಮೇಲ್ಪಟ್ಟವರಾಗಿದ್ದಾರೆ.

ಅಂಧತ್ವಕ್ಕೆ ಅತಿ ಮುಖ್ಯ ಕಾರಣಗಳೆಂದರೆ ಕಣ್ಣಿನ ಪೊರೆ, ಕಣ್ಣಿನ ಒತ್ತಡ ಹೆಚ್ಚಾಗಿ ಬರಬಹುದಾದ ಖಾಯಿಲೆಗಳು, ದೃಷ್ಟಿದೋಷಗಳು, ಹುಟ್ಟಿನಿಂದಲೇ ಬರಬಹುದಾದ ತೊಂದರೆಗಳು ಎಂದೆಲ್ಲ ಪಟ್ಟಿ ಮಾಡಬಹುದು. ಈ ತೊಂದರೆಗಳನ್ನು ವಯಸ್ಸಿಗೆ ಅನುಗುಣವಾಗಿ ಹೋಲಿಸಿ ನೋಡಿದರೆ ಹೀಗಿವೆ :

೧) ಎಳೆಯ ಮಕ್ಕಳಿಗೆ : ಹುಟ್ಟಿನಿಂದಲೇ ಬರುವ ತೊಂದರೆಗಳು, ಕಣ್ಣಿನ ಪೊರೆ, ನರಗಳ ದೌರ್ಬಲ್ಯ, ಕಣ್ಣಿನ ಒತ್ತಡ ಹೆಚ್ಚಾಗಿ ಬರುವ ತೊಂದರೆ.

೨) ಶಾಲೆಗೆ ಹೋಗುವ ವಯಸ್ಸಿನಲ್ಲಿ : ಸುಮಾರು ೬ ವಯಸ್ಸಿನಿಂದ ೧೫ ವಯಸ್ಸಿನವರೆಗೆ ಜೀವಸತ್ವ ‘ಎ’ ತೊಂದರೆಯಿಂದ ಜನಿಸಿದಾಗ ಬರುವ ತೊಂದರೆಗಳು ಉಲ್ಬಣಗೊಂಡು ಅಂಧಕಾರವಾಗುವುದು. ಹೊರಗಿನ ವಸ್ತುಗಳಿಂದ ಕಣ್ಣಿಗೆ ಆಗುವ ಹಾನಿಯಿಂದಲೂ ಕಣ್ಣು ಕಾಣದಂತೆ ಆಗುವುದು ಸಹಜ.

೩) ೨೦ ರಿಂದ ೫೦ ವರ್ಷದಲ್ಲಿ : ದೃಷ್ಟಿದೋಷಗಳು ಮತ್ತು ನರಗಳ ದೌರ್ಬಲ್ಯದಿಂದ ಕಣ್ಣು ಕಾಣದಂತೆ ಆಗಬಹುದು.

೪) ೫೦ ರಿಂದ ೭೦ ವರ್ಷದವರೆಗೆ: ಕಣ್ಣಿನ ಪೊರೆ, ಕಣ್ಣಿನ ಒತ್ತಡ ಹೆಚ್ಚಾಗಿ ಬರುವ ತೊಂದರೆಗಳು ಹಾಗೂ ಸಕ್ಕರೆ ಖಾಯಿಲೆಯಿಂದ ಕಣ್ಣಿಗೆ ಆಗುವ ಹಾನಿ.

೫) ೭೦ ವರ್ಷ ಮೇಲ್ಪಟ್ಟು: ಕಣ್ಣಿನ ಪೊರೆ ಮತ್ತು ಅಕ್ಷಿಪಟದ ತೊಂದರೆಗಳು.

ಮೇಲೆ ಹೇಳಿದ ತೊಂದರೆಗಳು ಕಾಣಿಸಿಕೊಳ್ಳುತ್ತಿದ್ದಂತೆ ತುರ್ತಾಗಿ ನೇತ್ರ ವೈದ್ಯರನ್ನು ಸಂಪರ್ಕಿಸಿ ಅವರ ಸಲಹೆ ಪಡೆಯುವುದು ಉತ್ತಮ.

೧) 'ಎ' ಜೀವಸತ್ವದ ಕೊರತೆಯಿಂದಾಗುವ ಲಕ್ಷಣಗಳು: 'ಎ' ಜೀವಸತ್ವ ಕಾರ್ನಿಯ ಮತ್ತು ಕಂಜೆಕ್ಟೈವ್ ಬೆಳೆಯುವುದಕ್ಕೆ ಬಹು ಮುಖ್ಯವಾದ ಆಹಾರಾಂಶ.

ಆಹಾರದಲ್ಲಿ ಜೀವಸತ್ವ 'ಎ' ಕಡಿಮೆ ಇದ್ದಾಗ ಅಥವಾ ಅದು ಸರಿಯಾಗಿ ರಕ್ತನಾಳಗಳಿಗೆ ಹೋಗದಿದ್ದಾಗ ಈ ತೊಂದರೆ ಉಂಟಾಗುತ್ತದೆ. ಆಗ ಕಣ್ಣಿನ ಬಿಳಿಯ ಭಾಗದಲ್ಲಿ (ಕಂಜೆಕ್ಟೈವ್) ಬಿಳಿ ಚುಕ್ಕೆಗಳು ಕಾಣಿಸಿಕೊಳ್ಳತೊಡಗುತ್ತವೆ. ಅನಂತರ ಕಾರ್ನಿಯದಲ್ಲಿಯ ಹೊಳಪು ಕಡಿಮೆಯಾಗಿ ನೀರು ತುಂಬಿಕೊಂಡು ಬಿಳಿಯ ಬಣ್ಣ ತಳೆಯುತ್ತದೆ. ಮುಂದೆ ಕುರುಡಾಗುತ್ತದೆ. ಇದನ್ನು ತಡೆಯಲು ಉಪಯೋಗಿಸಬೇಕಾದ ಜೀವಸತ್ವ 'ಎ' ಇರುವ ಆಹಾರ ಪದಾರ್ಥಗಳೆಂದರೆ ಕ್ಯಾರೆಟ್, ಹಸಿರುತರಕಾರಿ, ಮೊಸರು, ತುಪ್ಪ, ಹಾಲು, ಪರಂಗಿಹಣ್ಣು, ಮೊಟ್ಟೆ ಹಾಗೂ ಮೀನು.

೨) ದೃಷ್ಟಿದೋಷ: ಮುಖ್ಯವಾಗಿ ಸಮೀಪ ದೃಷ್ಟಿ ಮತ್ತು ದೂರ ದೃಷ್ಟಿ ದೋಷಗಳಿರುವುದನ್ನು ನಾವು ಗಮನಿಸಬಹುದು.

ಸಮೀಪದೃಷ್ಟಿ: ಮಕ್ಕಳು ಸಾಮಾನ್ಯವಾಗಿ ಕಣ್ಣು ಚಿಕ್ಕದುಮಾಡಿ ದೂರದ ವಸ್ತುಗಳನ್ನು ನೋಡುತ್ತಾರೆ. ಇದನ್ನು ಬೇಗ ಸರಿಪಡಿಸದಿದ್ದರೆ ಮಾಲಗಣ್ಣು ಸಹ ಆಗಬಹುದು. ತುಂಬಾ ದೋಷವಿದ್ದಲ್ಲಿ ಅಕ್ಷಿಪಟದ ತೊಂದರೆಯೂ ಬರಬಹುದು.

ಹತ್ತಿರದ ವಸ್ತುಗಳು ಸಾಮಾನ್ಯವಾಗಿ ೩೯–೪೦ನೇ ವಯಸ್ಸಿನಲ್ಲಿ ಕಾಣಲು ಕಷ್ಟವಾಗಬಹುದು. ಇದನ್ನೂ ಸಹ ಕನ್ನಡಕ ಹಾಕಿಕೊಳ್ಳುವುದರ ಮೂಲಕ ಸರಿಪಡಿಸಬಹುದು.

೩) ಪೊರೆ: ಸಾಮಾನ್ಯವಾಗಿ ೫೫–೬೦ನೇ ವಯಸ್ಸಿನಲ್ಲಿ ಕಣ್ಣಿನಲ್ಲಿ ಪೊರೆ ಕಾಣಿಸಿಕೊಳ್ಳುತ್ತದೆ. ಇದು ಸಕ್ಕರೆ ಖಾಯಿಲೆ ಇದ್ದವರಿಗೆ ಮುಂಚಿತವಾಗಿಯೂ ಬರುವ ಸಾಧ್ಯತೆವುಂಟು. ಕಣ್ಣಿನ ಮುಂದೆ ಚುಕ್ಕಿಗಳ ರೀತಿಯಲ್ಲಿ ಪ್ರಾರಂಭವಾಗಿ ಬೆಳೆಯುತ್ತ ಮಬ್ಬಾಗುತ್ತದೆ. ವಸ್ತುಗಳು ಎರಡೆರಡು ಕಾಣುತ್ತವೆ. ಇದರಿಂದ ದೃಷ್ಟಿ ಮಂದವಾಗುತ್ತದೆ. ಈ ತೊಂದರೆ ಹುಟ್ಟಿನಿಂದಲೇ ಬರಲೂಬಹುದು. ಹೇಗೆಂದರೆ ತಾಯಿ ಗರ್ಭಿಣಿಯಾಗಿರುವಾಗ ಪೌಷ್ಠಿಕ ಆಹಾರದ ಕೊರತೆಯಿಂದಲೂ, ರುಬೆಲ್ಲ ವೈರಸ್ ಎಂಬ ಕ್ರಿಮಿಯಿಂದ ಅಂಟುವುದೂ ಉಂಟು. ಆನ್ನುಜನಕದ ಕೊರತೆಯಿಂದಲೂ ಬರಬಹುದು. ಕಣ್ಣಿಗೆ ಏಟು ಬಿದ್ದಾಗಲೂ ಅಥವಾ ಬಹಳ ಚಿಕ್ಕವಯಸ್ಸಿನಲ್ಲೂ ಕೂಡ ಬರಬಹುದು. ಇದರ ನಿವಾರಣೆಗೆ ಕಣ್ಣಿನ ಶಸ್ತ್ರಚಿಕಿತ್ಸೆ ಮಾಡಿಸುವುದರ ಮೂಲಕ ಮಸೂರವನ್ನು ತೆಗೆಯಬೇಕಾಗುತ್ತದೆ. ಸಾಧ್ಯವಾದರೆ ಕಣ್ಣಿನ ಒಳಗೆ ಅಥವಾ ಹೊರಗೆ ಬದಲಿ ಮಸೂರದ ಜೋಡಣೆ ಮಾಡಬೇಕಾಗುತ್ತದೆ. (ಎಕ್ಸ್‌ಕಿರಣ, ವಿದ್ಯುದ್ದೀಪ, ಗಾಜು ತಯಾರಿಕೆ ಜೊತೆ ಕೆಲಸ ಮಾಡುವವರಿಗೆ ಈ ತೊಂದರೆ ಉಂಟಾಗುತ್ತದೆ.)

೪) ಕಣ್ಣಿನ ಒತ್ತಡ: ಸಾಮಾನ್ಯವಾಗಿ ಇದು ೧೦–೨೧ ಮಿ. ಮೀ. ಪಾದರಸ ಒತ್ತಡ ಹೆಚ್ಚಾದಲ್ಲಿ ನಿಧಾನವಾಗಿ ದೃಷ್ಟಿ ನರವನ್ನು ನಾಶಮಾಡುತ್ತದೆ. ೫೦ ವರ್ಷ ವಯಸ್ಸಿನ ನಂತರ ಸ್ವಲ್ಪವೂ ತಿಳಿಯದೆ ನೋವಿಲ್ಲದಂತೆ ಬರುವ ತೊಂದರೆ. ಆದುದರಿಂದ ೪೫ ವರ್ಷ ಆಗುತ್ತಿದ್ದಂತೆಯೆ ಪ್ರತಿ ೬ ತಿಂಗಳಿಗೊಮ್ಮೆ ಕಣ್ಣಿನ ತಪಾಸಣೆಯನ್ನು ತಪ್ಪದೆ ಮಾಡಿಸಿಕೊಳ್ಳುವುದು ಉತ್ತಮ. ಕಣ್ಣಿಗೆ ಪೆಟ್ಟು ಬಿದ್ದಾಗಲೂ ಒತ್ತಡ ಜಾಸ್ತಿಯಾಗುವ ಸಾಧ್ಯತೆಗಳಿವೆ. ಇದೇ ರೀತಿ ಬಣ್ಣದ ದೂರದರ್ಶನವನ್ನು ತೀರಾ ಹತ್ತಿರದಿಂದ ನೋಡುವುದು, ಕತ್ತಲಲ್ಲಿ ಕುಳಿತು ಟಿ. ವಿ. ಯನ್ನು ವೀಕ್ಷಿಸುವುದರಿಂದಲೂ, ಬದಲಾಗುವ ಬಣ್ಣಗಳು ಕಣ್ಣಿನ ಮಾಂಸಖಂಡಗಳು ಹಾಗೂ ಕಣ್ಣಿನ ಒತ್ತಡದ ಮೇಲೂ ಪರಿಣಾಮ ಬೀರಿ ದೃಷ್ಟಿದೋಷಕ್ಕೆ ಮತ್ತು ತಲೆನೋವಿಗೆ ಕಾರಣವಾಗುತ್ತದೆ.

೫) ನರಗಳ ದೌರ್ಬಲ್ಯ: ಇದು ಯಾವ ವಯಸ್ಸಿನಲ್ಲಾದರೂ ಬರುವ ಸಾಧ್ಯತೆವುಂಟು. ಹೆಚ್ಚಾಗಿ ಮದ್ಯಪಾನ ಮತ್ತು ಧೂಮಪಾನ ಸೇವನೆಯಿಂದ ಬರುತ್ತದೆ. ಎ ಮತ್ತು ಬಿ ಜೀವಸತ್ವಗಳು ಕೊರತೆಯಾದಾಗ ಅಲ್ಲದೆ ಗರ್ಭಾವಸ್ಥೆಯಲ್ಲಿ ಸ್ತ್ರೀಯರಿಗೆ ಬರುವ ರಕ್ತದ ಒತ್ತಡವೂ ಕಣ್ಣಿನ ನರಗಳ

ಮೇಲೆ ಪರಿಣಾಮ ಬೀರುವುದರಿಂದಲೂ ತಾಯಿ ಹಾಗೂ ಗರ್ಭದಲ್ಲಿರುವ ಮಗುವಿನ ಕಣ್ಣಿನ ಮೇಲೆ ಹಾಗೂ ಪ್ರಾಣದ ಹಾನಿ ಆಗುವ ಸಾಧ್ಯತೆಯೂ ಇದೆ. ಇದರಿಂದ ತುರ್ತಾಗಿ ವೈದ್ಯರ ಸಲಹೆಯನ್ನು ಮುಖ್ಯವಾಗಿ ಪಡೆಯಬೇಕು.

೬) ಮಾಲಗಣ್ಣು : ಇದು ಜನಿಸಿದ ಕೆಲವೇ ತಿಂಗಳುಗಳಲ್ಲೂ ಕಾಣಿಸಿಕೊಳ್ಳಬಹುದು. ದೃಷ್ಟಿ ಬೇರೆ ಕಾರಣಗಳಿಂದ ಕಡಿಮೆಯಾದಲ್ಲಿ (ಪೊರೆ ಅಥವಾ ನರಗಳ ದೌರ್ಬಲ್ಯ) ಸ್ವಲ್ಪ ವಯಸ್ಸಾದ ಮೇಲೂ (೨೦–೩೦ ವರ್ಷದಲ್ಲಿ) ಕಾಣಿಸಿಕೊಳ್ಳಬಹುದು.

ಮಕ್ಕಳಿಗೆ ೯–೧೧ ವರ್ಷದ ಒಳಗೆ ಚಿಕಿತ್ಸೆ ಕೊಡಿಸಿದರೆ ಬಹಳ ಮಟ್ಟಿಗೆ ಗುಣವಾಗುವ ಸಾಧ್ಯತೆ ಇದೆ.

ಈ ಮೇಲೆ ಹೇಳಿದ ಕಣ್ಣಿನ ತೊಂದರೆಗಳಲ್ಲದೆ ಮನುಷ್ಯನ ದೇಹದ ಇತರೆ ಖಾಯಿಲೆಗಳಿಂದಲೂ ಕಣ್ಣಿನ ಮೇಲೆ ಬಹಳವಾಗಿ ಪರಿಣಾಮ ಬೀರಬಹುದು. ಅವುಗಳೆಂದರೆ ೧) ಕುಷ್ಠರೋಗ ೨) ಸಿಡುಬು ೩) ಸಕ್ಕರೆಖಾಯಿಲೆ ೪) ರಕ್ತದ ಒತ್ತಡ ೫) ಕ್ಷಯರೋಗ ೬) ಲೈಂಗಿಕ ಖಾಯಿಲೆ (ಏಡ್ಸ್ ಕೂಡ) ೭) ಥೈರಾಯಿಡ್ ಕಾಯಿಲೆಗಳು ಹಾಗೂ ಕ್ಯಾನ್ಸರ್‌ನಿಂದಲೂ ಕಣ್ಣಿನ ತೊಂದರೆಯಾಗುವ ಸಾಧ್ಯತೆ ಇದೆ.

ಸ್ವಲ್ಪ ದೃಷ್ಟಿ ಮಂಜಾಗುವುದು, ಕಣ್ಣು ಕೆಂಪಾಗುವುದು, ತಲೆನೋವು, ಕಣ್ಣುನೋವು, ಕಣ್ಣಿನ ಹೊಂದಾಣಿಕೆ ಇಲ್ಲದಿರುವುದು ಇದ್ದಲ್ಲಿ ತಕ್ಷಣ ವೈದ್ಯರ ಸಲಹೆ ಪಡೆದು ಗುಣಪಡಿಸಿಕೊಳ್ಳುವುದು ಒಳ್ಳೆಯದು.

ಡಾ॥ ವಿ. ಮುರಳೀಧರ

ಜಗತ್ತಿನಲ್ಲಿ ನಾನೇ ಬಲ್ಲವನೆಂದೆನಿಸಿಕೊಂಡರೆ ಅಂಥವನು ಎಲ್ಲರಕ್ಕಿಂತ ಕೀಳಾಗುವನು. ನನಗಿಂತ ಕಿರಿಯರಿಲ್ಲ, ನನಗಿಂತ ಅಜ್ಞಾನಿಗಳಿಲ್ಲ ಎಂದು ತಿಳಿದುಕೊಂಡವನೇ ನಿಜವಾದ ಮಾನವನು.

—ಸ್ವಾಮಿ ದಯಾನಂದ

ಸಹಜ, ಸಾವಯವ, ಆಧುನಿಕ ಕೃಷಿ ಎಂದರೇನು?

ಕೃಷಿ ಮೂಲದಿಂದ ಬಂದಿರುವ ಎಂಜಿನಿಯರ್-ಕೃಷಿಕ ಈ ಅನುಭವ ಮಾಲೆಯ ಲೇಖಕ. ಸಹಜ, ಸಾವಯವ ಮತ್ತು ಆಧುನಿಕ ಎಂಬ ಮೂರು ಬಗೆಯ ಕೃಷಿ ವಿಧಾನಗಳಲ್ಲಿಯೂ ಪ್ರಯೋಗ ಮಾಡಿ ಫಲಿತಾಂಶ ಪಡೆದು ಯುಕ್ತ ತೀರ್ಮಾನಗಳಿಗೆ ಬಂದಿರುವವರು. ಮೈಸೂರು ನಗರ ಸಮೀಪದ ಕಳವಾಡಿ ಗ್ರಾಮದಲ್ಲಿರುವ ಇವರ ಜಮೀನು ಈ ತೀರ್ಮಾನಗಳಿಗೆ ಪ್ರತ್ಯಕ್ಷ ಭಾಷ್ಯವಾಗಿ ನಳನಳಿಸುತ್ತದೆ.

ಆಹಾರ, ವಿಹಾರ, ನಿದ್ರೆ, ಮೈಥುನಗಳಲ್ಲಿ ಯಾವುದೇ ಪ್ರಾಣಿ, ಪಕ್ಷಿಗಳಿಗಿಂತ ಮನುಷ್ಯ ಭಿನ್ನನಲ್ಲ. ಹಾಗಾದರೆ ನಮ್ಮ ನಡುವೆ ಇರುವ ಭಿನ್ನತೆಯಾದರೂ ಏನು? ಯೋಚಿಸುವ, ಯೋಜಿಸುವ ಶಕ್ತಿ ಅಥವಾ ನಾಳಿನ ಚಿಂತೆ. ಅಶನ, ವಸನ, ವಸತಿ ನಮ್ಮ ಪ್ರಥಮ ಆವಶ್ಯಕತೆಗಳು. ಇವು ಒದಗಿದಾಗ ಇತರ ಪ್ರಾಣಿಗಳು ಸುಖನಿದ್ರೆ ಮಾಡುತ್ತವೆ. ಆದರೆ ನಾವು ಹಾಗಲ್ಲ—ಆದಿಮಾನವ ಹಂತದಿಂದ ಬೆಳೆಯುತ್ತ ಬೆಳೆಯುತ್ತ ಯಂತ್ರಮಾನವರಾಗಿದ್ದೇವೆ. ನಮ್ಮ ಅಶನ, ವಸನ, ವಸತಿಗಳ ಪರಿಕಲ್ಪನೆಯೇ ಇಂದು ಬೇರೆಯಾಗಿದೆ. ಹೊಟ್ಟೆ ತುಂಬಿಸುವ, ದೇಹ ಪೋಷಿಸುವ ಅಶನಕ್ಕೆ ಇಂದು ಅರ್ಥವಿಲ್ಲ. ಹೊಟ್ಟೆ ಕೆಡಿಸುವ ದೇಹ ಬೆಳೆಸುವ ಹೊಸ ರುಚಿಗಳು ನಮಗೆ ಬೇಕು. ನೈಸರ್ಗಿಕ ವೈಪರೀತ್ಯಗಳ ವಿರುದ್ಧ ಮೈಕಾಯಲು, ಕಾಮಾಸಕ್ತಿಗಳಿಂದ ಮನಕಾಯಲು ಇಂದು ವಸನ ಅಲ್ಲ—ಅವನ್ನು ಪ್ರಚೋದಿಸಲು ವಸನ ವಾಣಿಜ್ಯ ಬೆಳೆದಿದೆ. ವಸತಿಗಳೂ ಹಾಗೆ, ಸುಖ ನಿದ್ರೆಗಾಗಿ ಅಲ್ಲ. ನಿದ್ರೆ ಕೆಡಿಸುವ ಭೋಗವಸ್ತುಗಳ ದಾಸ್ತಾನು ಮಳಿಗೆಗಳಾಗಿವೆ.

ಅಶನ, ವಸನ, ವಸತಿಗಳು ನಮಗೆ (ಪ್ರಾಣಿಗಳಿಗೂ ಕೂಡ) ಪ್ರಕೃತಿಯ ಕೊಡುಗೆ. ಈ ಕೊಡುಗೆಗೆ ನಮ್ಮ ಬುದ್ಧಿವಂತಿಕೆಯನ್ನು ಬೆರೆಸಿ ಯಂತ್ರ, ತಂತ್ರ ವಿದ್ಯೆಗಳನ್ನು ರೂಢಿಸಿಕೊಂಡೆವು. ಶಕ್ತಿಮೂಲಗಳನ್ನು ಆವಿಷ್ಕರಿಸಿ ಕೆಲಸಗಳನ್ನು ಸುಲಭಗೊಳಿಸಿಕೊಂಡೆವು. ಪರಿಣಾಮವಾಗಿ ಪ್ರಾಥಮಿಕಾವಶ್ಯಕತೆಗಳ ಪರಿಕಲ್ಪನೆ ಬದಲಾಗುತ್ತ ಆಗುತ್ತ ಇಂದಿನ ಹಂತಕ್ಕೆ ಬಂತು. ಕಬ್ಬು ರುಚಿ. ಅನುಸಿಹಿ, ದೇಹಪೋಷಕ ಶರ್ಕರ ಪಿಷ್ಟದ ಗಣಿ. ಅದನ್ನು ಬೆಲ್ಲಮಾಡುವಷ್ಟರವರೆಗಿನ ನಮ್ಮ ಬುದ್ಧಿವಂತಿಕೆ ಸಹ್ಯ. ಆದರೆ ಅದನ್ನು ಕೆಟ್ಟ ರಾಸಾಯನಿಕಗಳ ಸಹಯೋಗದಲ್ಲಿ, ಅನಂತ ಶಕ್ತಿಯ ಅಪವ್ಯಯದಲ್ಲಿ, ಸಕ್ಕರೆಯನ್ನಾಗಿ ಮಾರ್ಪಡಿಸಿದಾಗ ದಿನಕ್ಕೆ ಮೂರು ಚಮಚ ಸಾಕಾಗುವಲ್ಲಿ ಮೂವತ್ತು ಚಮಚ

ಬೇಕಾಗುವ ಮಟ್ಟಕ್ಕೆ ನಾವು ತಲಪಿದೆವು. ಸಾಂಕ್ರಾಮಿಕ ರೋಗಗಳಿಂದ ನಮ್ಮ ಬಂಧು ಬಾಂಧವರನ್ನು ಕಾಪಾಡಿ ಕುಟುಂಬದ ಸಮೃದ್ಧಿ ಕಾಯಬೇಕಾದ ವೈದ್ಯ ವಿದ್ಯೆ, ಅತಿಸಕ್ಕರೆಯು, (ಅತಿ ಆಹಾರದ) ದೋಷ ಪರಿಹಾರಕ್ಕಾಗಿ ಅತಿಬಳಕೆ ಯಾಗಬೇಕಾಗಿಬಂತು. ಕೃಷ್ಣಾಜಿನ, ನಾರುಮಡಿಗಳಿಂದ, ಹತ್ತಿ, ಉಣ್ಣೆ, ರೇಷ್ಮೆ ಬಟ್ಟೆಗಳಿಗೆ ಮನುಷ್ಯ ಬಡ್ತಿಹೊಂದಿದ್ದು ಪ್ರಕೃತಿಗೆ ಹೊರೆಯಾಗಿರಲಿಲ್ಲ. ನೈಲಾನ್, ರೇಯಾನ್, ಪ್ಲೋಲಿಯೆಸ್ಟರ್ ಹೀಗೆ ಭೂಗರ್ಭದಿಂದಲೂ ಬಟ್ಟೆ ಬರಬೇಕಾದಾಗ, ಉರಿವ ಸೆಖೆಯಲ್ಲೂ ಅವನ್ನು ಮತ್ತೆ ಇಸ್ತ್ರಿಮಾಡಿ ಧರಿಸುವ ನಾಗರಿಕತೆ ನಮ್ಮದಾದಾಗ ಪ್ರಕೃತಿ ಎಷ್ಟು ದಿನ ಈ ಸೂರೆಯನ್ನು ಭರಿಸೀತು? ಗುಹೆ, ಪರ್ಣಕುಟೀರ, ಜೋಪಡಿ, ಇಟ್ಟಿಗೆಮನೆ, ಕಾಂಕ್ರೀಟ್ ಭವನ ಹೀಗೆ ಬೆಳೆಯುತ್ತ ಬೆಳೆಯುತ್ತ ರಾಜಸ್ಥಾನದ ಅಮೃತಶಿಲೆ ಇಲ್ಲದೆ ಮನೆ ಇಲ್ಲ. ಕೊಳ್ಳೆಗಾಲದ ಗ್ರಾನೈಟ್ ಹಾಕದ ಅಡುಗೆ ಮನೆಯಲ್ಲಿ ಅನ್ನ ಬೇಯುವುದಿಲ್ಲ ಎಂಬ ಸಿದ್ಧಾಂತಕ್ಕೆ ನಾವಿಂದು ಬಂದು ಮುಟ್ಟಿದ್ದೇವೆ. ಎಂದರೆ ಪ್ರಾಥಮಿಕ ಆವಶ್ಯಕತೆಗಳು ಹಲವು ಕವಲುಗಳಾಗಿ ಬೆಳೆಯುತ್ತ ಆವಶ್ಯಕತೆಗಳಿಗೂ, ಭೋಗಕ್ಕೂ ಇಂದು ವ್ಯತ್ಯಾಸವೇ ಇಲ್ಲವಾಗಿದೆ. ಬೇಕು ಬೇಕೆಂಬ ಬಯಕೆ ಪ್ರಾಣಿಗಳಿಗಿಂತ ಭಿನ್ನವಾಗಿ ಪ್ರಕೃತಿ ಮನುಷ್ಯನಿಗೆ ಕೊಟ್ಟ ಶಾಪ. ಪ್ರಕೃತಿಯ ಈ ಕೊಡುಗೆಯನ್ನು ವರವೆಂದು ಭ್ರಮಿಸಿ, ಮನುಷ್ಯ ಪ್ರಕೃತಿಯನ್ನು ಸೂರೆ ಮಾಡುತ್ತ ಭೋಗವನ್ನು ಆವಶ್ಯಕತೆಯನ್ನಾಗಿ ಮಾಡಿಕೊಂಡಿರುವುದೇ ಸದ್ಯದ ಶಾಪ, ಜೊತೆಗೆ ವೈದ್ಯವಿದ್ಯೆಯ ಪರಿಣಾಮವಾಗಿ ಜನಸಂಖ್ಯಾಸ್ಫೋಟ ಬೇರೆ. ಇಷ್ಟೊಂದು ಜನರ ಭೋಗದಾಹ ತೀರಿಸಲು ಇಂದು ಪ್ರಕೃತಿ ಶಕ್ತವಾಗಿಲ್ಲ. ಇನ್ನಾದರೂ ಇದನ್ನು ತಿಳಿದು ವ್ಯವಹರಿಸದಿದ್ದರೆ, ಆಸೆ ಪ್ರಕೃತಿ ಸಹಜ ಎಂದು ತರ್ಕಿಸುತ್ತ ಇನ್ನೂ ನಾಗರಿಕರಾಗಲು ಹೊರಟರೆ, ಆಗ ಪ್ರಕೃತಿ ಖಂಡಿತವಾಗಿ ತಿರುಗುಬಾಣವಾಗದೆ ಇರದು.

ಈಗ ಸಹಜ, ಸಾವಯುವ, ಆಧುನಿಕ ಈ ಶಬ್ದಗಳ ವ್ಯತ್ಯಾಸ ನಿಮ್ಮ ಕಲ್ಪನೆಗೆ ಬಂದಿರಬಹುದೆಂದು ಭಾವಿಸುತ್ತೇನೆ.

	ಸಹಜ (ಪ್ರಕೃತಿ)	ಸಾವಯುವ (ಸಂಸ್ಕೃತಿ)	ಆಧುನಿಕ (ವಿಕೃತಿ)
ಅಶನ	ಕಬ್ಬು	ಬೆಲ್ಲ	ಸಕ್ಕರೆ
ವಸನ	ಕೃಷ್ಣಾಜಿನ	ಹತ್ತಿಬಟ್ಟೆ	ಪ್ಲೋಲಿಯೆಸ್ಟರ್
ವಸತಿ	ಗುಹೆ	ಇಟ್ಟಿಗೆ ಮನೆ	ವಿಲಾಸಿ ಸೌಧಗಳು

ಕೃಷಿಯಲ್ಲಿ ಸಹಜ, ಸಾವಯವ, ಆಧುನಿಕ ಎಂದರೇನು ಎಂಬುದನ್ನು ಈಗ ನೋಡೋಣ.

ಪ್ರಪ್ರಥಮ ಆವಶ್ಯಕತೆಯಾದ ಅಶನಕ್ಕೆ ಎಂದರೆ ಹೊಟ್ಟೆ ತುಂಬಿಸಿಕೊಳ್ಳಲು ಆದಿಮಾನವ ಪ್ರಕೃತಿಯ ಮೊರೆ ಹೋಗಿದ್ದ. ಹಣ್ಣು ಹಂಪಲು, ಗೆಡ್ಡೆ ಗೆಣಸು ಗಳು ಆತನಿಗೆ ಆಹಾರವಾಗಿದ್ದುವು. ಈ ಹಣ್ಣು ಹಂಪಲುಗಳನ್ನು, ಗೆಡ್ಡೆ ಗೆಣಸು ಗಳನ್ನು ಆತ ಬೆಳೆಸಿರಲಿಲ್ಲ. ಆತನಿಗಾಗಿಯೇ ಅವು ಇರಲಿಲ್ಲ. ಅವು ಎಲ್ಲ ಪ್ರಾಣಿ ಪಕ್ಷಿಗಳಿಗಾಗಿ ಇದ್ದುವು. ಆತ ಬೆಳೆಸದೇ ಹೋದರೂ ಗಿಡ, ಮರ, ಬಳ್ಳಿಗಳು ಬೆಳೆಯುತ್ತಿದ್ದುವು. ಆದರೆ ಈಗ? ಗಿಡಗಳು ಸಹಜವಾಗಿಯೇ (ಅವಾಗಿಯೇ) ಬೆಳೆಯಬಲ್ಲವೆಂಬ ಕಲ್ಪನೆಯೇ ನಮಗೆ ಅಸಹಜವಾಗಿದೆ. ಗಿಡಗಳಿಗೆ ಏನೊಂದೂ ಗೊಬ್ಬರ ಕೊಡದೇ ಹೋದರೂ ಅವು ಬೆಳೆದು ಫಸಲು ಕೊಡುತ್ತಿದ್ದುವು. ಭಾರೀ ಪ್ರಮಾಣದಲ್ಲಿ ಅಳಿದು ಉಳಿದ ಕಾಡುಗಳನ್ನು ಗಮನಿಸಿ ಅವಕ್ಕೆ ಉದ್ದೇಶಿತ ಗೊಬ್ಬರ ಇಲ್ಲ, ನೀರಿಲ್ಲ, ಔಷಧಿ ಇಲ್ಲ. ಈ ರೀತಿ ಬೆಳೆಯುವುದು ಪ್ರಕೃತಿಗೆ ಸಹಜ. ಈ ಸಹಜತೆಗೆ ಸಂವಾದಿಯಾಗಿ ಮಾಡುವ ಕೃಷಿಯೇಸಹಜ ಕೃಷಿ.

ಮೊದಲೇ ಹೇಳಿದಂತೆ, ಹೊಟ್ಟೆತುಂಬಿದ ಮನುಷ್ಯ ಸಹಜವಾಗಿ ಯೋಚಿಸಲು ಹೊರಟ. ಎರಡು ಹಣ್ಣಿನ ಮರಗಳನ್ನು ಗಮನಿಸಿದ. ಒಂದು ಚೆನ್ನಾಗಿದೆ, ಚೆನ್ನಾಗಿ ಫಲ ಬಿಟ್ಟಿದೆ. ಇನ್ನೊಂದು ಇಲ್ಲ. ಏಕೆ ಹೀಗೆ? ಮರಕ್ಕೂ ಗೊಬ್ಬರ ಬೇಕು, ನೀರುಬೇಕು ಎಂಬುದನ್ನು ಕಂಡುಕೊಂಡ. ಫಲವತ್ತಾದ ತಗ್ಗು ಪ್ರದೇಶ ದಲ್ಲಿ ನೀರು, ಗೊಬ್ಬರ ಕೊಟ್ಟು ಕೃಷಿ ಮಾಡುವ ಬುದ್ಧಿವಂತಿಕೆ ಬಂತು. (ಅಂಥಲ್ಲಿ ಮನೆಕಟ್ಟಿ ನೆಲೆ ಊರಿದ) ಎಂಥ ಗೊಬ್ಬರ? ತರಗೆಲೆ ಗೊಬ್ಬರ, ದನದ ಗೊಬ್ಬರ, ಕೋಳಿ ಗೊಬ್ಬರ, ಬೂದಿ ಗೊಬ್ಬರ ಹೀಗೆ. ಆದರೆ ಇವು ಯಾವ್ರವೂ ಅಸಹಜ ಅಲ್ಲ. ಸಹಜವಾಗಿ ಪ್ರಕೃತಿಯಲ್ಲಿ ಪ್ರತಿ ಸಸ್ಯಕ್ಕೂ ಹೆಚ್ಚು ಕಡಿಮೆ ಪ್ರಮಾಣದಲ್ಲಿ ಇಂಥ ಗೊಬ್ಬರಗಳು ಸಿಕ್ಕುತ್ತಲೇ ಇರುತ್ತವೆ. ಪ್ರತಿ ಮರ ಗಿಡಗಳ ಒಣ ಎಲೆಗಳು ಉದುರಿ ಅಲ್ಲೇ ಕೊಳೆಯುವುದರಿಂದ ತರಗೆಲೆ ಗೊಬ್ಬರ; ಹುಲ್ಲು, ಸೊಪ್ಪು ಮೇಯಲು ಕಾಡೆಲ್ಲ ದನ, ಕರುಗಳು, ಇತರ ಪ್ರಾಣಿಗಳು ತಿರುಗಾಡುವುದರಿಂದ ಸಗಣಿ ಗೊಬ್ಬರ; ಮರಗಳಲ್ಲೇ ಮನೆಮಾಡಿ ಹತ್ತು ಹಲವು ಪಕ್ಷಿಗಳು ಜೀವಿಸುವುದರಿಂದ ಅವುಗಳ ಹಿಕ್ಕೆ ಗೊಬ್ಬರ; ಕಸಕಡ್ಡಿಗಳು ಕಾಡ್ಗಿಚ್ಚಿಗೆ ಸುಡುವುದರಿಂದ ಬೂದಿಗೊಬ್ಬರ. ಈ ಸಹಜವಾದ ಗೊಬ್ಬರಗಳನ್ನು ನಾವಿರುವಲ್ಲಿ ನಮ್ಮ ಸಸ್ಯಗಳಿಗೆ ಹೆಚ್ಚಾಗಿ ಕೊಟ್ಟು ಹೆಚ್ಚು ಫಸಲು ಕೊಡುವಂತೆ ಮಾಡುವ ಸುಧಾರಣೆಯೇ ಸಾವಯವ ಕೃಷಿ.

ಮನುಷ್ಯ ನಿಂತ ನೀರಾಗಲು ಸಾಧ್ಯವಿಲ್ಲ. ಚಲಿಸುವ ಪ್ರವಾಹವಾದ ಆತ ಹೊಸ ಹೊಸ ಪ್ರಯೋಗಗಳನ್ನು ಮಾಡಿದ. ಸಸ್ಯಗಳ ಸಂರಚನೆಯನ್ನು ಅಭ್ಯಾಸಮಾಡಿದ. ಸಸ್ಯಪೋಷಕಗಳು ಯಾವುವು ಎಂಬುದನ್ನು ಕಂಡುಕೊಂಡ. ಸಾವಯುವ=ಸ+ಅವಯುವ. ಒಂದು ನಿರ್ದಿಷ್ಟ ಕೆಲಸಮಾಡುವ ಪ್ರಾಣಿ ಅಥವಾ ಸಸ್ಯಭಾಗಕ್ಕೆ ಅವಯುವ ಎನ್ನುವರು. ಉದಾಹರಣೆಗೆ ಮನುಷ್ಯನ ಕೈ, ಸಸ್ಯದ ಎಲೆ. ಇಂಥ ಅವಯುವಗಳಿಂದ ಕೂಡಿದ್ದು ಸಾವಯುವ. ಪ್ರತಿಯೊಂದು ಜೀವಿಯೂ ಸಾವಯುವವೇ. ಇವು ಇಂಗಾಲ ಮತ್ತು ಜಲಜನಕದ ವಿವಿಧ ಜೋಡಣೆಗಳಿಂದ ಆಗಿದೆ. ಸಾರಜನಕ (N), ರಂಜಕ (P), ಪೊಟ್ಯಾಷ್ (K) ಇವು ಸಸ್ಯಗಳನ್ನು ಪೋಷಿಸುವ ಮುಖ್ಯ ಪೋಷಕಗಳು. ಕಬ್ಬಿಣ, ತಾಮ್ರ, ಸತುವು—ಇತ್ಯಾದಿ ಇತರ ಹದಿಮೂರು ಲಘು ಪೋಷಕಗಳು. ಇಷ್ಟಲ್ಲದೆ ಕೆಲವೊಂದು ಚೋದಕಗಳು, ಕಿಣ್ವಗಳು ಸಸ್ಯಗಳ ಬದುಕಿನಲ್ಲಿ ಪಾಲುದಾರರಾಗಿವೆ. ಇವೆಲ್ಲವೂ ಸೇರಿ ಸಸ್ಯಗಳನ್ನು ಬೆಳೆಸುವ ಮಾಧ್ಯಮ ಮಣ್ಣು. ಈ ಮಣ್ಣು ಆಮ್ಲ ಕ್ಷಾರರಹಿತ ಸ್ಥಿತಿಯಲ್ಲಿರಬೇಕು ಎಂಬಿತ್ಯಾದಿ ರಹಸ್ಯಗಳನ್ನು ಭೇದಿಸಿದುದು ಬುದ್ಧಿವಂತಿಕೆಯ ಪರಾಕಾಷ್ಠೆ. ಪ್ರತಿಯೊಂದು ಪ್ರಾಣಿ ಸಸ್ಯಗಳು ಸತ್ತನಂತರ ಏನಾಗುತ್ತವೆ? ಈ ವಾತಾವರಣದಲ್ಲಿ ಅಸಂಖ್ಯ ಬ್ಯಾಕ್ಟೀರಿಯಾಗಳಿವೆ. ಇವು ಸತ್ತ ಸಾವಯುವ ಜೀವಿಗಳ ಸುತ್ತ ಸೇರಿ ಅವನ್ನು ಒಡೆಯುವ ಕ್ರಿಯೆ ಪ್ರಾರಂಭವಾಗುತ್ತವೆ. ಇದಕ್ಕೆ ಕೊಳೆತ ಎನ್ನುವರು. ಕೊಳೆತ ಸಾವಯುವ ಘಟಕಗಳು ಮಣ್ಣಿಗೆ ಸೇರುತ್ತವೆ. ನೀರಿನೊಂದಿಗೆ ಸೇರಿ ಮತ್ತೆ ಸಸ್ಯ ಧಮನಿಗಳಲ್ಲಿ ಏರುತ್ತವೆ. ಹೀಗೆ ಸಾವಯುವ ಗೊಬ್ಬರಗಳು ಸಹಜವಾಗಿ ಪುನರಾವರ್ತಿಸುತ್ತಿರುತ್ತವೆ.

ಸಾವಯುವ ಗೊಬ್ಬರವನ್ನು ನಮಗೆ ಬೇಕಾದಲ್ಲಿ ಹೆಚ್ಚಾಗಿ ತಯಾರಿಸಿ ನಮ್ಮ ಸಸ್ಯಕ್ಕೆ ಊಡಿ ಹೆಚ್ಚಿನ ಫಸಲು ಪಡೆಯುವ ತಂತ್ರ ಸಿದ್ಧಿಯಾಯಿತು. ಗೊಬ್ಬರದಲ್ಲಿರುವ ಅಂಶಗಳೂ ಗೊತ್ತಾದುವು. ಈ ಅಂಶಗಳನ್ನು ಸಾವಯುವ ಮೂಲದಿಂದ ಊಡುವ ಬದಲು ನಿರವಯುವ ಮೂಲದಿಂದ ಊಡಬಾರದೇಕೆ? ಎಂಥ ಅದ್ಭುತ ತರ್ಕ! ಕ್ರಮಬದ್ಧವಾದ ಭೌತ ರಚನೆ ಇಲ್ಲದ, ಜೀವ ಸಂಬಂಧವಿಲ್ಲದ ಖನಿಜವಸ್ತುಗಳಿಗೆ ನಿರವಯುವಗಳೆನ್ನುವರು. ಇವುಗಳಿಂದ ಸಾರಜನಕ (N). ರಂಜಕ (P), ಪೊಟ್ಯಾಷ್ (K) ಹಾಗೂ ಇತರ ಸಸ್ಯಸಾರಗಳನ್ನು ಸಂಸ್ಕರಿಸಿ ಸಸ್ಯಗಳಿಗೆ ಕೊಡುವ ಬಲವರ್ಧಕ (tonic) ಕೃಷಿಯೇ ಆಧುನಿಕ.

ಮನುಷ್ಯ ತನ್ನ ಅಶನ, ವಸನ, ವಸತಿಗಳಲ್ಲಿ ಆಧುನಿಕನಾಗುತ್ತ ಬಂದಂತೆ

ಆಧುನಿಕ ಕೃಷಿಯು ಅವಶ್ಯಕತೆ ಹೆಚ್ಚಾಗತೊಡಗಿತು ಅಥವಾ ಹಾಗೆಂದು ನಂಬಿದ. ಸಾವಯುವ ಗೊಬ್ಬರವಾಗಬೇಕಾದರೆ ಸಾಕಷ್ಟು ಸಸ್ಯಗಳಿರಬೇಕು. ಆದರೆ ತನ್ನ ಭೋಗಕ್ಕಾಗಿ ಮನುಷ್ಯ ಸಸ್ಯಗಳನ್ನು ನಾಶಮಾಡಿದ. ತನ್ನ ಅವಸರಕ್ಕೆ ತನ್ನ ಸಸ್ಯಗಳು ತಯಾರಾಗಬೇಕೆಂದು ಅವಕ್ಕೆ ನಿರವಯುವ (ರಾಸಾಯನಿಕ) ಗೊಬ್ಬರಗಳ ಊಡನೆ ಮಾಡಿದ. ರಾಸಾಯನಿಕಗಳಿಗೆ ಕೂಡಲೇ ನೀರಲ್ಲಿ ವಿಲೀನಗೊಂಡು ಬೇರಲ್ಲಿ ಹೀರಲ್ಪಡುವ ಗುಣವಿರುವುದರಿಂದ ಸಸ್ಯ ಬೆಳವಣಿಗೆ ಯಲ್ಲಿ ಇವು ಕ್ರಾಂತಿಕಾರೀ ಪ್ರಗತಿಯನ್ನು ತೋರಿದುವು. ಜೊತೆಗೆ ವಂಶವಾಹೀ ಗುಣಗಳ ಸಂಯೋಜನೆಯಿಂದ ಅಧಿಕ ಇಳುವರಿ ತಳಿಗಳನ್ನು ಸೃಷ್ಟಿಸಿದ್ದಾಯಿತು. ರಾಸಾಯನಿಕ ಹಾಗೂ ಅಧಿಕ ಇಳುವರಿ ಸಾಮರ್ಥ್ಯಗಳ ಪರಿಣಾಮವಾಗಿ ಸಸ್ಯ ಗಳು ಅಸ್ವಾಭಾವಿಕವಾದ ಬೆಳವಣಿಗೆ ಪ್ರದರ್ಶಿಸಬೇಕಾಯಿತು. ಈ ಅತಿಯಾದ, ಅಸ್ವಾಭಾವಿಕ ಸ್ಥಿತಿಯಲ್ಲಿ ಅವು ಸ್ವಾಭಾವಿಕವಾದ ರೋಗ ನಿರೋಧಕ ಶಕ್ತಿಯನ್ನೂ ಕಳೆದುಕೊಂಡವು. ವಿಪರೀತವಾದ ರೋಗ, ಕೀಟಬಾಧೆ ಪ್ರಾರಂಭ ವಾಯಿತು. ಯಾಕೆ ಹೀಗೆ ಎಂದು ಯೋಚಿಸದಿದ್ದುದು ಮನುಷ್ಯಮಾಡಿದ ಭಾರೀ ತಪ್ಪು. ರೋಗ, ಕೀಟನಾಶಕಗಳ ಸಂಶೋಧನೆ ಪ್ರಾರಂಭವಾಯಿತು. ನಾಶವೂ ಆಯಿತು. ಇವು ಉದ್ದೇಶಿತ ಕೀಟಗಳನ್ನು ಮಾತ್ರ ನಾಶಮಾಡಲಿಲ್ಲ, ಸರ್ವನಾಶಮಾಡಿದುವು. ಇದರಿಂದ ಜೀವ ಸರಪಳಿಯ ಹಲವು ಕೊಂಡಿಗಳು ಕಳಚಿಕೊಂಡುವು. ಅಲ್ಲಲ್ಲ ನಿವಾರಿಸಲಾಗದಂಥ ಕೆಟ್ಟ ಗಡ್ಡೆಗಳು ಕಟ್ಟಿ ಕೊಂಡು ಬಿಟ್ಟುವು. ಪ್ರಕೃತಿ ಚಕ್ರದ ಒಂದು ಅರೆಕಾಲು ಮನುಷ್ಯ. ಆದರೆ ಆತ ಎಲ್ಲವೂ ತಾನೇ ಆಗ ಹೊರಟಿರುವುದು ನೈತಿಕವಾಗಿ ತಪ್ಪು—ಬೇರೆ ಜೀವಿ ಗಳನ್ನು ಕೊಲ್ಲುವುದು ಅಪರಾಧ ಎಂಬುದು ಒಂದು ನೆಲೆ. ಪ್ರಕೃತಿಯಲ್ಲಿ ಅರ್ಹತೆ ಮಾತ್ರ ಅಸ್ತಿತ್ವದಲ್ಲಿರುತ್ತದೆ (survival of the fittest) ಎಂಬುದು ಇನ್ನೊಂದು ನೆಲೆ. ಈ ನೆಲೆಯಿಂದ ನೋಡಿದಾಗ ಕೊಲ್ಲುವುದು, ನಾಶಮಾಡುವುದು (ನಮ್ಮ ತಾಕತ್ತು) ಸರಿ ಎಂದು ಪ್ರಥಮವಾಗಿ ಕಾಣ ಬಹುದು. ಆದರೆ ಹೀಗೆ ನಾಶಮಾಡುತ್ತ ಹೋದಾಗ ಪ್ರಕೃತಿ ಚಕ್ರದ ಎಲ್ಲ ಹೊರೆಯೂ ನಮ್ಮ ಮೇಲೆಯೇ ಬೀಳುತ್ತದೆ. ನಮ್ಮ ಆವಶ್ಯಕತೆಗಳಿಗೆ ಕುತ್ತು ಬರುತ್ತಹೋಗುತ್ತದೆ.

ಕೃಷಿಗೆ ಜಾಗ ಸಾಲದೆಂದು, ಮನೆಗೆ ಮರಬೇಕೆಂದು ಕಾಡು ಕಡಿದೆವು. ಅಲ್ಲಿಲ್ಲ ನಮ್ಮ ಆಹಾರ ಕೃಷಿ ಮಾಡಿದೆವು. ಆಗ ಆ ಕಾಡಿನ ಹಲವಾರು ಸಸ್ಯ ವರ್ಗಗಳನ್ನು ಅವಲಂಬಿಸಿದ್ದ ಹಲವು ಪ್ರಾಣಿ, ಪಕ್ಷಿ, ಕೀಟಗಳಿಗೆ ನೆಲೆ, ಆಹಾರ

ತಪ್ಪಿದುವು. ಅವು ಹೊಸತಾಗಿ ನಾವು ಬೆಳೆದ ಬೆಳೆಗಳಿಗೆ ಅನಿವಾರ್ಯವಾಗಿ ಬರಬೇಕಾಯಿತು. ಕಾಡು ಬರಿದಾದಾಗ, ಸಸ್ಯಮೂಲ ಸಾವಯುವ ಇಲ್ಲ. ನಾವಾದರೋ ಕಾಡನ್ನು ಪೇಟೆ ಮಾಡಿದೆವು. ಮನುಷ್ಯ ತ್ಯಾಜ್ಯಗಳಾವುವೂ ಕೃಷಿಗೆ ಹಿಂತಿರುಗದಂತೆ ಪೇಟೆಯ ಕಕ್ಕಸುಗಳಲ್ಲಿ ಶೇಖರಿಸಿದೆವು. (ಒಳಚರಂಡಿ ಎಂಬ ಭೀಕರ ಸಮಸ್ಯೆಯನ್ನು ಸೃಷ್ಟಿಸಿದೆವು) ಹೀಗಾಗಿ ಸಸ್ಯಗಳಿಗೆ ರಾಸಾಯನಿಕ ಅನಿವಾರ್ಯವಾಗಿ ಬಳಸಬೇಕಾಯಿತು. ಬಳಸುತ್ತ, ಬಳಸುತ್ತ ಇದು ಸ್ವಾಭಾವಿಕವೆಂದೂ ಅನಿವಾರ್ಯವೆಂದೂ ಭ್ರಮಿಸಿದೆವು. ಈ ಭ್ರಮೆಯಲ್ಲಿ ಬೆಳೆದ ಬೆಳೆಗಳಿಗೆ ನೆಲೆ ತಪ್ಪಿದ ಕೀಟಗಳು ಹೆಚ್ಚು ಹೆಚ್ಚಾಗಿ ಬಂದುವು. ಹೆಚ್ಚು ಹೆಚ್ಚಾಗಿ ಕೀಟನಾಶಕಗಳನ್ನು ತಂದು ಕೊಂದೆವು. ಈ ವಿಷಯುಕ್ತ ಬೆಳೆಗಳು ನಮ್ಮ ಹೊಟ್ಟೆ ಸೇರಿ ಕೆಟ್ಟ ಪರಿಣಾಮ ಮಾಡಿದುವು. ನಮಗೂ ಮದ್ದಿನ ಸರಪಳಿ. ಇಷ್ಟಾಗುವಾಗ ಭೂಮಿ ನಿಸ್ಸಾರವಾಯಿತು. ರಾಸಾಯನಿಕ ಮಾಧ್ಯಮದಲ್ಲೂ ಗಿಡ ಬೆಳೆಯಲಾರದಷ್ಟು ಭೂಮಿ ಹಾಳಾಯಿತು. ಈ ಸತ್ಯಗಳು ಎರಡನೆಯ ನೆಲೆಯಿಂದಲೂ ನಾವು ಸಹಜರಾಗಿರಬೇಕೆಂದು ಸಾರುತ್ತವೆ.

ಆದರೂ ನಾವ್ಯಾಕೆ ಇನ್ನೂ ಆಧುನಿಕ ಕೃಷಿಕರಾಗುತ್ತಿದ್ದೇವೆ? ೧ ಅಜ್ಞತೆ, ೨ ಉದಾಸೀನತೆ, ೩ ದುರಾಸೆ.

ಕೃಷಿ ದಿನದಿಂದ ದಿನಕ್ಕೆ ಎಲ್ಲ ರೀತಿಯಲ್ಲೂ ದೀನ ಹೀನಸ್ಥಿತಿಗೆ ಬರುತ್ತಿದೆ. ಮೊದಲಿನಂತೆ ಬೆಳೆ ಬರುತ್ತಿಲ್ಲ. ವಿಪರೀತ ಕೀಟಬಾಧೆ ಎಂದು ಎಲ್ಲ ರೈತರಿಗೂ ಎಲ್ಲ ಕೃಷಿ ವಿಜ್ಞಾನಿಗಳಿಗೂ ಗೊತ್ತು. ಆದರೆ ಇದಕ್ಕೆ ಕಾರಣ ಆಧುನಿಕ ಕೃಷಿ ಪದ್ಧತಿಗಳು ಎಂಬುದು ಇನ್ನೂ ಹಲವರಿಗೆ ಗೊತ್ತಿಲ್ಲ. ರೈತ ಸ್ವತಃ ವಿಜ್ಞಾನಿ ಅಲ್ಲದ್ದರಿಂದ ಈ ಆಗುಹೋಗುಗಳ ಬಗ್ಗೆ ಆತ ಅಜ್ಞನಾಗಿರುವುದು ಸಹಜ! ಹಾಗೆಯೇ ವಿಜ್ಞಾನಿ ಸ್ವತಃ ರೈತನಲ್ಲದ್ದರಿಂದ ಆತನ ಕೃಷಿ ಪ್ರಯೋಗಾಲಯದಲ್ಲಿ ನಡೆಯುವುದರಿಂದ ಆತನೂ ಅಜ್ಞನಾಗಿರುವುದು ಸಹಜ.

ಸಹಜ–ಸಾವಯವ ಕೃಷಿ ಮಾಡಬೇಕಾದರೆ ತಾಳ್ಮೆ ಬೇಕು. ಹೆಚ್ಚಿನ ನಿಷ್ಠೆ ಶ್ರದ್ಧೆ ಕಾರ್ಯಮಗ್ನತೆ ಬೇಕು. ಹಲವು ಮರಗಿಡಗಳನ್ನು ನೆಡಬೇಕು. ಕಡಿಯಬೇಕು, ದನಕರು ಸಾಕಬೇಕು, ವಾಸನೆ ಬರುವ ಗೊಬ್ಬರ ಹೊರಬೇಕು, ಆಧುನಿಕ ಜೀವನದಿಂದಾಗಿ ಪೇಟೆಯ ಆಕರ್ಷಣೆ, ಕೃಷಿ ಕೂಲಿಗಳ ಅಭಾವ. ರಾಸಾಯನಿಕಗಳಾದರೋ ಮೂಟೆಗಳಲ್ಲಿ ಬರುತ್ತವೆ. ಒಂದು ಬಾಣಲೆ ಸಾವಯುವ ಹಾಕುವಲ್ಲಿ ಒಂದು ಹಿಡಿ ರಾಸಾಯನಿಕ ಹಾಕಿದರಾಯ್ತು, ಕೆಲಸ ಬಹಳ ಸುಲಭ, ನಾವೂ ಆರಾಮವಾಗಿ ಪೇಟೆ ತಿರುಗಾಡಬಹುದು. ಹೀಗೆ ಸೋಮಾರಿತನಕ್ಕೆ ರಾಸಾಯನಿಕಗಳು ಒತ್ತಾಸೆಯಾದುವು.

ಎಲ್ಲಕ್ಕಿಂತ ಹೆಚ್ಚಾಗಿ ದುರಾಸೆ ಅಥವಾ ಅತಿಆಸೆ. ನಮ್ಮ ಆಧುನಿಕವಾದ ಅಶನ, ವಸನ, ವಸತಿಗಳಿಗೆ ಹೆಚ್ಚಿನ ಹಣಬೇಕು. ಅದು ಬೇಗ ಬೇಕು. ಬಡ್ಡಿ ಲೆಕ್ಕಚಾರ ಸರಿದೂಗಬೇಕು. ಹಾಗಾಗಿ ನಮ್ಮ ಬೆಳೆಗಳು ಬೇಗನೆ ಮತ್ತು ವಿಪುಲವಾಗಿ ಬರಬೇಕು. ಪ್ರಾರಂಭದಲ್ಲಿ ರಾಸಾಯನಿಕಗಳಿಂದ ಬರುವ ಲಾಭ ಮತ್ತು ಸೌಲಭ್ಯ ಎಂಥವನನ್ನೂ ಸಮ್ಮೋಹಿಸದೇ ಇರದವು. ನಾನೊಬ್ಬ ಮಾತ್ರ ರಾಸಾಯನಿಕ ಬಿಟ್ಟರೆ ಪ್ರಪಂಚ ಬಿಟ್ಟು ಬಿಡುತ್ತದೆಯೇ! ಎಂಬ ವಾದದೊಂದಿಗೆ ವೇಗದ ಪ್ರಪಂಚಕ್ಕೆ ಸೇರುವ ಆತುರದಲ್ಲಿ ಒಬ್ಬೊಬ್ಬರಾಗಿ ರಾಸಾಯನಿಕ ಗೊಬ್ಬರ ಸುರಿದರು. ಭೂಮಿಯ ಬಲ ಮುರಿದರು. ತಮ್ಮ ಜಂಘಾಬಲಕ್ಕೆ ಕೊಡಲಿಏಟು ಹೊಡೆದರು.

ಬುದ್ಧಿ ಇರುವ ಮನುಷ್ಯ ಪ್ರಾಣಿಗಳಂತೆ ಸದಾ ಇದ್ದಂತೇ ಇರುವುದು ಸಾಧ್ಯವಿಲ್ಲ. ದಿನ ಬದಲಾದಂತೆ ಬದಲಾಗುತ್ತಿರುವುದು ಅನಿವಾರ್ಯ. ಆದರೆ ಈ ರೀತಿ ಬದಲಾಗುವಾಗ, ಆಧುನಿಕರಾಗುವಾಗ ಪ್ರಕೃತಿಯಿಂದ ದೂರವಾಗದಿರೋಣ. ನಮ್ಮ ಜೀವನ ಹಸನಾಗಿರುವಂತೆ ನಮ್ಮ ಜಮೀನುಗಳನ್ನು ಹಸುರಾಗಿಸೋಣ, ಮರ ಬೆಳೆಸೋಣ, ಬನ್ನಿ.

ಎ. ಪಿ. ಚಂದ್ರಶೇಖರ್



ರೊಟ್ಟಿಯು ಅಗತ್ಯವಿದ್ದವರಿಗೆ ತನ್ನ ರೊಟ್ಟಿಯಲ್ಲಿ ಒಂದು ಪಾಲು ಕೊಡುವವನು, ಯಾರಿಗೂ ಹಿಂಸೆಯನ್ನು ಮಾಡದವನು ಈ ಪ್ರಪಂಚದಲ್ಲಿದ್ದರೂ ಪರಮಾತ್ಮನ ಬಳಿ ಇದ್ದಂತೆ.

—ವಿನೋಬಾ

ಚೈತನ್ಯಶೀಲ ವಿಜಯನಗರ

ನಾಲ್ಕು ಶತಮಾನಗಳ ಹಿಂದೆ, ದಕ್ಷಿಣ ಭಾರತದ ಈ ನಗರ ಮುತ್ತು, ರತ್ನ ಮಾಣಿಕ್ಯಗಳಿಗೆ ಹೆಸರುವಾಸಿಯಾಗಿತ್ತು. ಹಂಪಿಯೆಂದು ಗುರುತಿಸಲಾಗಿರುವ (ವಿಜಯನಗರ) ಮಧ್ಯಯುಗದ ಅದೇ ನಗರದಲ್ಲಿಂದು ಬಣ್ಣಬಣ್ಣದ ಪ್ಲಾಸ್ಟಿಕ್ ಬಳೆಗಳನ್ನು ಮಾರುತ್ತಾರೆ. ಒಂದು ಕಾಲದಲ್ಲಿ ಕವಿ-ಚಕ್ರವರ್ತಿ ಕೃಷ್ಣದೇವ ರಾಯ ದೂರದೂರದಿಂದ ಬಂದ ಸಾವಿರಾರು ಅತಿಥಿಗಳನ್ನು ಸತ್ಕರಿಸುತ್ತಿದ್ದ ಸ್ಥಳವಲ್ಲಿಂದು, ಹೆಣದ ಚಾಪೆಗಳನ್ನು ಹಾಸಿ ಮೆಣಸಿನ ಕಾಯಿ ಒಣಗಿಸಲಾಗುತ್ತಿದೆ. ವೇಶ್ಯೆಯರು ನರ್ತಿಸುತ್ತಿದ್ದ ಆ ಸ್ಥಳ, ವಿದೂಷಕ ತೆನಾಲಿರಾಮ ಅರಸನನ್ನು ಸಂತೋಷಪಡಿಸುತ್ತಿದ್ದ ಆ ಆವರಣದಲ್ಲಿಂದು ಮಂಗಗಳು ಓಡಾಡುತ್ತಿರುತ್ತವೆ. ಸಣ್ಣ ಗಿಳಿಗಳು, ಜಲಗಾರ ಹಕ್ಕಿಗಳು ಹಾರಾಡುವುದು; ದೊಡ್ಡ ಹಲ್ಲಿಗಳು ಸುಸುಳುವುದನ್ನಿಲ್ಲಿ ನೋಡಬಹುದು. ರಾಮಾಯಣದ ವಾಲಿಸುಗ್ರೀವರು ಆಳುತ್ತಿದ್ದ ಕಾಲದಲ್ಲಿ ಈ ಭಾಗ ಅವರ ವಶದಲ್ಲಿತ್ತೆಂಬುದು ಇಲ್ಲಿನ ಜನರ ನಂಬಿಕೆ.

ವಿಜಯನಗರವೆಂಬ ಈ ಪಟ್ಟಣವನ್ನು ೧೩೩೬ರಲ್ಲಿ ಹರಿಹರ ಮತ್ತು ಬುಕ್ಕರೆಂಬ ಸೋದರರು ಕಟ್ಟಿದರು. ಈ ರಾಜಕುಮಾರರು ಮೊದಲು ಈ ಭಾಗದಲ್ಲಿ ದಿಲ್ಲಿಯ ಸುಲ್ತಾನನ ಮಾಂಡಲಿಕರಾಗಿದ್ದು, ಕ್ರಮೇಣ ತಾವು ಸ್ವತಂತ್ರರಾಗಿ ತಮ್ಮದೇ ರಾಜ್ಯದ ರಾಜಧಾನಿಯನ್ನು ಸ್ಥಾಪಿಸಿದರು. ಕೃಷ್ಣಾನದಿಯ ದಕ್ಷಿಣಕ್ಕಿದ್ದ ಎಲ್ಲ ಭಾಗಗಳನ್ನು ಸಂಘಟಿಸಿದ ಈ ರಾಜ್ಯದ ಘನತೆ ಮತ್ತು ಐಶ್ವರ್ಯ ಎಷ್ಟಿತ್ತೆಂದರೆ, ಈ ರಾಜಧಾನಿಯ ಕಟ್ಟಡಗಳ ನಿರ್ಮಾಣ ಮತ್ತು ಅವುಗಳನ್ನು ಅಂದಗೊಳಿಸುವ ಕೆಲಸಕ್ಕೆ ಅತ್ಯುತ್ತಮರೆನಿಸಿಕೊಂಡ ಶಿಲ್ಪಿಗಳು, ಕುಶಲಕರ್ಮಿಗಳನ್ನೇ ನೇಮಿಸಲಾಗಿತ್ತು.

ಇಲ್ಲಿನ ಕಟ್ಟಡಗಳನ್ನು ಕಟ್ಟಲು ಬೇಕಾದ ಕಂದು ಅಥವಾ ಕೆಂಗುಲಾಬಿ ಇಲ್ಲವೇ ಬೂದುಬಣ್ಣದ ದೊಡ್ಡ ದೊಡ್ಡ ಬಂಡೆಗಳನ್ನು ಸುತ್ತಮುತ್ತಲಿನ ಗುಡ್ಡಗಳಲ್ಲಿದ್ದ ಬಂಡೆಗಳನ್ನು ಸೀಳಿಸಿ ತಂದು ಕಟ್ಟಲಾಯಿತು. ಕಂಬಗಳನ್ನು, ಅಡ್ಡ ತೊಲೆಗಳನ್ನು ಸರಿಯಾಗಿ ಎತ್ತಿ ನಿಲ್ಲಿಸುವಲ್ಲಿ ಆನೆಗಳ ಸಹಾಯ ಪಡೆಯಲಾಗಿತ್ತು. ಈ ಎಲ್ಲ ಸೂಕ್ಷ್ಮ ಜೋಡಣೆಗಳಲ್ಲೂ ಎಚ್ಚರಿಕೆ ವಹಿಸಲಾಗುತ್ತಿತ್ತು. ಈ ಕಂಬಗಳ ಮೇಲೆ ಅನೇಕ ಅಂತಸ್ತುಗಳನ್ನು ಕಟ್ಟಿದರೂ ಧಕ್ಕೆ ಬರದಂತೆ

೧೯೯೩ರ ಫೆಬ್ರುವರಿ ತಿಂಗಳ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ಜೇಸರಾಮ ಅವರ "ದಿ ವೈಬ್ರಂಟ್ ವಿಜಯನಗರ್" ಲೇಖನದ ಅನುವಾದ.

ಎಚ್ಚರಿಕೆ ವಹಿಸಲಾಗಿತ್ತು. ಎಲ್ಲ ಕಡೆ ಶಿಲ್ಪಿಗಳ ಕೆತ್ತನೆಯ ಕೆಲಸ ಎದ್ದು ಕಾಣುವಂತಿರುತ್ತಿತ್ತು. ಹಜಾರಾ ರಾಮಮಂದಿರದ ಕೆತ್ತನೆಯ ಕೆಲಸದಲ್ಲಿ ಹೂವಿನಾಕಾರ ಮತ್ತು ವರ್ತುಳಾಕಾರದ ವಿನ್ಯಾಸ ಕಾಣಸಿಗುತ್ತದೆ. ಅದರ ಜೊತೆಯಲ್ಲಿಯೇ ಕುದುರೆ, ಆನೆ, ದೇವದಾಸಿಯರ ನೃತ್ಯ ಮತ್ತು ಹಿಂದೂ ಪುರಾಣಗಳಿಂದ ಆಯ್ದ ಪಾತ್ರಗಳ ಚಿತ್ರಗಳನ್ನೂ ಕೆತ್ತಿದ್ದಾರೆ. ಏಕಶಿಲೆಯ ಒಂದು ಕಂಬ ಸುಮಾರು ೫ ಮೀಟರಿನಷ್ಟು ಉದ್ದವಿದ್ದು ಅದರ ಎಲ್ಲ ಬದಿಯಲ್ಲೂ ಸುಂದರವಾದ ಚಿತ್ರಗಳನ್ನು ಕೆತ್ತಲಾಗಿದೆ.

ಮಹಾನವಮಿಯ ದಿಬ್ಬ ಅಥವಾ ಕಲ್ಲಿನ ಸಿಂಹಾಸನವೆಂದು ಕರೆಯಲಾಗುವ ಒಂದು ಕಟೆದ ಬೆಣಚುಕಲ್ಲಿದ ಬಂಡೆಯ ಮೇಲೆ ಕೆತ್ತನೆಯ ಕೆಲಸಕ್ಕೆ ಸಾಕಷ್ಟು ಸ್ಥಳಾವಕಾಶವಿದೆ. ಭಾರತದ ಪುರಾಣಗಳಿಂದ ಆಯ್ದ ದೃಶ್ಯಗಳು, ರಣರಂಗದ ದೃಶ್ಯಗಳು, ರಾಜರುಗಳು, ಕುಲೀನ ವರ್ಗದವರ ಚಿತ್ರಗಳ ಜೊತೆಗೆ ಸಮಕಾಲೀನ ಜೀವನವನ್ನು ನಿರೂಪಿಸುವ ಚಿತ್ರಗಳನ್ನೂ ಈ ಬಂಡೆಯ ಮೇಲೆ ಕೆತ್ತಲಾಗಿದೆ. ಆ ಸ್ಥಾನದಲ್ಲಿ ನಡೆಯುತ್ತಿದ್ದ ನೃತ್ಯ ಕಾರ್ಯಕ್ರಮ, ಬೇಟೆಗೆ ಹೋಗುವುದು, ಒಂಟೆಗಳ ಸಾಲುಗಳನ್ನು ಕೆತ್ತಿದ್ದು ಇನ್ನೂ ಮಾಸಿಲ್ಲ. ಇಲ್ಲಿನ ಎಲ್ಲ ಕಟ್ಟಡಗಳಲ್ಲಿ ಇಸ್ಲಾಮಿ ಶಿಲ್ಪಕಲೆಯ ಪ್ರಭಾವವಿರುವುದು ಎದ್ದು ಕಾಣುತ್ತದೆ. ಅದರಲ್ಲೂ ತಿಳಿಗಚ್ಚಿನಿಂದ ಅಲಂಕೃತಗೊಂಡಿರುವ ಕಮಲಮಹಲ್ ಮತ್ತು ಆನೆಯ ಲಾಯಗಳ ಕಿಟಕಿ ಹಾಗೂ ಬಾಗಿಲು ದಾರಿಗಳಲ್ಲಿ ಇಸ್ಲಾಮಿ ಶಿಲ್ಪದ ಪ್ರಭಾವ ವಿಶೇಷವಾಗಿದೆ.

೧೬ನೆಯ ಶತಮಾನದ ಮಧ್ಯಭಾಗದಲ್ಲಿ ಹಂಪಿಯ ವೈಭವ ಬಹಳ ಊರ್ಜಿತಾವಸ್ಥೆಯಲ್ಲಿತ್ತು. ಡೊಮಿಂಗೊ ಪಾಯಸ್ ಎಂಬ ಹೆಸರಾಂತ ಪೋರ್ಚುಗೀಸ್ ಪ್ರವಾಸಿ ಅಂದಿನ ಹಂಪಿಯನ್ನು "ರೋಮಿನಷ್ಟೇ ದೊಡ್ಡದು ಮತ್ತು ಬಹಳ ಸುಂದರವಾದ"ದ್ದೆಂದು ವರ್ಣಿಸಿದನು. ಇಲ್ಲಿನ ಮಂದಿರಗಳು, ಅರಮನೆಗಳು, ಕಾಲುವೆಗಳು ಮತ್ತು ಏಳು ಸುತ್ತು ಗೋಡೆಗಳಿಂದ ಭದ್ರಪಡಿಸಲಾದ ಕೋಟೆ ೨೬ ಚ. ಕಿಲೊ ಮೀಟರಿನಷ್ಟು ವಿಸ್ತಾರ ಭಾಗದಲ್ಲಿ ಹರಡಿಕೊಂಡಿದ್ದವು. ೧೫೬೫ರಲ್ಲಿ ದಕ್ಕನ್ನಿನ ಸುಲ್ತಾನರು ದಾಳಿ ಮಾಡಿ ವಿಜಯನಗರದ ಸೈನ್ಯವನ್ನು (ರಕ್ಕಸತಂಗಡಿ ಯುದ್ಧದಲ್ಲಿ) ಸೋಲಿಸಿ ಈ ರಾಜಧಾನಿಯನ್ನು ಹಾಳುಮಾಡಿ ಹೋದರು. ಆದರೆ, ಬೆಂಗಳೂರಿನಿಂದ ಸುಮಾರು ೩೫೦ ಕಿ. ಮೀ. ದೂರದಲ್ಲಿರುವ ಈ ಬೃಹದಾಕಾರದ ವಾಸ್ತುಶಿಲ್ಪ ಸಮುಚ್ಚಯ ಈಗಲೂ ಶಿಥಿಲಗೊಳ್ಳದೆ ಭದ್ರವಾಗಿದೆ.

ವಿಜಯನಗರದ ಅನೇಕ ಮಂದಿರಗಳಲ್ಲಿ ಈಗಲೂ ಪೂಜೆ ನಡೆಯುತ್ತದೆ. ಭಕ್ತರು ಕಾಯಿ, ಹೂವು, ಕರ್ಪೂರಗಳನ್ನು ತಂದು ಸೇವೆ ಸಲ್ಲಿಸುತ್ತಾರೆ. ಕ್ಷಣಕ್ಕೊಮ್ಮೆ ಗಂಟೆ ಬಾರಿಸಿ ಆರಾಧ್ಯದೇವತೆಯಾದ ವಿರೂಪಾಕ್ಷನನ್ನು ಆರಾಧಿಸಲಾಗುತ್ತದೆ. ಹೊರ ಆವರಣದಲ್ಲಿ ಮಹಿಳೆಯರ ಹರಟೆ ನಡೆದಿರುತ್ತದೆ. ಕೆಲವು ಮಹಿಳೆಯರು ಒಗೆದ ಸೀರೆ-ಧೋತರಗಳನ್ನು ಬಿಸಿಲಿನಲ್ಲಿ ಒಣಗಿಸಲು ಕಟ್ಟೆಯ ಮೇಲೆ ಹರಡುತ್ತಿರುತ್ತಾರೆ. ಹತ್ತಿರದ ಬಾಜಾರದಲ್ಲಿ ಕೆಲವು ಮಳಿಗೆಗಳನ್ನು ವ್ಯಾಪಾರಿಗಳು ತಮ್ಮ ಮನೆಗಳನ್ನಾಗಿ ಬಳಸುತ್ತಿದ್ದಾರೆ. ಈ ವ್ಯಾಪಾರಿಗಳು ಅಗ್ಗದ ಬೆಲೆಯ ದೇವರ ಮೂರ್ತಿಗಳನ್ನು, ಕುಂಕುಮದ ಟಿಕಳಿಗಳನ್ನು ಮಾರುತ್ತಾರೆ.

ಧೂಳು ಹಾರಿಸುತ್ತ ಬರುವ ಬಸ್ಸುಗಳು ಭಾರತದ ಬೇರೆ ಬೇರೆ ಭಾಗಗಳಿಂದ ಹಾಗೂ ಹೊರದೇಶಗಳಿಂದ ಬರುವ ಪ್ರವಾಸಿಗರನ್ನು ತುಂಬಿಕೊಂಡು ಬರುತ್ತವೆ. ಆಗಾಗ ಬರುವ ಶಾಲಾಮಕ್ಕಳ ಗುಂಪುಗಳಂತೆ, ಈ ಪ್ರವಾಸಿಗರು ಕೂಡಾ ಪುರಾತನ ವಿಜಯನಗರದ ಮಾಗಿದ ಬೆಣಚುಕಲ್ಲಿಗೆ ತಮ್ಮ ಸ್ಪರ್ಶದಿಂದ ಮೆರಗು ತರುತ್ತಾರೆ.

ಗೋಪಾಲ ಆಶ್ರಿತ



ತಾಳ್ಮೆಯುಳ್ಳವನು ಜಗತ್ತಿನಲ್ಲಿ ಬಹುಕಾಲ ತಾಳ್ಮೆಯಿಂದ ಬದುಕಲಾರ. ಬಿಸಿ ನೀರನ್ನು ತಾಳ್ಮೆಯಿಂದ ತಣಿಸಿಯೇ ಕುಡಿಯಬೇಕೇ ವಿನಃ ತಣ್ಣೀರಿನಂತೆ ಗಟಗಟ ಕುಡಿಯುವುದಲ್ಲ.

—ರಮಣ ಮಹರ್ಷಿ

ಅಮೆರಿಕೆಯ ಹೊಸ ಸಾವಿನ ವ್ಯಾಪಾರಿಗಳು

* ಜರ್ಮನಿಯಲ್ಲಿ, ಕಪ್ಪು ಕಿರುಲಂಗವನ್ನು ತೊಟ್ಟಿರುವ ಮೂವರು ಮಹಿಳೆಯರು, ಡ್ರೆಸ್‌ಡೆನ್ ನಗರದ ಕೇಂದ್ರಭಾಗದಲ್ಲಿ, ಕ್ಯಾಡಿಲ್ಯಾಕ್ ಕಾರಿನ ಪಕ್ಕದಲ್ಲಿ ಪ್ರದರ್ಶನ ಮೇಜನ್ನು ಸಜ್ಜುಗೊಳಿಸಿದ್ದಾರೆ. ಸ್ಥಳೀಯ ಸಿಗರೇಟಿನ ಖಾಲಿ ಪ್ಯಾಕಿಗೆ ಬದಲಾಗಿ ಅವರು ಅಲ್ಲಿ ಹಾದುಹೋಗುವ ವ್ಯಕ್ತಿಗಳಿಗೆ 'ಲಕ್ಕಿ ಸ್ಟ್ರೈಕ್ಸ್' ಸಿಗರೇಟಿನ ಪ್ಯಾಕನ್ನೂ, ಒಂದು ಕರಪತ್ರವನ್ನೂ ಕೊಡುತ್ತ ಇದ್ದಾರೆ. ಕರಪತ್ರದಲ್ಲಿ ಹೀಗೆಂದು ಹೇಳಲಾಗಿದೆ: "ಇದೀಗ ನಿಮ್ಮ ಕೈಯಲ್ಲಿ ಅಮೆರಿಕೆಯಲ್ಲಿ ತಯಾರಾದ ಸುಂದರವಾದ ವಸ್ತುವೊಂದಿದೆ. 'ಲಕ್ಕಿ ಸ್ಟ್ರೈಕ್' ಮಾತ್ರವೇ ಅಸಲಿ....ಇದು ನಿಜವಾಗಿಯೂ ಅತ್ಯುತ್ಕೃಷ್ಟವಾದುದು." ಯುವಕರಲ್ಲಿ ಧೂಮಪಾನ ನಿಯಂತ್ರಣ ಕಾರ್ಯಕ್ರಮದ ಮೇಲ್ವಿಚಾರಕರಾಗಿರುವ ಜರ್ಮನ್ ವೈದ್ಯ ಬೆರ್ನ್‌ಹಾರ್ಡ್ ಹ್ಯೂಮ್‌ಬರ್ಗರ್ ಅವರು ಹೀಗೆನ್ನುತ್ತಾರೆ: "ಇಂಥ ಮಾರಾಟ ವರ್ಧನೆ ಕಾರ್ಯಕ್ರಮಗಳ ಅಂಗವಾಗಿ ಹದಿಹರೆಯದ ತರುಣ-ತರುಣಿಯರಿಗೆ ಮತ್ತೆ ಮತ್ತೆ ಸಿಗರೇಟುಗಳನ್ನು ಕಾಣಿಕೆಯಾಗಿ ನೀಡಲಾಗುತ್ತದೆ.

* ಹಳದಿ ಒಂಟೆಯ ವ್ಯಾಪಾರ-ಚಿಹ್ನೆಯಿಂದ ಅಲಂಕೃತವಾಗಿರುವ ವಾಹನವೊಂದು ಬ್ಯೂನೋಸ್ ಐರಿಸಿನ ಪ್ರೌಢಶಾಲೆಯೊಂದರ ಮುಂದೆ ಬಂದು ಸಿಲ್ಲುತ್ತದೆ. ಆ ವಾಕನದ ಚಾಲಕಿಯಾಗಿರುವ ಹೊಂಗೂದಲಿನ, ಹೊಂಬಣ್ಣದ ಮೈಕಾಂತಿಯ, ಖಾಕಿ ಬಣ್ಣದ ಸಫಾರಿ ಉಡುಗೆಯನ್ನು ತೊಟ್ಟಿರುವ ಮಹಿಳೆ ೧೫ ಮತ್ತು ೧೬ ವರ್ಷ ವಯಸ್ಸಿನ ಹರಿಹರೆಯದ ತಗುಣ-ತರುಣಿಯರಿಗೆ ಮುಫತ್ತಾಗಿ ಸಿಗರೇಟುಗಳನ್ನು ಹಂಚತೊಡಗುತ್ತಾಳೆ.

* ಮಲೇಷ್ಯಾವಲ್ಲಿ "ಸಲೇಮ್ ಮೋಲುನಾಡಿನಲ್ಲಿ ರಜೆ ಅವಧಿಯನ್ನು ಕಳೆಯುವ" ಬಗೆಗಿನ ದೂರದರ್ಶನದ ಜಾಹೀರಾತೊಂದಕ್ಕೆ ಸ್ಪಂದಿಸಿದ

೧೯೯೩ನೇ ಏಪ್ರಿಲ್ ತಿಂಗಳ 'ರೀಡರ್ಸ್ ಡೈಜೆಸ್ಟ್' ಸಂಚಿಕೆಯಲ್ಲಿ ಪ್ರಕಟವಾಗಿರುವ ವಿಲಿಯಂ ಎಕೆನ್‌ಬರ್ಗರ್ ಅವರ 'ಅಮೆರಿಕಾ'ಸ್ ನ್ಯೂ ಮರ್ಚೆಂಟ್ಸ್ ಆಫ್ ಡೆತ್' ಎಂಬ ಲೇಖನದ ಅನುವಾದ.

ವ್ಯಕ್ತಿ, ತನ್ನ ಪ್ರವಾಸಕ್ಕಾಗಿ ಸ್ಥಳವನ್ನು ಕಾಯ್ದಿರಿಸಲು ಯತ್ನಿಸಿದಾಗ, ಕಛೇರಿ ವ್ಯವಸ್ಥಾಪಕ ಅವನಿಗೆ ಅನುಮತಿ ನೀಡಲು ನಿರಾಕರಿಸುತ್ತಾನೆ. ದೂರದರ್ಶನದಲ್ಲಿ ಸಲೇಮ್ ಸಿಗರೇಟುಗಳ ಬಗೆಗಿನ ಜಾಹೀರಾತುಗಳ ಪ್ರಕಟಣೆ ಬಗ್ಗೆ ಆ ಸಂಸ್ಥೆಯೊಂದಿಗೆ ೨.೫ ದಶಲಕ್ಷ ಡಾಲರುಗಳ ವಾರ್ಷಿಕ ಒಪ್ಪಂದವನ್ನು ಏರ್ಪಡಿಸಿಕೊಂಡಿರುವ ವಿಚಾರವನ್ನು ಅವನು ಅನಂತರದಲ್ಲಿ ಒಪ್ಪಿಕೊಳ್ಳುತ್ತಾನೆ. ತಾಂತ್ರಿಕವಾಗಿ ಕಾನೂನನ್ನು ಉಲ್ಲಂಘಿಸದೆ, ಸಲೇಮ್ ಸಿಗರೇಟುಗಳ ಮಾರಾಟವನ್ನು ಇದು ಹೆಚ್ಚಿಸುತ್ತದೆ.

* ಟೈಪೆಯ ವೀಡಿಯೋ ಕ್ರೀಡಾಂಗಣವೊಂದರಲ್ಲಿ, ಎಲ್ಲ ಕ್ರೀಡಾ-ಮೇಜುಗಳ ಮೇಲೂ ಉಚಿತವಾಗಿ ಬಳಸಿಕೊಳ್ಳಬಹುದಾಗಿರುವ ಅನೇಕ ಮಾದರಿಯ ಅಮೆರಿಕನ್ ಸಿಗರೇಟುಗಳನ್ನು ಹರಡಿರುತ್ತಾರೆ. ಟಿ-ಷರ್ಟನ್ನು ತೊಟ್ಟಿರುವ, ಕುದುರೆಬಾಲದ ಕೇಶಾಲಂಕಾರ ಮಾಡಿಕೊಂಡಿರುವ, ಪ್ರೌಢ ಶಾಲೆಯ ವಿದ್ಯಾರ್ಥಿನಿಯೊಬ್ಬಳು ಹೀಗೆನ್ನುತ್ತಾಳೆ: "ಬಿಟ್ಟಿ ಸಿಗರೇಟುಗಳು ಇಲ್ಲಿ ಇರುವವರೆಗೂ, ನಾನೂ ಒಂದೊಂದು ಸಿಗರೇಟನ್ನು ಸೇದಿ ನೋಡಬಹುದು." ಮೂರು ವರ್ಷಗಳ ಹಿಂದೆ, ಅಮೆರಿಕಾ ಸಂಯುಕ್ತ ಸಂಸ್ಥಾನ ಸಿಗರೇಟು-ಮಾರುಕಟ್ಟೆಯನ್ನು ಪ್ರವೇಶಿಸುವುದಕ್ಕೆ ಮೊದಲು, ಹದಿಹರೆಯದವರು ಮತ್ತೆ ಮತ್ತೆ ಬರುವ ಇಂಥ ಎಡೆಗಳಲ್ಲಿ, ಬಿಟ್ಟಿ ಸಿಗರೇಟಿನ ಹಂಚಿಕೆಯ ನಿದರ್ಶನಗಳನ್ನು ಎಲ್ಲಿಯೂ ಕಾಣದೊರೆಯುತ್ತಿರಲಿಲ್ಲ.

ಅಮೆರಿಕನ್ ಸಿಗರೇಟು ತಯಾರಕರು ಲಕ್ಷಾಂತರ ಮಂದಿ ಮಕ್ಕಳನ್ನು ನಿಕೋಟಿನ್ ಚಟದತ್ತ ಸೆಳೆದುಕೊಳ್ಳುತ್ತಿದ್ದಾರೆ ಎಂಬುದನ್ನು, ನಾಲ್ಕು ಖಂಡಗಳಲ್ಲಿನ ೨೦ ದೇಶಗಳನ್ನೊಳಗೊಂಡಂತೆ 'ರೀಡರ್ಸ್ ಡೈಜೆಸ್ಟ್' ಪತ್ರಿಕೆ ನಡೆಸಿದ ತನಿಖೆ ಬಯಲಿಗೆಳೆದಿದೆ. ಅಲ್ಪ ವಯಸ್ಕರು ಸಿಗರೇಟ್ ಬಳಸುವುದನ್ನು ನಿರ್ಬಂಧಿಸುವ ಕಾನೂನು ಜಾರಿಯಲ್ಲಿರುವ ಅನೇಕ ನಾಡುಗಳಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನದ ತಂಬಾಕು ಕಂಪೆನಿಗಳು ಇಂಥ ಕಾನೂನಿಗೆ ವಿರುದ್ಧವಾಗಿ ಹೋರಾಟ ನಡೆಸುತ್ತ ಇವೆ; ಹಾಗೂ ಜಾಹೀರಾತುಗಳ ಪ್ರಕಟಣೆಯ ಮೇಲಿರುವ ನಿರ್ಬಂಧಗಳ ಆಶಯವನ್ನು ಜಾಣತನದಿಂದ ಉಲ್ಲಂಘಿಸುತ್ತ ಇವೆ. ಸಾರ್ವಜನಿಕ ಆರೋಗ್ಯದ ವಿಷಯದಲ್ಲಿ ಅವು ಎಂಥ ನಿಸಿಕತನದ ನಿರ್ಲಕ್ಷ್ಯ

ವನ್ನು ತೋರುತ್ತಿವೆ ಎಂಬುದನ್ನು ಈ ಕಂಪೆನಿಗಳ ಚಟುವಟಿಕೆಗಳು ಸಾರಿ ಹೇಳುತ್ತಿವೆ.

ಅತ್ಯಂತ ಆಘಾತಕಾರಿಯಾಗಿರುವ ತನಿಖಾಫಲಿತಾಂಶವೆಂದರೆ ಅಮೆರಿಕಾದ ಹೆಸರಿನಿಂದಲೇ ಮಕ್ಕಳನ್ನು ಸಿಗರೇಟು ಸೇವನೆಯ ತಪ್ಪು ಹಾದಿಗೆ ಎಳೆದು ಕೊಳ್ಳಲಾಗುತ್ತಿದೆ. ಪ್ರಬಲ ರಾಷ್ಟ್ರವೊಂದರ—ಅಂದರೆ, ಅಮೆರಿಕಾ ಸಂಯುಕ್ತ ಸರ್ಕಾರದ–ನೆರವು ಇಲ್ಲದೆ ಹೋಗಿದ್ದರೆ, ಕೆಲವೊಂದು ರಾಷ್ಟ್ರಗಳಲ್ಲಿ ಈ ತಂಬಾಕು ಕಂಪೆನಿಗಳಿಗೆ ತಳವೂರಲು ಸಾಧ್ಯವೇ ಆಗುತ್ತಿರಲಿಲ್ಲ.

ಕಳೆದ ಎಂಟು ವರ್ಷಗಳಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ಸಿಗರೇಟು ಗಳ ಮಾರಾಟ ಸತತವಾಗಿ ಕುಸಿಯುತ್ತ ಬಂದಿದ್ದರೂ, ೨೦೦೦ದ ಹೊತ್ತಿಗೆ ಏಳು ಮಂದಿ ಅಮೆರಿಕನ್ನರಲ್ಲಿ ಒಬ್ಬನು ಮಾತ್ರವೇ ಸಿಗರೇಟು ಸೇದುವ ಸಂಭವ ಇದೆಯಾದರೂ, ೧೯೮೫ ರಿಂದ ಈಚೆಗೆ ಇತರ ಕಡೆಗಳಲ್ಲಿ ಅಮೆರಿಕನ್ ಸಿಗರೇಟು ಗಳ ಮಾರಾಟ ಮೂರು ಪಟ್ಟಿಗಿಂತಲೂ ಹೆಚ್ಚಾಗಿ ಪರಿಣಮಿಸಿದೆ. ಮೂರನೆಯ ಜಗತ್ತಿನಲ್ಲಿ ಸಿಗರೇಟ್ ಸೇವನೆಯ ದರ ಪ್ರತಿವರ್ಷ ಶೇ.೨ಕ್ಕಿಂತಲೂ ಹೆಚ್ಚಾಗುತ್ತ ನಡೆದಿದೆ. ತುಂಬ ಗಾಬರಿಗೊಳಿಸುವಂಥ ಸಂಗತಿ ಎಂದರೆ ತರುಣರಲ್ಲಿ ಧೂಮಪಾನದ ಪ್ರಮಾಣ ಅತಿಯಾಗಿ ಹೆಚ್ಚುತ್ತಿರುವುದು. ಫಿಲಿಪ್ಪೀನ್ಸ್‌ನಲ್ಲಿ ೧೮ ವರ್ಷಕ್ಕಿಂತ ಕಡಿಮೆ ವಯಸ್ಸಿನ ತರುಣರಲ್ಲಿ ಇಂದು ಶೇ. ೨೨.೭ ರಷ್ಟು ಮಂದಿ ಧೂಮಪಾನ ಮಾಡುತ್ತಿದ್ದಾರೆ. ಲ್ಯಾಟಿನ್ ಅಮೆರಿಕಾದ ಕೆಲವು ನಗರ ಗಳಲ್ಲಿ ಹದಿಹರೆಯದ ಧೂಮಪಾನಿಗರ ದರ, ನಮ್ಮನ್ನು ಬೆಚ್ಚಿ ಬೀಳಿಸುವಂತೆ, ಶೇ. ೫೦ ರಷ್ಟು ಆಗಿಬಿಟ್ಟಿದೆ. ಹಾಂಕಾಂಗ್‌ನಲ್ಲಿ ೭ ವರ್ಷ ವಯಸ್ಸಿನ ಮಕ್ಕಳು ಕೂಡ ಧೂಮಪಾನ ಮಾಡುತ್ತಿವೆ.

ಈ ಚಿಕ್ಕ ಹುಡುಗರು ಮತ್ತು ತರುಣರು ಏಕೆ ಅಷ್ಟು ಮುಖ್ಯರಾಗುತ್ತಾರೆ? ಏಕೆಂದರೆ ಪ್ರತಿ ವರ್ಷ ಹಲವಾರು ಲಕ್ಷ ಮಂದಿ ವಯಸ್ಕರು ತಮ್ಮ ಈ ಅಭ್ಯಾಸ ವನ್ನು ಬಿಟ್ಟುಬಿಡುತ್ತಿದ್ದಾರೆ ಅಥವಾ ಸಾವನ್ನಪ್ಪುತ್ತಿದ್ದಾರೆ. ಹೀಗಾಗಿ ಸಿಗರೇಟ್ ಉದ್ಯಮ ಹೊಸ ಗ್ರಾಹಕರನ್ನು ತನ್ನತ್ತ ಎಳೆದುಕೊಳ್ಳುವುದನ್ನೇ ಅವಲಂಬಿಸಿಕೊಂಡಿರುತ್ತದೆ. ಬಹುತೇಕ ವ್ಯಕ್ತಿಗಳು ೧೨ ರಿಂದ ೧೬ ನೆಯ ವಯೋಮಾನದಲ್ಲಿ ಧೂಮಪಾನ ಮಾಡಲು ಆರಂಭಿಸುತ್ತಾರೆ. ೧೮ ನೆಯ ವರ್ಷದ ಒಳಗಾಗಿ ತರುಣ–ತರುಣಿ ಈ ಅಭ್ಯಾಸಕ್ಕೆ ಒಳಗಾಗಿಲ್ಲವೆಂದರೆ, ಅವನು–ಅವಳು ಧೂಮಪಾನಿಗರಾಗುವ ಸಂಭವ ತುಂಬ ಕಡಿಮೆಯಾಗಿರುತ್ತದೆ.

ಅಮೆರಿಕನ್ ಸಿಗರೇಟ್ ಕಂಪೆನಿಯು ಫಿಲಿಪ್ ಮಾರಿಸ್ ಅವರು [illegible]ಕಾದ

ವಾರ್ಷಿಕ ವರದಿಯಲ್ಲಿ ತಮ್ಮ ಷೇರುದಾರರಿಗೆ ಹೀಗೆಂದು ಭರವಸೆ ನೀಡಿದರು: "ಹೊಗೆಸೊಪ್ಪಿನ ಉದ್ಯಮ ನಿಜಕ್ಕೂ ಬೆಳೆಯುವಂಥ ಉದ್ಯಮ. ಜಗತ್ತಿನಾದ್ಯಂತ ಮಾರಾಟದ ಪ್ರಮಾಣದಲ್ಲಿ ಹಾಗೂ ಷೇರು ಬೆಲೆಗಳ ಹೆಚ್ಚಳದಲ್ಲಿ ನಾವು ಮುನ್ನಡೆಯುತ್ತಲೇ ಇದ್ದೇವೆ."

ಕಳೆದ ಬೇಸಿಗೆಯಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ನಡೆದ ಅಂತರ ರಾಷ್ಟ್ರೀಯ ಹೊಗೆಸೊಪ್ಪು ಸಮ್ಮೇಳನದಲ್ಲಿ, ಆರ್. ಜೆ. ರೆನಾಲ್ಡ್ (RJR) ಸಿಗರೇಟು ಕಂಪೆನಿಯ ಮುಖ್ಯ ಕಾರ್ಯಪಾಲಕ ಅಧಿಕಾರಿಯಾದ ಡೇಲ್ ಸಿಸೆಲ್ ಅವರು ಭಾವೋದ್ರೇಕದಿಂದ ಹೀಗೆಂದು ಹೇಳಿದರು: "ಅಂತರರಾಷ್ಟ್ರೀಯವಾಗಿ ಉದ್ಯಮದ ಬೆಳವಣಿಗೆಯ ಸಾಧ್ಯತೆಗಳು ಹಿಂದೆಂದೂ ಇಂದಿಗಿಂತ ಉತ್ತಮವಾಗಿರಲಿಲ್ಲ. ಜಗತ್ತಿನಾದ್ಯಂತ ಪ್ರತಿ ದಿನ ಒಂದು ಶತಕೋಟಿಗಿಂತಲೂ ಹೆಚ್ಚು ಮಂದಿ ಗ್ರಾಹಕರು ಬಳಸುತ್ತಿರುವಂಥ ಕಾನೂನು ಬದ್ಧವಾದ ಉತ್ಪನ್ನವನ್ನು ನಾವಿಂದು ಉತ್ಪಾದಿಸುತ್ತಿದ್ದೇವೆ ಹಾಗೂ ಮಾರಾಟ ಮಾಡುತ್ತಿದ್ದೇವೆ."

ಸಮ್ಮೇಳನದಲ್ಲಿ ಹೇಳದೆ ಇದ್ದ ಸಂಗತಿ ಎಂದರೆ ಧೂಮಪಾನವೇ ಅಕಾಲಿಕ ಸಾವಿನ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ ಎಂಬುದು; ಹಾಗೂ ಬಾಯಿ, ಶ್ವಾಸಕೋಶ, ಗಂಟಲ ನಾಳ, ಮೂತ್ರಕೋಶ, ಮೇದೋಜೀರಕಾಂಗ, ಮೂತ್ರಪಿಂಡ, ಗರ್ಭಗೊರಳು, ಇವುಗಳಿಗೆ ಸಂಬಂಧಿಸಿದ ಕ್ಯಾನ್ಸರ್ ರೋಗಕ್ಕೂ, ಹೃದಯರೋಗಗಳಿಗೂ ಧೂಮಪಾನಕ್ಕೂ ನೇರವಾದ ಸಂಬಂಧ ಇದೆ ಎಂಬುದು. ಅಥವಾ ವಿಶ್ವ ಆರೋಗ್ಯ ಸಂಸ್ಥೆಯ ವರದಿಯ ಪ್ರಕಾರ ಇಂದು ಮಕ್ಕಳಾಗಿರುವ ೨೦೦ ದಶಲಕ್ಷ ಮಂದಿಯನ್ನು ಧೂಮಪಾನ ಅಕಾಲಿಕವಾಗಿ ಕೊಲ್ಲಲಿದೆ ಹಾಗೂ ಅಂತಿಮವಾಗಿ ಅದು ಜಗತ್ತಿನ ಜನಸಂಖ್ಯೆಯ ಶೇ. ೧೦ ರಷ್ಟು ಮಂದಿಯನ್ನು ತೊಡೆದುಹಾಕಿಬಿಡಲಿದೆ ಎಂಬ ಸಂಗತಿಯನ್ನಾಗಲೀ ಅವರು ಅಲ್ಲಿ ಉಲ್ಲೇಖಿಸಲಿಲ್ಲ. ಈ ಕರಾಳ ಭವಿಷ್ಯಕ್ಕೆ ಸಾಗರೋತ್ತರ ಮಾರುಕಟ್ಟೆಗಳನ್ನು ಆಕ್ರಮಿಸಿಕೊಳ್ಳುವ ವಿಚಾರದಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನದ ಅದ್ಭುತ ಸಾಧನೆಯೇ ಬಹುಮಟ್ಟಿಗೆ ಕಾರಣವಾಗಿದೆ.

೫೦,೦೦೦ ಕ್ಕೂ ಹೆಚ್ಚು ವೈದ್ಯಕೀಯ ಅಧ್ಯಯನಗಳು ಈ ಅಪಾಯಗಳನ್ನು ಎತ್ತಿ ತೋರಿಸಿವೆ. ಇಷ್ಟಾಗಿಯೂ, ಅಂತರ-ರಾಷ್ಟ್ರೀಯ ಹೊಗೆಸೊಪ್ಪಿನ ಸಮ್ಮೇಳನದಲ್ಲಿ ನೆರೆದಿದ್ದ ಈ ವಂಚನಾಗುರುಗಳು ಧೂಮಪಾನದ ಬಗ್ಗೆ 'ಚರ್ಚೆ' ಮತ್ತು 'ವಿವಾದ'ಗಳು ಇರುವ ವಿಚಾರವನ್ನಷ್ಟೇ ಉಲ್ಲೇಖಿಸಿದರು.

ಸಾರ್ವಜನಿಕ ಆರೋಗ್ಯದ ಬಗೆಗಿನ ಅರ್ಜೆಂಟೈನಾ ಸಂಘದ ಅಧ್ಯಕ್ಷರಾಗಿರುವ

ಡಾ. ಕಾರ್ಲೋಸ್ ಫೆರ್ರೆಯ್ರಾ ನೂನೆಜ್ ಅವರು ಹೀಗೆಂದಿದ್ದಾರೆ: "ತಮ್ಮ ಕಂಪೆನಿಗಳು ಮತ್ತು ಸರ್ಕಾರ ಜಗತ್ತಿನಾದ್ಯಂತ ಮಕ್ಕಳಲ್ಲಿ ಧೂಮಪಾನದ ಅಭ್ಯಾಸವನ್ನು ಬೆಳೆಸಲು ಹೇಗೆ ಕಾರಣವಾಗುತ್ತಿವೆ ಎಂಬುದನ್ನು ಅಮೆರಿಕೆಯ ಜನತೆ ಖಚಿತವಾಗಿ ತಿಳಿದುಕೊಳ್ಳಬೇಕಾಗಿದೆ. ಅವರಿಗೂ ಈ ಕಥೆ ಪೂರ್ಣವಾಗಿ ತಿಳಿದಿದ್ದೇ ಆದರೆ, ಅವರು ಈ ದೌರ್ಜನ್ಯವನ್ನು ನಿಲ್ಲಿಸುತ್ತಾರೆಂದು ನಂಬಿದ್ದೇನೆ."

ಆ ಕಥೆ ಹೀಗಿದೆ :

ಆಕ್ರಮಣಶೀಲ ಪ್ರಭಾವ :

ಅಭಿವೃದ್ಧಿಶೀಲ ರಾಷ್ಟ್ರಗಳು ಅಸಾಮಾನ್ಯ ರೀತಿಯಲ್ಲಿ ಸಿಗರೇಟಿನ ಜಾಹೀರಾತು ವ್ಯವಸ್ಥೆಗೆ ಬಲಿಯಾಗುತ್ತಿವೆ. ಇತ್ತೀಚಿನವರೆಗೆ, ಇವುಗಳಲ್ಲಿ ಕೆಲವು ರಾಷ್ಟ್ರಗಳು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಮೂಲಕವಷ್ಟೇ ಹೊಗೆ ಸೊಪ್ಪನ್ನು ಮಾರಾಟ ಮಾಡುತ್ತಿದ್ದುವು. ಮನವೊಲಿಸುವ ಪ್ರಯತ್ನಗಳು ತೀರ ಕಡಿಮೆಯಾಗಿರುತ್ತಿದ್ದುವು ಅಥವಾ ಇರುತ್ತಲೇ ಇರಲಿಲ್ಲ ಎನ್ನಲೂ ಬಹುದು. ಬಹುಮಟ್ಟಿನ ಈ ರಾಷ್ಟ್ರಗಳಲ್ಲಿ ಪರಿಣಾಮಕಾರಿಯಾದಂಥ ಧೂಮಪಾನ ವಿರೋಧಿ ಚಳವಳಿಗಳು ಇಲ್ಲದೆ ಇರುವುದರಿಂದ, ಹೊಗೆಸೊಪ್ಪಿಗೂ ರೋಗಗಳಿಗೂ ಇರುವ ನಿಕಟವಾದ ಸಂಬಂಧದ ಬಗ್ಗೆ ಅವರು, ಆಶ್ಚರ್ಯವನ್ನುಂಟುಮಾಡುವಷ್ಟರಮಟ್ಟಿಗೆ, ಮುಗ್ಧರಾಗಿದ್ದಾರೆ. ಮನಿಲಾದಲ್ಲಂತೂ ಸ್ಥಳೀಯ ಸ್ಕೌಟ್ ತಂಡದ ಬಾಲಕರು ನಡೆಸಿಕೊಂಡು ಬರುತ್ತಿದ್ದ ಸಣ್ಣ-ಪುಟ್ಟ ತಿನಿಸುಗಳ ಅಂಗಡಿಯಲ್ಲೂ ಸಿಗರೇಟುಗಳು ಮಾರಾಟಕ್ಕೆ ಇದ್ದುದನ್ನು ನಾವು ಕಂಡೆವು.

ಮೇಲಾಗಿ ಅನೇಕ ಸರ್ಕಾರಗಳು ಧೂಮಪಾನ ವಿರೋಧಿ ಹೋರಾಟಗಳನ್ನು ನಡೆಸಲು ಹಿಂದೆಮುಂದೆ ನೋಡುತ್ತವೆ. ಏಕೆಂದರೆ, ಅವೆಲ್ಲ ಹೊಗೆಸೊಪ್ಪಿನ ಮೇಲಿನ ತೆರಿಗೆಗಳಿಂದ ಲಭಿಸುವ ಆದಾಯಕ್ಕೆ ಮಾರುಹೋಗಿಬಿಟ್ಟಿವೆ. ಅರ್ಜೆಂಟೈನಾದ ಒಟ್ಟಾರೆ ತೆರಿಗೆಯ ಆದಾಯದ ಶೇ. ೨೨.೫ರಷ್ಟು ಭಾಗ ಹೊಗೆಸೊಪ್ಪಿನಿಂದಲೇ ಬರುತ್ತಿದೆ; ಮಲಾವಿಯಲ್ಲಿ ಇದು ಶೇ. ೧೬.೭ರಷ್ಟಾಗಿದೆ.

ನಿಷ್ಕಪಟತೆ ಮತ್ತು ನಿರ್ಲಕ್ಷ್ಯದ ಈ ವಾತಾವರಣಕ್ಕೆ, ಅಮೆರಿಕೆಯ ಹೊಗೆ ಸೊಪ್ಪಿನ ಕಂಪೆನಿಗಳು, ಅಮೆರಿಕೆಯಲ್ಲಿ ಬಳಸುವ ಎದೆಗಾರಿಕೆಯನ್ನು ತೋರಲಾಗದಿರುವಂಥ ಮಾರುಕಟ್ಟೆಯ ಮಾಂತ್ರಿಕತೆಯನ್ನು ಮತ್ತು ತಂತ್ರಗಳನ್ನು ನಿರ್ಲಜ್ಜೆಯಿಂದ ತೂರಿಬಿಟ್ಟಿವೆ.

ಮಲೇಷ್ಯಾದಲ್ಲಿ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಲ್ಲಿ ಜನಪ್ರಿಯವಾಗಿರುವ 'ಗಿಲ-ಗಿಲ' ಎಂಬ ಹಾಸ್ಯ-ಪುಸ್ತಕದಲ್ಲಿ 'ಲಕ್ಕಿ ಸ್ಟ್ರೈಕ್' ಸಿಗರೇಟಿನ ಜಾಹೀರಾತನ್ನು ಸೇರಿಸಲಾಗಿದೆ. ಬುಡಾಪೆಸ್ಟ್‌ನಲ್ಲಿ ರಾಕ್-ನೃತ್ಯಕೂಟಗಳಿಗೆ ಅಥವಾ ಡಿಸ್ಕೊ ಪ್ರದರ್ಶನಗಳಿಗೆ ಹೋಗುವ ಹದಿ-ಹರೆಯದ ವ್ಯಕ್ತಿಗಳನ್ನು ಕೌಬಾಯ್ ಉಡುಗೆಯಲ್ಲಿರುವ ಆಕರ್ಷಕ ಮಹಿಳೆಯರು ನಿಯತ ರೂಪದಲ್ಲಿ ಭೇಟಿಮಾಡಿ, ಅವರುಗಳಿಗೆ ಮಾರ್ಲ್‌ಬರೋ ಸಿಗರೇಟುಗಳನ್ನು ನೀಡುತ್ತಾರೆ. ಆ ಸ್ಥಳದಲ್ಲಿಯೇ ದೀಪಹಿಡಿದು ನಿಲ್ಲುವಂಥ ವ್ಯಕ್ತಿಗಳಿಗೆ ಮಾರ್ಲ್‌ಬರೋ ತಂಪು ಕನ್ನಡಕಗಳನ್ನೂ ನೀಡಲಾಗುತ್ತದೆ.

ಅಮೆರಿಕಾ ಸಂಯುಕ್ತ ಸಂಸ್ಥಾನಕ್ಕಿಂತಲೂ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಹೊಗೆಸೊಪ್ಪಿನ ಜಾಹೀರಾತು ವಿಧಾನಗಳು ಹೆಚ್ಚು ಆಕ್ರಮಣಶೀಲವಾಗಿವೆ. ಮಾರ್ಲ್‌ಬರೋ ಸಿಗರೇಟ್ ಪ್ಯಾಕಿನ ರೂಪದಲ್ಲಿ ಆಫ್ರಿಕನ್ ವ್ಯಾಪಾರಿಗಳು ತಮ್ಮ ಅಂಗಡಿಗಳಿಗೆ ಮುಫತ್ತಾಗಿ ಬಣ್ಣ ಬಳಿಸಿಕೊಳ್ಳಬಹುದು. ಮಲೇಷ್ಯಾದ ಡಿಸ್ಕೋ ನೃತ್ಯಕೇಂದ್ರಗಳಲ್ಲಿನ ಕ್ರಿಸ್‌ಮಸ್ ವೃಕ್ಷಗಳಿಗೆ 'ಕೆಂಟ್' ಸಂಸ್ಥೆಯವರು ಮುಫತ್ತಾಗಿ ಒಪ್ಪ-ಓರಣಗಳನ್ನು ಮಾಡಿಕೊಡುತ್ತಾರೆ—'ಕೆಂಟ್' ವ್ಯಾಪಾರ ಚಿಹ್ನೆಗಳನ್ನು ಒಳಗೊಂಡಿರುವ ಚೆಂಡುಗಳನ್ನು ಮತ್ತು ನಕ್ಷತ್ರಗಳನ್ನು ಅಳವಡಿಸುವ ಮೂಲಕ. ಮೆಕ್ಸಿಕೋದಲ್ಲಿನ ದೂರದರ್ಶನದ ಐದು ವಾಣಿಜ್ಯ ಜಾಹೀರಾತುಗಳಲ್ಲಿ ಒಂದು ಸಿಗರೇಟುಗಳಿಗೆ ಸಂಬಂಧಿಸಿದ್ದಾಗಿರುತ್ತದೆ.

ಈ ಸಿಗರೇಟು ಕಂಪೆನಿಗಳ ಮಾರುಕಟ್ಟೆ ಆಯವ್ಯಯ ರಹಸ್ಯಸ್ವರೂಪದ್ದಾಗಿದೆಯಾದರೂ, ಅಂತರ-ರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಉತ್ಪನ್ನಗಳನ್ನು ಜಾಹೀರುಗೊಳಿಸುವ ವೆಚ್ಚವನ್ನು ಇವು ಹಲವು ಪಟ್ಟು ಹೆಚ್ಚಿಸಿವೆ. ಅಮೆರಿಕಾ ಸಂಯುಕ್ತ ಸಂಸ್ಥಾನಕ್ಕೆ ವಾರ್ಷಿಕವಾಗಿ ನಿಗದಿಪಡಿಸಲಾಗಿರುವ ೪ ಶತಕೋಟಿ ಡಾಲರುಗಳ ಮೊತ್ತಕ್ಕೆ ಇವು ಗಣನೀಯ ಪ್ರಮಾಣದ ಮೊತ್ತವನ್ನು ಸೇರಿಸಿವೆ ಎಂಬುದರಲ್ಲಿ ಅನುಮಾನವೇನೂ ಇಲ್ಲ. ಬ್ರಿಟಿಷ್ ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಮಾರುಕಟ್ಟೆ ವ್ಯವಹಾರದ ಪ್ರಾಧ್ಯಾಪಕರಾಗಿರುವ ರಿಚರ್ಡ್ ಪೊಲ್ಲಿ ಅವರು ಹೀಗೆನ್ನುತ್ತಾರೆ. "ಇದು ಅವರ ಮಟ್ಟಿಗೆ ಅತ್ಯಂತ ಮಹತ್ವದ ಸಂಗತಿಯಾಗಿದೆ. ಜಾಹೀರಾತು ವಿಧಾನದಲ್ಲಿ ಅತಿಪರಿಚಯತ್ವ ವಿಶ್ವಾಸವನ್ನೇ ಮೂಡಿಸುತ್ತದೆ."

ಸಿಗರೇಟಿನ ಬಗೆಗಿನ ಜಾಹೀರಾತುಗಳು ಈಗಾಗಲೇ ಧೂಮಪಾನಿಗಳಾಗಿರುವಂಥವರನ್ನೇ ಆಕರ್ಷಿಸುತ್ತವೆ ಎಂಬುದಾಗಿ ಹೊಗೆಸೊಪ್ಪಿನ ಕಂಪೆನಿಗಳ

ವಕ್ತಾರರು ಮತ್ತೆಮತ್ತೆ ವಾದಿಸುತ್ತಾರೆ. ಆದರೆ, ಇತ್ತೀಚಿನವರೆಗೆ ಫಿಲಿಪ್ ಮಾರಿಸ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಜಾಹೀರಾತು ವ್ಯವಸ್ಥಾಪಕ ಅಧಿಕಾರಿ, ತಮ್ಮ ಹೆಸರನ್ನು ತುಂಬ ಗುಟ್ಟಾಗಿಯೇ ಇರಿಸಬೇಕೆಂಬ ಷರತ್ತನ್ನು ಹಾಕಿ, ಹೀಗೆನ್ನುತ್ತಾರೆ: "ಏನು ನಡೆಯುತ್ತಿದೆ ಎಂಬುದನ್ನು ಅರ್ಥಮಾಡಿ ಕೊಳ್ಳಲು ನೀವು ಮೆದುಳಿನ ಶಸ್ತ್ರಚಿಕಿತ್ಸಕರಾಗಬೇಕಾದ ಅಗತ್ಯವೇನೂ ಇಲ್ಲ. ಜೋ ಕ್ಯಾಮೆಲ್‌ನಂಥ ಕಾರ್ಟೂನು ಪಾತ್ರ ಮಕ್ಕಳನ್ನು ಮರುಳುಗೊಳಿಸು ತ್ತದೆ ಎಂಬುದನ್ನು ನಿರಾಕರಿಸಲು ಯತ್ನಿಸುವುದು ಹಾಸ್ಯಾಸ್ಪದವೇ ಆಗುತ್ತದೆ."

ಅಮೆರಿಕೆಯ ವೈದ್ಯಕೀಯ ಸಂಘದ ಅಧ್ಯಕ್ಷರಾಗಿರುವ ಡಾ. ಜಾನ್ ಕ್ಲೋವ್ ಅವರು ಹೀಗೆನ್ನುತ್ತಾರೆ: "ಜಾಹೀರಾತುಗಳು ಮಕ್ಕಳಲ್ಲಿ ಹೊಗೆಸೊಪ್ಪಿನ ಬಳಕೆಯನ್ನು ಬೆಳೆಸುತ್ತವೆ ಎಂಬುದು ಸ್ಪಷ್ಟವಾಗಿಯೇ ಇದೆ. ಹೊಗೆಸೊಪ್ಪಿನ ಉದ್ಯಮ ಮುಂದೊಡ್ಡುವ ನಿರಾಕರಣೆಗಳು ಏನೇ ಇರಲಿ, ಜ್ಯೋ ಕ್ಯಾಮೆಲ್ ನಂಥ ಜಾಹೀರಾತುಗಳು ಹದಿಹರೆಯದವರಿಗೆ ತುಂಬ ಮೆಚ್ಚಿನವಾಗುತ್ತವೆ. ಏಕೆಂದರೆ, ಸಿಗರೇಟು ಸೇವನೆಗೂ, ಲೈಂಗಿಕ ಸಾಮರ್ಥ್ಯಕ್ಕೂ, ಕ್ರೀಡಾ ಪಟುತ್ವಕ್ಕೂ, ಅಷ್ಟುಮಾತ್ರವಲ್ಲ ಬಾಳಿನ ಒಟ್ಟಾರೆ ಯಶಸ್ಸಿಗೂ ಸಂಬಂಧವಿದೆ ಎಂಬ ಭಾವನೆಯನ್ನು ಅವು ಮೂಡಿಸುತ್ತವೆ.

ಸ್ವತಂತ್ರವಾಗಿ ನಡೆಸಿರುವ ಅನೇಕ ಅಧ್ಯಯನಗಳು ಈ ದೃಷ್ಟಿಕೋನವನ್ನು ಬೆಂಬಲಿಸುತ್ತವೆ. ಸಿಗರೇಟಿನ ಬಗೆಗಿನ ಜಾಹೀರಾತುಗಳು, ತರುಣರು ಧೂಮಪಾನಿ ಗಳಾಗುವ ಸಂಭವವನ್ನು ಹೆಚ್ಚಿಸುವಂಥ ಪರಿಸರವನ್ನು ಸೃಷ್ಟಿಸುತ್ತವೆ ಎಂಬು ದನ್ನು ಇವು ತೋರಿಸಿಕೊಟ್ಟಿವೆ.

ಛಾಪಿನ ವಿಸ್ತರಣೆ:

ಭಾರತದಲ್ಲಿ ಮಾಡಿರುವಂತೆ, ಹೆಚ್ಚು ಪ್ರಗತಿಶೀಲವಾಗಿರುವ ಕೆಲವೊಂದು ಅಭಿವೃದ್ಧಿಶೀಲ ರಾಷ್ಟ್ರಗಳು ದೂರದರ್ಶನದಲ್ಲಿ ಹಾಗೂ ರೇಡಿಯೋನಲ್ಲಿ ಸಿಗರೇಟಿಗೆ ಸಂಬಂಧಿಸಿದ ವಾಣಿಜ್ಯಾತ್ಮಕ ಜಾಹೀರಾತುಗಳನ್ನು ನಿಷೇಧಿಸಿವೆ. ಆದರೆ, ಇದು ಹೊಗೆಸೊಪ್ಪಿನ ಕಂಪೆನಿಗಳಿಗೆ ಅಡ್ಡಿಯೇನೂ ಆಗಿಲ್ಲ. ತಮ್ಮ ವ್ಯಾಪಾರ ಚಿಹ್ನೆ ಗಳು ಸಾರ್ವಜನಿಕರ ಕಣ್ಣಿನ ಮುಂದೆ ಇರುವಂತೆ ಮಾಡಲು ಅವು ಛಾಪಿನ ವಿಸ್ತರಣೆಯ ಕ್ರಮವನ್ನು ಆಶ್ರಯಿಸುತ್ತ ಇವೆ—ಅಂದರೆ, ಹೊಗೆಸೊಪ್ಪಿಗೆ ಸಂಬಂಧಿಸದೆ ಇರುವಂಥ ಉತ್ಪಾದನೆಗಳನ್ನು ಮತ್ತು ಸೇವೆಗಳನ್ನು ತನ್ನ ಕಂಪೆನಿಗಳ ಹೆಸರಿನಲ್ಲಿ ಪ್ರಚುರಪಡಿಸುವುದು. ಇವುಗಳಲ್ಲಿ ಅನೇಕ ವಸ್ತ್ರಗಳು

ತರುಣರಿಗೆ ವಿಶೇಷ ಆಕರ್ಷಣೆಯ ವಸ್ತುಗಳಾಗಿವೆ. ಉದಾಹರಣೆಗೆ ಮಾರ್ಲ್‌ಬರೋ ಜೀನ್ಸ್ ಮತ್ತು ಜಾಕೆಟ್ಟುಗಳು. ಮಲೇಷ್ಯಾದಲ್ಲಿ ಸಂಗೀತದ ಅಂಗಡಿಯೊಂದು 'ಸಲೇಮ್ ಪವರ್ ಸ್ಟೇಷನ್' ಎಂಬ ಹೆಸರನ್ನಿಟ್ಟುಕೊಂಡು, ತಮ್ಮ ಗ್ರಾಹಕರು ಕೊಳ್ಳುವ ಟೇಪುಗಳನ್ನು, ಕ್ಯಾಸೆಟ್ಟುಗಳನ್ನು ವಿಸ್ತೃತ ಡಿಸ್ಕುಗಳನ್ನು ಸಲೇಮ್ ಸಿಗರೇಟಿನ ವ್ಯಾಪಾರ ಚಿಹ್ನೆಯುಳ್ಳ ಚೀಲಗಳಲ್ಲಿ ಪ್ಯಾಕ್ ಮಾಡಿಕೊಡುತ್ತದೆ; ದೂರದರ್ಶನ 'ಎಂಟಿವಿ-ಪ್ರದರ್ಶನ'ವನ್ನು ಹೋಲುವ 'ಸಲೇಮ್ ಜನಪ್ರಿಯ ಹಾಡುಗಳು' ಕಾರ್ಯಕ್ರಮವನ್ನು ಪ್ರಸಾರ ಮಾಡುತ್ತದೆ. ಬುಡಾಪೆಸ್ಟ್ ಬಾನುಲಿ ಕೇಂದ್ರ 'ಮಾರ್ಲ್‌ಬರೋ ಯಶಸ್ವಿ ಗೀತೆಗಳ ಮಾಲೆ'ಯನ್ನು ಪ್ರಸಾರ ಮಾಡಿದರೆ, ಚೀಣಾದಲ್ಲಿ 'ಫಿಲಿಪ್ ಮಾರಿಸ್' ಪ್ರಾಯೋಜಿಸುವ ಕಾರ್ಯಕ್ರಮವನ್ನು 'ಮಾರ್ಲ್‌ಬರೋ ಅಮೆರಿಕನ್ ಸಂಗೀತ ಸಮಯ' ಎಂದು ಕರೆಯಲಾಗಿದೆ. ರಾಕ್ ಮತ್ತು ಡಿಸ್ಕೋ ಸಂಗೀತ ಕಾರ್ಯಕ್ರಮಗಳೂ ಹಾಗೂ ಕ್ರೀಡಾ ಕಾರ್ಯಕ್ರಮಗಳೂ ಇದೇ ಬಗೆಯ ಪ್ರಾಯೋಜಿತ ಕಾರ್ಯಕ್ರಮಗಳ ಪಟ್ಟಿಗೆ ಸೇರುತ್ತಿವೆ. ಇವು ಅತ್ಯಂತ ಜನಪ್ರಿಯ ಕಾರ್ಯಕ್ರಮಗಳಾಗಿವೆ. ಅಮೆರಿಕೆಯ ಹೊಗೆಸೊಪ್ಪು ಕಂಪೆನಿಗಳು ೧೯೮೫ರಲ್ಲಿ ಇಂಥ ಕ್ರೀಡಾ ಸಮಾವೇಶಗಳನ್ನು ಪ್ರಾಯೋಜಿಸಲು ೧೦೦ ದಶಲಕ್ಷ ಡಾಲರುಗಳನ್ನು ವೆಚ್ಚ ಮಾಡಿವೆ—ಇದು ೧೯೭೫ರಲ್ಲಿ ಅವು ಮಾಡಿದ ವೆಚ್ಚದ ಎರಡರಷ್ಟಾಗಿದೆ.

ಅಂತೆಯೇ, ದೂರದರ್ಶನ ಜಾಹಿರಾತು ನಿಯಮಗಳನ್ನೂ ಇವು ಜಾಣತನದಿಂದ ಮೀರಿನಿಲ್ಲುತ್ತಿವೆ. ಶಾಂಘಾಯ್‌ನಲ್ಲಿ 'ಫಿಲಿಪ್ ಮಾರಿಸ್' ಪ್ರಾಯೋಜಿಸುವ 'ಮಾರ್ಲ್‌ಬರೋ ಜಗತ್ತು' ಇಂಥ ಒಂದು ಕಾರ್ಯಕ್ರಮ. ಸಿಗರೇಟುಗಳನ್ನು ತೋರಿಸುವುದಿಲ್ಲ ಎಂಬುದನ್ನು ಬಿಟ್ಟರೆ, ಅದಕ್ಕೂ ಮಾರ್ಲ್‌ಬರೋ ವಾಣಿಜ್ಯ ಜಾಹಿರಾತಿಗೂ ವ್ಯತ್ಯಾಸವೇನೂ ಇಲ್ಲ. ಇಲ್ಲಿಯೂ ಮಾರ್ಲ್‌ಬರೋ ಪುರುಷ ಮತ್ತು ಅವನ ಕುದುರೆ ಝರಿಯೊಂದನ್ನು ದಾಟಿಹೋಗುತ್ತಾರೆ; ಅವನು ಕುದುರೆಯಿಂದ ಇಳಿದು ಯಾವುದೋ ಬೆಟ್ಟಗಳನ್ನು ದಿಟ್ಟಿಸತೊಡಗುತ್ತಾನೆ. ಪ್ರವಾಸಸಂಬಂಧಿ ಜಾಹಿರಾತುಗಳಂತೂ ದಾರಿತಪ್ಪಿಸುವಂಥ ಛಾಪಿನ ವಿಸ್ತರಣೆಯ ಕಾರ್ಯಕ್ರಮಗಳೇ ಆಗಿವೆ. ಈ ಸಂಸ್ಥೆಗಳ ಹೆಸರಿನಲ್ಲಿ, ವ್ಯಾಪಾರ ಚಿಹ್ನೆಗಳನ್ನು ಹೊತ್ತು ಬರುವ ಈ ಜಾಹಿರಾತುಗಳು ವಾಸ್ತವವಾಗಿ ಅಸ್ತಿತ್ವದಲ್ಲಿಯೇ ಇಲ್ಲದ ಕಾರ್ಯಕ್ರಮಗಳಾಗಿರುತ್ತವೆ.

ಛಾಪಿನ ವಿಸ್ತರಣೆಯ ತಂತ್ರಕ್ಕೆ ಸಿಕ್ಕಿಕೊಳ್ಳುವ ಮಕ್ಕಳು ರೂಢಿಸಿಕೊಳ್ಳುವ

ಸಿಗರೇಟು ಸೇವನೆಯ ಅಭ್ಯಾಸಗಳು ಮೊದಲಿಗೆ ನವುರಾದ ಜೇಡನ ಬಲೆಯಂತೆ ತೋರಿದರೂ, ಕೊನೆಗೆ, ಅವು ಕಬ್ಬಿಣದ ಹೊರಜುಗಳೇ ಆಗಿ ಪರಿಣಮಿಸುತ್ತವೆ ಎಂಬುದು ನಿಜಕ್ಕೂ ದುರದೃಷ್ಟದ ಸಂಗತಿಯೇ ಆಗಿದೆ.

ಸುಲಭವಾಗಿ ಸಿಕ್ಕುವುದು :

ಡಿಸ್ಕೋ ಕೇಂದ್ರಗಳಲ್ಲಿ ಪುಕ್ಕಟೆ ಸಲೇಮ್ ಸಿಗರೇಟುಗಳನ್ನು ಇರಿಸಿರುವುದೂ ಇಂಥ ಒಂದು ತಂತ್ರ. 'ಹೊಗೆಸೊಪ್ಪುಮುಕ್ತ ತರುಣ ಜಗತ್ತು' ಪತ್ರಿಕೆಯ ಸಂಪಾದಕರಾದ ಜೋ ಟ್ರೈ ಅವರು ಹೀಗೆನ್ನುತ್ತಾರೆ: "ಅಮೆರಿಕೆಯ ಹೊಗೆಸೊಪ್ಪು ಕಂಪೆನಿಗಳು ಪುಕ್ಕಟೆಯಾಗಿ ಸಿಗರೇಟುಗಳನ್ನು ಹಂಚುವ ಸಲುವಾಗಿಯೇ, ತಮ್ಮ ಜಾಹೀರಾತು ವೆಚ್ಚದ ಶತಕೋಟಿ ಡಾಲರುಗಳಲ್ಲಿ ಕಾಲು ಭಾಗವನ್ನು ಮೀಸಲಾಗಿಟ್ಟಿವೆ. ಇವುಗಳಲ್ಲಿ ಬಹುಮಟ್ಟಿನ ಸಿಗರೇಟುಗಳನ್ನು ಸೇದುವವರು ಮಕ್ಕಳು ಮತ್ತು ಹದಿಹರೆಯದ ತರುಣರು. ಒಬ್ಬ ತರುಣ ನಾಲ್ಕಾರು ಪ್ಯಾಕುಗಳಷ್ಟು ಸಿಗರೇಟುಗಳನ್ನು ಸೇದುವಂತೆ ಮಾಡಿದರೆ, ಅವನು ಜೀವನವಿಡೀ ಸಿಗರೇಟಿನ ಗ್ರಾಹಕನಾಗಿ ಉಳಿಯುವ ಸಂಭವವೇ ಇದೆ." ಡಿಸ್ಕೋ ಕೇಂದ್ರಗಳಿಗೆ ಅಲ್ಪ ವಯಸ್ಕರನ್ನು ಬಿಡುವುದಿಲ್ಲ ಎಂಬುದು ಕೇವಲ ವಾದಕ್ಕಾಗಿ ಹೇಳುವ ಮಾತಾಗಿದೆ. ಇವರ ಪರಿಣಾಮವಾಗಿ, ಚಿಲಿಯಲ್ಲಿ ೧೩ ವರ್ಷ ವಯಸ್ಸಿನ ಮಕ್ಕಳಲ್ಲಿ ಇಂದು ಶೇ. ೪೦ ರಷ್ಟು ಮಂದಿ ಧೂಮಪಾನಿಗರಾಗಿದ್ದಾರೆ. ಇತರ ಕಡೆಗಳಲ್ಲಿಯೂ, ಈ ಪ್ರಮಾಣ ಕಡಿಮೆಯೇನೂ ಆಗಿಲ್ಲ. ಇದರ ಜೊತೆಗೆ ಅಗ್ಗದ ದರದಲ್ಲಿ ಸಿಗರೇಟು ಮಾರುವ ತಂತ್ರವನ್ನೂ ಆಶ್ರಯಿಸಲಾಗುತ್ತಿದೆ. ಆಫ್ರಿಕಾದಲ್ಲಿನ ಮಕ್ಕಳಂತೂ ಎರಡೇ ಆಸೆಗಳನ್ನು ಇರಿಸಿಕೊಂಡಿದ್ದಾರೆ: "ಒಂದು ಸ್ವರ್ಗಕ್ಕೆ ಹೋಗುವುದು ; ಇನ್ನೊಂದು ಅಮೆರಿಕೆಗೆ ಹೋಗುವುದು." ಜಾಹೀರಾತುಗಳಲ್ಲಿ ಧೂಮಪಾನಕ್ಕೂ ಶ್ರೀಮಂತಿಕೆಗೂ ನಿಕಟ ಸಂಬಂಧವನ್ನು ಕಲ್ಪಿಸಿರುವುದೇ ಈ ಬಗೆಯ ಭ್ರಮೆಗಳಿಗೆ ಕಾರಣವಾಗಿದೆ.

ಅಮೆರಿಕನ್ ಆದರ್ಶ :

ಅಮೆರಿಕೆಯ ಈ ಜಾಹೀರಾತುಗಳಿಂದ ಆಗಿರುವ ದುಷ್ಪರಿಣಾಮಕ್ಕೆ ಚೀನಾದ 'ಸಚಿವಾಲಯ ಶಿಕ್ಷಣ ಸಂಸ್ಥೆ'ಯ ವಿದ್ಯಾರ್ಥಿಗಳ ಈ ಪತ್ರ ಸಾಕ್ಷಿಯಾಗಿದೆ. ಅವರು ಅದರಲ್ಲಿ ಹೀಗೆಂದು ಹೇಳಿದ್ದಾರೆ: "ಪ್ರತಿ ದಿನವೂ ನಾವು 'ಮಾರ್ಲ್‌ಬರೋ ಸಂಗೀತ ಸಮಯ'ವನ್ನು ಕೇಳುತ್ತೇವೆ. ಎಲ್ವಿಸ್ ಪ್ರಿಸ್ಲಿ

ಮತ್ತು ಮೈಕೇಲ್ ಜಾಕ್ಸನ್ ಅವರ ಸಂಗೀತ ನಮಗೆ ಸಂತೋಷವನ್ನುಂಟು ಮಾಡುತ್ತದೆ. ನಾವು ಅಮೆರಿಕನ್ ಸಿಗರೇಟುಗಳನ್ನು ಸೇದುತ್ತೇವೆ; ಅಮೆರಿಕನ್ ಬಟ್ಟೆಗಳನ್ನು ತೊಡುತ್ತೇವೆ. ಅಮೆರಿಕೆಯ ಬಗ್ಗೆ ಇನ್ನಷ್ಟು ತಿಳಿದು ಕೊಳ್ಳಲು ನಾವು ಕಾತರರಾಗಿದ್ದೇವೆ." ಅಮೆರಿಕೆಯಲ್ಲಿ ಇರುವವರೆಲ್ಲರೂ ಸಿಗರೇಟು ಸೇದುತ್ತಾರೆ ಎಂಬ ಭ್ರಮೆಯನ್ನು ಮೂಡಿಸಲಾಗಿದೆ. ಆದರೆ ಸಿಗರೇಟು ಸೇವನೆಯ ಪ್ರಮಾಣ ಅತ್ಯಂತ ಕಡಿಮೆಯಾಗಿರುವುದು—೨.೨೫ರಷ್ಟು ಅಮೆರಿಕೆಯಲ್ಲಿಯೇ.

ಒತ್ತಡದ ತಂತ್ರಗಳು:

ಸಿಗರೇಟು ಸೇವನೆಯೇ ಸಾವು ಮತ್ತು ರೋಗಗಳಿಗೆ ಪ್ರಮುಖ ಕಾರಣವಾಗಿದೆ ಎಂಬುದಾಗಿ ೧೯೬೪ ರಲ್ಲಿ ತೀರ್ಮಾನಿಸಿದ, ತನ್ನ ನಾಡಿನಲ್ಲಿ ಸಿಗರೇಟ್ ಸೇವನೆಗೆ ಪ್ರೋತ್ಸಾಹ ನೀಡದ ಅಮೆರಿಕನ್ ಸರ್ಕಾರ, ಇತರ ದೇಶಗಳಲ್ಲಿ ಇದಕ್ಕೆ ಪ್ರೋತ್ಸಾಹ ನೀಡುತ್ತಿರುವುದಾದರೂ ಏಕೆ?

ಅನೇಕ ವರ್ಷಗಳವರೆಗೆ ಜಪಾನ್, ಕೊರಿಯಾ, ಟೈವಾನ್ ಮತ್ತು ಥೈಲೆಂಡ್ ಸಿಗರೇಟು ಆಮದಿನ ಮೇಲೆ ನಿರ್ಬಂಧವನ್ನು ಹೇರಿದ್ದವು. ಆದರೆ, ೧೯೮೦ರ ದಶಕದ ಮೊದಲ ವರ್ಷಗಳಲ್ಲಿಯೇ ಅಮೇರಿಕ ಏಷ್ಯನ್ ಮಾರುಕಟ್ಟೆಗಳ ಮೇಲೆ ಆಕ್ರಮಣವನ್ನೆಸಗಿತು. ಇದಕ್ಕೆ ಅದು ಬಳಸಿದ್ದು ೧೯೭೪ರ ವ್ಯಾಪಾರ ಕಾಯ್ದೆಯ ೩೦೧ ನೆಯ ಪ್ರಕರಣವನ್ನು—ಅಮೆರಿಕನ್ ಉತ್ಪಾದನೆಗಳ ಮೇಲೆ ನ್ಯಾಯೋಚಿತವಲ್ಲದ ನಿರ್ಬಂಧಗಳನ್ನು ವಿಧಿಸುವ ರಾಷ್ಟ್ರಗಳ ವಿರುದ್ಧ ದಂಡನಾತ್ಮಕ ಕ್ರಮಕೈಗೊಳ್ಳುವ ಅಧಿಕಾರವನ್ನು. ಜಪಾನ್, ಕೊರಿಯಾ ಮೊದಲಾದ ರಾಷ್ಟ್ರಗಳೆಲ್ಲ ಈ ಕೈತಿರುಚುವ ತಂತ್ರಕ್ಕೆ ಮಣಿದುವು.

ಇದರ ಪರಿಣಾಮ ವಿಧ್ವಂಸಕವಾಗಿದೆ: ೧೯೮೭ ರಿಂದ ಈಚೆಗೆ ಜಪಾನಿನಲ್ಲಿ ಸಿಗರೇಟು ಸೇವನೆಯ ಪ್ರಮಾಣ ಶೇ. ೧೬ ರಷ್ಟು ಹೆಚ್ಚಿದೆ. ಟೈವಾನಿನಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಲ್ಲಿ ಇದರ ಪ್ರಮಾಣ ಎರಡೇ ವರ್ಷಗಳಲ್ಲಿ (೧೯೮೫-೮೭) ಶೇ. ೩೨.೨ಕ್ಕೆ ಏರಿದೆ. (ಶೇ. ೧೯.೫ ರಿಂದ), ಥೈಲೆಂಡಿನಲ್ಲಿ ಇದು ಶೇ. ೨೪ಕ್ಕೆ ಏರಿದೆ.) (ಶೇ. ೧೫. ರಿಂದ). ಟೈವಾನಿನ ಧೂಮಪಾನ ವಿರೋಧಿ ಸಮುದಾಯದ ಅಧ್ಯಕ್ಷರಾದ ಡೇವಿಡ್ ಯೆನ್ ಹೇಳುತ್ತಾರೆ: "ಸಿಗರೇಟ್ ಸೇವನೆ ಮಾಡದಂತೆ ತಡೆಯುವ ನಮ್ಮ ಕಾರ್ಯಕ್ರಮದಲ್ಲಿ ನಾವು

ಸಾಕಷ್ಟು ಮುನ್ನಡೆಯನ್ನು ಸಾಧಿಸಿದ್ದೆವು. ಆದರೆ, ಅಮೆರಿಕನ್ ಜಾಹೀರಾತಿನ ಪ್ರವಾಹ ಅದೆಲ್ಲವನ್ನೂ ಕೊಚ್ಚಿ ಹಾಕಿಬಿಟ್ಟಿದೆ." ಆದ್ದರಿಂದಲೇ ಅವರು ಹೀಗೆಂದು ಹೇಳತೊಡಗಿದ್ದಾರೆ: "ನಮಗೆ ನಿಮ್ಮ ಸ್ನೇಹ ಬೇಕೇ ಹೊರತು ಸಿಗರೇಟಲ್ಲ."

ಸಿಗರೇಟ್ ಲಾಬಿ ಕ್ಲಿಂಟನ್ ಆಡಳಿತದಲ್ಲಿ ಮತ್ತಷ್ಟು ಪ್ರಬಲವಾಗಿದೆ. ಇದರಿಂದಾಗಿ "ಕುರಿಗಳ ಹಿಂಡನ್ನು ಕಾಯುವ ಕೆಲಸವನ್ನು ತೋಳಕ್ಕೆ ವಹಿಸಿದಂತಾಗಿದೆ" ಎಂದು ಕ್ಯಾಲಿಫೋರ್ನಿಯಾದ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಸ್ಟ್ಯಾಂಟನ್ ಗ್ಲಾಂಟ್ಸ್ ಹೇಳಿದ್ದಾರೆ. ಅಮೆರಿಕೆಯ ಸಿಗರೇಟು ರಫ್ತು ವ್ಯಾಪಾರ ದಿನೇ ದಿನೇ ಏರುತ್ತಲೇ ನಡೆದಿದೆ. ಆರ್. ಜೆ. ರೆನಾಲ್ಡ್ಸ್ ಸಂಸ್ಥೆಯ ಡೇಲ್‌ಸಿಸೆಲ್ ಅವರು ಅಂತರರಾಷ್ಟ್ರೀಯ ಹೊಗೆಸೊಪ್ಪು ಸಮ್ಮೇಳನವನ್ನು ಉದ್ದೇಶಿಸಿ ಹೇಳಿದಂತೆ, "ಹೊರ ದೇಶಗಳಲ್ಲಿನ ಈ ಉದ್ಯಮದ ವಿಸ್ತರಣೆ ಇನ್ನೂ ಬೃಹತ್ತಾದ ಮತ್ತು ಉಜ್ವಲವಾದ ಭವಿಷ್ಯಕ್ಕೆ ಹಾದಿಯನ್ನು ತೆರೆಯುತ್ತದೆ."

ಈ ಬಗೆಯ ಮಾತುಗಳು ಅರ್ಜೆಂಟೈನಾದ ಡಾ. ಫೆರ್ರೆಯ್ರಾ ನ್ಯೂನೆಜ್ ಅವರು ಕೋಪೋದ್ರಿಕ್ತರಾಗಿ ಹೀಗೆ ಕಿಡಿನುಡಿಗಳನ್ನು ಕಾರುವಂತೆ ಮಾಡುತ್ತದೆ: "ತಮ್ಮ ಉತ್ಪನ್ನಗಳು ಸಾವನ್ನು ತರುತ್ತವೆ ಎಂಬುದು ಅಮೆರಿಕೆಯ ಈ ತಂಬಾಕು ಕಂಪೆನಿಗಳಿಗೆ ಚೆನ್ನಾಗಿ ಗೊತ್ತಿದೆ. ಇಷ್ಟಾಗಿಯೂ, ಅವು ಮಕ್ಕಳಲ್ಲಿ ಧೂಮಪಾನದ ಅಭ್ಯಾಸ ಧಳೆಯುವಂತೆ ಮಾಡುತ್ತಿವೆ. ಅವರೇನು ಯೋಚನೆ ಮಾಡುತ್ತಿದ್ದಾರೆ? ಅವರಿಗೆ ಮಕ್ಕಳು-ಮರಿ ಇಲ್ಲವೇನು ?"

ಆರತಿ ಪ್ರಧಾನ್

ಬಿರುಗಾಳಿ ಬೀಸುತ್ತಿರುವಾಗ ಯಾವ ಮರವನ್ನೂ ಗುರುತು ಹಚ್ಚುವುದು ಕಷ್ಟ. ಸಾಕ್ಷಾತ್ಕಾರಕ್ಕೆ ಮೊದಲು ಯಾರೂ ಕರ್ಮಗಳನ್ನು ಬಿಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಕಾಯಿ ಬಂದೊಡನೆ ಹೂ ಉದುರುವುದು, ಭಕ್ತಿಯೇ ಕಾಯಿ, ಕರ್ಮವೇ ಮೋಕ್ಷ.

—ರಾಮಕೃಷ್ಣ ಪರಮಹಂಸ

ತಲೆಗೆ ತೀವ್ರ ಗಾಯ, ಅದರ ಚಿಕಿತ್ಸೆ ಹಾಗೂ ಮರುಕಲಿಕೆ

೧೯೯೩ರ ಜನವರಿಯ ಒಂದು ಬೆಳಗ್ಗೆ ನ್ಯೂಯಾರ್ಕಿನ ಪ್ಲೆಸೆಂಟ್ ವಿಲ್ಲಿನಿಂದ ಸಂಯುಕ್ತ ಸಂಸ್ಥಾನದ ರೀಡರ್ಸ್ ಡೈಜೆಸ್ಟಿನ ಸಂಪಾದಕೀಯ ವ್ಯವಹಾರ ವಿಭಾಗಕ್ಕೆ ಒಂದು ಕಾಗದ ಬಂತು. ತಲೆಗೆ ತೀವ್ರ ಗಾಯವಾಗಿ ಚಿಕಿತ್ಸಿಸಲ್ಪಟ್ಟು ಗುಣವಾದ ಒಬ್ಬ ಯುವಕನ ವಿಚಾರವಾಗಿ ಬರೆದು, "ಈ ಲೇಖನದಲ್ಲಿ ಆಸಕ್ತಿ ಉಂಟೆ" ಎಂದು ಆ ಯುವಕನ ತಂದೆ ಟಾಮ್ ಹೆವಿಟ್ ಉತ್ತರ ಕ್ಯಾರೋಲೀನದ ಫೆಯೆಟ್‌ವಿಲ್‌ನಿಂದ ಕಳುಹಿಸಿದ್ದ. ಇದನ್ನು ಸಂಪಾದಕ ವರ್ಗದ ಒಬ್ಬಾಕೆ ಓದಿ ನೋಡಿ "ಇಗೋ ಈ ಸಂಸಾರ ಪ್ರಮಾದತಮ ಹಾನಿಯಾಗಬಹುದಾಗಿದ್ದ ಒಂದು ಸಂದರ್ಭದಲ್ಲಿ ನಂಬಿಕೆಯನ್ನು ಎಂದೂ ಕೈಬಿಡಲಿಲ್ಲ. ಈ ಸಂದೇಶವನ್ನು ವ್ಯಾಪಕವಾಗಿ ಜನ ಕೇಳಬೇಕು. ತೀರ ನಿರಾಶ ಸಂದರ್ಭ ಯಾವುದೂ ಇಲ್ಲ ಎಂದು ಈ ಒಬ್ಬ ವ್ಯಕ್ತಿ ತೋರಿಸಿಕೊಟ್ಟಿರುವುದನ್ನು ನಾವೆಲ್ಲರೂ ಜ್ಞಾಪಿಸಿಕೊಳ್ಳುತ್ತಿರಬೇಕು" ಎಂದು ಉದ್ಗರಿಸಿದ್ದಾಳೆ. ಸಂಪಾದಕ ವರ್ಗದ ಜಾನ್ ಪೆಕ್ಕನಿನ್ ಎಂಬಾತ ಈ ಕಾಗದವನ್ನು ನೋಡಿ ವಿಷಯದ ತಪಶೀಲುಗಳನ್ನು ತಿಳಿಯಲು ಟಾಮ್ ಹೆವಿಟ್ಟನ ಊರಿಗೆ ನಾಲ್ಕು ಬಾರಿ ಪ್ರಯಾಣ ಮಾಡಿ ಒಟ್ಟು ೧೦ ಗಂಟೆಗಳ ಕಾಲ ಅವನ ಮತ್ತು ಅವನ ಹೆಂಡತಿಯೊಡನೆ ವಿಚಾರ ಮಾಡಿದ. ಪ್ರಾಣಾಂತಿಕ ಗಾಯದಿಂದ ಚೇತರಿಸಿಕೊಂಡು ಮದುವೆ ಆಗಿ ಸುಖವಾಗಿರುವ ಮಗ ಟಿಮ್ ಹೆವಿಟನೊಡನೆ ಸಂಭಾಷಣೆ, ಅವನ ವಿಚಾರ ವೈದ್ಯಕೀಯ ಟಿಪ್ಪಣಿಗಳು ಹಾಗೂ ಅವನ ಮರುಕಲಿಕೆ (ರಿಹ್ಯಾಬಿಲಿಟೇಷನ್) ಕಾಲದಲ್ಲಿ ಅವನು ಬರೆದಿಡುತ್ತಿದ್ದ ದಿನಚರಿಯ ಪರಿಶೀಲನೆಗೆ ಇನ್ನೂ ಹೆಚ್ಚು ಕಾಲ ತೆಗೆದುಕೊಂಡ. ಇಷ್ಟೆ ಅಲ್ಲದೆ ಅವನು ಮರುಕಲಿಕೆ ಪಡೆದ ಸ್ಥಳಕ್ಕೆ ಭೇಟಿ ಕೊಟ್ಟ. ಟಿಮ್‌ನ ಸ್ನೇಹಿತರು, ನೆಂಟರು, ಅವನನ್ನು ಚಿಕಿತ್ಸಿಸಿದ ಡಾಕ್ಟರುಗಳು ಇವರನ್ನೆಲ್ಲ ವಿಚಾರಿಸಿದ. ಮಿದುಳಿನ ಗಾಯಾಘಾತದಿಂದ ಚೇತರಿಸಿಕೊಂಡು ಮರುಕಲಿಕೆಗೆ ಬಂದಿದ್ದ ಇತರ ವ್ಯಕ್ತಿಗಳನ್ನೂ ಭೇಟಿ ಮಾಡಿದ. ಇಷ್ಟೆಲ್ಲ ಮಾಡಿ "ಟಿಮ್ ಹೆವಿಟನ ಅಸಾಮಾನ್ಯ ಪ್ರಯಾಣ" ಎಂಬ ಲೇಖನವನ್ನು ಬರೆದ. ಅದರ ಸ್ಥೂಲ ಅನುವಾದ ಈ ಕೆಳಗೆ ಇದೆ:

ಉತ್ತರ ಕೆರೊಲೀನ ಸಂಸ್ಥಾನದ ಫೆಯೆಟ್‌ವಿಲ್ಲಿನಲ್ಲಿದ್ದ ಟಾಮ್ ಮತ್ತು

೧೯೯೩ರ ಜುಲೈ ತಿಂಗಳ ರೀಡರ್ಸ್ ಡೈಜೆಸ್ಟಿನ ಮಾಸ ಪತ್ರಿಕೆಯಲ್ಲಿ ಪ್ರಕಟವಾದ ಜಾನ್ ಪೆಕ್ಕನಿನ್ನನ "ಸಿವಿಯರ್ ಹೆಡ್ ಇಂಜುರಿ, ಇಟ್ಸ್ ಟ್ರೀಟ್‌ಮೆಂಟ್ ಅಂಡ್ ರಿಹ್ಯಾಬಿಲಿಟೇಷನ್" ಲೇಖನದ ಅನುವಾದ.

ಮಿಲ್ಲಿಹೆವಿಟರ ಮನೆಯ ಟೆಲಿಫೋನ್ ಒಂದು ಭಾನುವಾರ ರಾತ್ರಿ ಗಣಗಣಿಸಿತು. ಸುಪರಿಚಿತ ಹಾಗೂ ವಿಶ್ವಾಸಪೂರ್ವಕ ಧ್ವನಿಯೊಂದು "ಅಮ್ಮ, ನಾವು ದಕ್ಷಿಣ ಕೆರೊಲೀನದ ಫ್ಲಾರೆನ್ಸಿನಲ್ಲಿದ್ದೇವೆ; ಹಸಿದಿದ್ದೇವೆ; ದುಡ್ಡಿಲ್ಲ; ನಿನ್ನ ಹಾಗೂ ಅಪ್ಪನ ಆಕ್ಷೇಪಣೆ ಇಲ್ಲದಿದ್ದರೆ ನನ್ನ ಸ್ನೇಹಿತರನ್ನೂ ಕರೆದುಕೊಂಡು ಬರಲು ಇಚ್ಛಿಸುತ್ತೇನೆ" ಎಂದು ತಿಳಿಸಿತು. ಅದು ಟಿಮ್ ಹೆವಿಟನ ವಾಣಿ.

ಕಾಲೇಜಿಗೆ ರಜ ಬಂದಿದ್ದಾಗ ಟಿಮ್ ಹೆವಿಟ್ ಮತ್ತು ಅವನ ಮೂವರು ಸ್ನೇಹಿತರು ಫ್ಲಾರಿಡಾನೆರೆ ಸಾಗರದಲ್ಲಿ ಯಾನಮಾಡುತ್ತಿದ್ದು ಈಗ ಕಾಲೇಜಿಗೆ ವಾಪಸಾಗುತ್ತಿದ್ದರು. ಅಪ್ಪನ ಸಂಸಾರ ತಮ್ಮನ್ನು ಆದರದಿಂದ ಬರಮಾಡಿಕೊಳ್ಳುತ್ತದೆ ಎಂದು ಟಿಮ್ಮಿಗೆ ಖಾತರಿ. "ನನ್ನ ಹಿರಿಯರೊಡನೆ ಆತ್ಮೀಯವಾಗಿ ನಾನು ಇರುವಂತೆಯೇ ನನ್ನ ಮದುವೆ ಆಗಿ ಮಕ್ಕಳಾದಾಗ ಅವರೂ ಹಾಗೆಯೇ ನನ್ನೊಡನೆ ಇರಬೇಕು ಎಂದು ನನ್ನ ಆಸೆ" ಎಂದು ಸ್ನೇಹಿತನ್ನೊಬ್ಬನೊಡನೆ ಟಿಮ್ ಹೇಳಿಕೊಂಡಿದ್ದ.

ಟಿಮ್ ಹಾಗೂ ಸ್ನೇಹಿತರು ತಮ್ಮ ಯಾನದ ಕಥೆಯನ್ನು ಹೇಳುತ್ತಿದ್ದಾಗ ಹೆವಿಟನ ಮನೆಯಲ್ಲಿ ನಗುವೋ ನಗು. ಆದರೆ ಒಮ್ಮೆ ಮಾತ್ರ ಗಾಳಿ ಮಳೆಗೆ ಸಿಕ್ಕಿಕೊಂಡು ತಾವು ಮನೆ ಸೇರುವೆವೋ ಇಲ್ಲವೋ ಎಂದು ಸ್ವಲ್ಪ ಭೀತರಾಗಿ ಇದ್ದುದನ್ನು ವಿವರಿಸುವಾಗ ಟಿಮ್ಮನ ಕಂದು ಬಣ್ಣದ ಕಣ್ಣುಗಳು ಗಂಭೀರವಾದುವು. "ತನ್ನ ಜೀವ ಎಷ್ಟು ಬಧಿರ; ಅದೃಷ್ಟವಶಾತ್ ಒಂದು ತಿರುಚಿನಿಂದ ತನ್ನ ಕನಸು ಹೇಗೆ ತತ್‌ಕ್ಷಣ ಕರಗಿಹೋಗಬಹುದಾಗಿತ್ತು" ಎಂದು ಟಿಮ್ಮಿಗೆ ಜ್ಞಾಪಕ ಬಂದಿತ್ತು.

ಒಂಬತ್ತು ದಿನಗಳ ನಂತರ ನಟ್ಟಿರುಳು ೩ ಗಂಟೆ ೬ ನಿಮಿಟುಗಳಾಗಿದ್ದಾಗ ಮಿಲ್ಲಿ ಹೆವಿಟಗೆ ಫೋನ್‌ಕರೆ ಬಂತು. ಈ ಸಲ ರಿಚ್‌ಮಂಡ್ ವೈದ್ಯಕೀಯ ಕೇಂದ್ರದ ದಾದಿಯಿಂದ, "ನಿಮ್ಮ ಮಗ ಕಾರ್ ಅಘಾತಕ್ಕೆ ಈಡಾಗಿ ತಲೆಗೆ ಪೆಟ್ಟಾಗಿದೆ. ಸ್ವಲ್ಪ ಕಾಲಾನಂತರ ನರಮಂಡಲ ಕ್ರಿಯಾ ಶಾಸ್ತ್ರವೈದ್ಯ ನಿಮಗೆ ತಪಶೀಲು ತಿಳಿಸುತ್ತಾರೆ" ಎಂದು.

ಕಾಲೇಜ್ ವ್ಯಾಸಂಗದಲ್ಲಿ ಅತ್ಯುತ್ತಮನಾಗಿದ್ದ ಕಾರಣ ಟಿಮ್ಮನ ತಂದೆ-ತಾಯಿ ಅವನಿಗೆ ಬಹುಮಾನವಾಗಿ ಕೊಟ್ಟಿದ್ದ ಒಂದು ಸಣ್ಣ ಕಾರಿನಲ್ಲಿ ಅವನು ಹೊರಗೆ ಹೋಗಿದ್ದು ಕಾಲೇಜ್ ಅವರಣಕ್ಕೆ ವಾಪಸ್ಸಾಗುತ್ತಿದ್ದ. ಅವನೇನೂ ಮದ್ಯಪಾನ ಮಾಡಿರಲಿಲ್ಲ. ಆದರೆ ಡೊಂಕು ಡೊಂಕು ಗ್ರಾಮಾಂತರ ರಸ್ತೆಯಲ್ಲಿ ಅತಿ ವೇಗದಿಂದ ಕಾರನ್ನು ಓಡಿಸುತ್ತಿದ್ದ, ಅಂದು ೧೯೭೮ರ ಏಪ್ರಿಲ್ ೨೨

ಅಪರಾಹ್ಣ ೧೨-೩೦ರಲ್ಲಿ ಕಾರು ಒಂದು ಹಳ್ಳಕ್ಕೆ ಮಗುಚಿಕೊಂಡಿತು. ಕಾರಿನ ಬಾಗಿಲಿಗೆ ಟಿಮ್ಮನ ತಲೆ ಬಲವಾಗಿ ಬಡಿದು ಅವನಿಗೆ ಪ್ರಜ್ಞೆ ತಪ್ಪಿತು.

ಇದನ್ನು ಕೇಳಿ ಮಿಲ್ಲಿ ಮತ್ತು ಟಾಮ್ ಹೆವಿಟ್‌ಗೆ ಗರಬಡಿದಂತಾಯಿತು. ದೇವರ ಪ್ರಾರ್ಥನೆ ಮಾಡುತ್ತ ಮುಂದಿನ ಸಮಾಚಾರಕ್ಕೆ ಕಾಯುತ್ತ ಕುಳಿತರು. ಸಾಯಂಕಾಲ ೪ ಗಂಟೆಗೆ ಶಸ್ತ್ರಕ್ರಿಯಾತಜ್ಞ ಫೋನ್ ಮಾಡಿದ. ಟಿಮ್ ಗಾಢವಾದ ಪ್ರಜ್ಞಾಶೂನ್ಯ ಸ್ಥಿತಿಯಲ್ಲಿದ್ದ. ತುರ್ತು ಕಂಪ್ಯೂಟರ್ ಸ್ಕ್ಯಾನಿಂಗಿನಿಂದ ಬುಡಮಿದುಳಿನಲ್ಲಿ ರಕ್ತದ ದೊಡ್ಡ ಹೆಪ್ಪು ಇದ್ದುದು ಕಾಣಿಸಿತು. ಈ ಸ್ಥಳ, ಉಸಿರಾಟ, ಜಾಗೃದವಸ್ಥೆ ಹಾಗೂ ಅನೇಕ ಜೀವ ಧಾರಣಕ್ರಿಯೆಗಳನ್ನು ನಿಯಂತ್ರಿಸುವ ನರಗಳು ಹಾಯುವ ಜಾಗ, ತಲೆಗೆ ಧಕ್ಕೆ ಆದಾಗ ಟಿಮ್ಮನ ಮಿದುಳನ್ನು ಜುಂಗಿಸಿ ಅಲ್ಲಾಡಿಸಿದಂತೆ ಆಗಿ ತಲೆಯ ಬುರುಡೆಗೆ ಬಡಿಯಿತು. ಮಿದುಳಿನ ದಕ್ಷಿಣ ಗೋಳಾರ್ಧಕ್ಕೆ ತೀವ್ರ ಜಖಮ್ಮಾಗಿ ಬುಡಮಿದುಳಿನಲ್ಲಿ ರಕ್ತಸ್ರಾವವಾಗಿ ಅದು ಹೆಪ್ಪುಗಟ್ಟಿತು.

"ಅವನು ಬದುಕುವ ಸ್ಥಿತಿಯಲ್ಲಿದ್ದಾನೆಯೇ" ಎಂದು ಮಿಲ್ಲಿ ಕೇಳಿದಳು. "ಇಲ್ಲ, ಇಲ್ಲಿಗೆ ನೀವು ಬರುವಷ್ಟರಲ್ಲಿಯೇ ಪ್ರಾಯಶಃ ಅವನು ಬದುಕಿರುವುದಿಲ್ಲ" ಎಂದು ಶಸ್ತ್ರವೈದ್ಯ ಉತ್ತರಿಸಿದ. ಮಂಕು ಕವಿದ ಹೆವಿಟರು ಕಾರಿನಲ್ಲಿ ರಿಚ್‌ಮಂಡಿಗೆ ದೂರ ಪ್ರಯಾಣ ಮಾಡಿದರು. ಮಾನವನ ಮಾನಸಿಕ ಕ್ರಿಯೆ ಎಷ್ಟು ನಿಗೂಢ, ಎಷ್ಟು ಗೊಂದಲವಾದದ್ದು ಎಂಬುದು ಈಗ ಅವರ ತಿಳಿವಳಿಕೆಗೆ ಬರುತ್ತದೆ ಎಂದು ಆ ಸಮಯದಲ್ಲಿ ಅವರು ಊಹಿಸುವುದಕ್ಕೂ ಆಗುತ್ತಿರಲಿಲ್ಲ.

ಆಸ್ಪತ್ರೆಯ ವಿಶೇಷ ಚಿಕಿತ್ಸಾವಿಭಾಗದಲ್ಲಿ ತೆಳ್ಳಗೆ ೧೮೩ ಸೆಂಮೀ ಎತ್ತರದ ಟಿಮ್ ನಿಶ್ಚೇತನನಾಗಿ ಮಲಗಿಸಲ್ಪಟ್ಟಿದ್ದ, ಅವನ ಎಡ ಕಿವಿ ಮೇಲಿದ್ದ ಬ್ಯಾಂಡೇಜ್ ಮತ್ತು ಆ ನೆರೆಯಲ್ಲಿದ್ದ ಬಾಸುಂಡೆ ವಿನಾ ಅವನ ತಲೆಮುಖಗಳಲ್ಲಿ ಏನೂ ವ್ಯತ್ಯಾಸ ಕಾಣುತ್ತಿರಲಿಲ್ಲ. "ಅವನ ಜೊತೆ ಮಾತಾಡಿ ನೀವು ಇಲ್ಲಿ ಬಂದಿರುವುದನ್ನು ಹೇಳಿ" ಎಂದು ದಾದಿ ಅವರಿಗೆ ಹೇಳಿದಳು. "ಟಿಮ್, ನಿನ್ನ ಅಮ್ಮ ಅಪ್ಪ ಬಂದಿದ್ದೀವಿ. ಇದು ನಿನಗೆ ತಿಳಿಯಿತೆಂದರೆ ನನ್ನ ಕೈ ಅವುಕು" ಎಂದು ಮಿಲ್ಲಿ ಅವನ ಕೈಹಿಡಿದುಕೊಂಡು ಹೇಳಿದಳು. ಅವನ ಸ್ನಾಯು ಒಂದಾದರೂ ಸಂಕುಚಿಸಲಿಲ್ಲ. ಸ್ವಲ್ಪ ಕಾಲಾನಂತರ ಮಿಲ್ಲಿ ಮತ್ತು ಟಾಮ್ ತಮ್ಮ ಒಬ್ಬನೇ ಮಗನಾದ ಟಿಮ್ ಮೃತನಾದ ಸಂದರ್ಭದಲ್ಲಿ ಅವನ ಅಂಗಗಳನ್ನು ಡಾಕ್ಟರುಗಳು ತೆಗೆದುಕೊಳ್ಳಬಹುದು ಎಂಬ ಅನುಮತಿ ಪತ್ರಕ್ಕೆ ರುಜು ಹಾಕಿದರು.

ದಿನಗಳು ಕಳೆದಂತೆ ಈ ದಂಪತಿಗಳು ಆಸೆಯ ನೆರೆಯನ್ನು ಅವಲಂಬಿಸಿದರು. ಪ್ರಜ್ಞೆಯನ್ನು ಇನ್ನೂ ಪಡೆಯದೇ ಇದ್ದ ಟಿಮ್ಮಿಗೆ ಅವನು ಹಾಗೂ ಸ್ನೇಹಿತರು ಶೀಘ್ರದಲ್ಲೆ ಪದವೀಧರರಾಗುವ ವಿಷಯವನ್ನು ಹೇಳುತ್ತಲೇ ಇದ್ದರು. ಅವನಿಗೆ ಇಷ್ಟವಾದ ಸಂಗೀತವನ್ನು ನುಡಿಸುತ್ತಿದ್ದರು. ಮೂರು ತಿಂಗಳನಂತರ ಜುಲೈಯಲ್ಲಿ ಟಿಮ್ಮಿಗೆ ಪ್ರಜ್ಞೆ ಮರಳುವಂತೆ ಕಾಣಿಸಿತು. ಆದರೆ ಇನ್ನೂ ಅರಿವು ಇಲ್ಲದೆ ಯಾವುದಕ್ಕೂ ಪ್ರತಿಕ್ರಿಯೆ ತೋರದೆ ಇದ್ದ. ಅವನಿಗೆ ಎಡಪಕ್ಷಾಘಾತ ಆಗಿತ್ತು. ಪುನಃ ಕ್ರಿಯಾತಜ್ಞನೊಬ್ಬ "ಅವನು ಎಂದಿಗೂ ಸರಿಹೋಗುವುದಿಲ್ಲ, ಅವನನ್ನು ಒಂದು ನರ್ಸಿಂಗ್ ಹೋಮಿಗೆ ಸೇರಿಸಿಬಿಡಿ" ಎಂದು ಹೇಳಿದ.

ಮಿಲ್ಲಿ ಹಾಗೂ ಟಾಮ್ ಈ ಸಲಹೆಯನ್ನು ನಿರಾಕರಿಸಿ ತಮ್ಮ ಊರಾದ ಫೇಯೆಟ್‌ವಿಲ್ಲೆಗೆ ಕರೆದುಕೊಂಡು ಹೋಗಿ ಅಲ್ಲಿದ್ದ ಪುನಃಕ್ರಿಯಾಕಲಿಕೆಯ ಕೇಂದ್ರದಲ್ಲಿ ಸೇರಿಸಿದರು. ಟಿಮ್ ಅಂತೂ ನಿಧಾನವಾಗಿ ಗುಣವಾಗುತ್ತಲೇ ಇದ್ದ. ಆದರೂ ಹೆಚ್ಚು ಮಾತಾಡುತ್ತಿರಲಿಲ್ಲ. ಆಡಿದ್ದೂ ಎಷ್ಟೋ ವೇಳೆ ಅಸಂಬದ್ಧವಾಗಿರುತ್ತಿತ್ತು. ಗಾಲಿಕುರ್ಚಿಯ ಮೇಲೆ ಕುಳಿತುಕೊಳ್ಳಬಲ್ಲವನಾಗಿದ್ದರೂ ನೆಲದ ಮೇಲೆ ನಿಲ್ಲಲು ಆಗುತ್ತಿರಲಿಲ್ಲ. ಎಡಕೈ ಸ್ವಾಧೀನವಿಲ್ಲದೆ ಬಳುಕಾಡುವುದನ್ನು ತಪ್ಪಿಸಲು ಡಾಕ್ಟರುಗಳು ಅದನ್ನು ಎದೆಗೆ ಜಂಟಿಸಿ ಕಟ್ಟಬೇಕಾಗುತ್ತಿತ್ತು. ಟಾಮಿಗೆ ಟಿಮ್ ಪೂರ್ಣ ನಿಸ್ಸಹಾಯಕ ಎನ್ನಿಸಿತ್ತು.

ಮಿಲ್ಲಿ ಟಾಮ್ ಇವರಿಗೆ ತಮ್ಮ ಮಗನ ಮನಶ್ಶಕ್ತಿ ಹಾಗೂ ನೆನಪು ಎಷ್ಟು ಮಟ್ಟಿಗೆ ಉಳಿದಿದೆ ಎಂದು ತಿಳಿದುಕೊಳ್ಳಲು ವಿಪರೀತ ಆಸೆ. "ಅವನ ಒಂದು ಕಾಲದ ಕನಸುಗಳ ಬಗ್ಗೆ ಹೇಗೆ, ಅವರಲ್ಲೂ ಮದುವೆ ಹಾಗೂ ಪ್ರೀತಿಸಲು ಒಬ್ಬ ವ್ಯಕ್ತಿ ; ಇವು ಕೂಡ ಮಾಯವಾದುವೋ" ಎಂದು ಮಿಲ್ಲಿ ತನ್ನಷ್ಟಕ್ಕೇ ಅಂದುಕೊಂಡಳು.

ಒಂದು ಸೆಪ್ಟೆಂಬರ್ ಮಧ್ಯಾಹ್ನ. ಅಂದರೆ ಅಪಘಾತವಾದ ಐದು ತಿಂಗಳ ಅನಂತರ, ಮಿಲ್ಲಿ ಟಿಮ್ಮನ ಹಾಸುಗೆಯ ಹತ್ತಿರ ನಿಂತು, ಮುಂಚೆ ಎಷ್ಟೋ ಬಾರಿ ಕೇಳಿದ್ದಂತೆ, "ನಮ್ಮ ಮನೆಯ ಫೋನ್ ನಂಬರ್ ಎಷ್ಟು?" ಎಂದು ಕೇಳಿದಳು. ಸ್ವಲ್ಪ ತಿಲುಗಾಡುತ್ತ ಟಿಮ್ ನಿಧಾನವಾಗಿ ೨-೩-೫-೦-೯-೪-೧ ಎಂದು ಹೇಳಿದ. "ಇಲ್ಲ, ನಾನೇ ತಪ್ಪು ತಿಳಿದುಕೊಂಡೆನೇನೋ ಎಂದು ಪುನಃ ಅವನ್ನೇ ಕೇಳಿದಳು. ೨-೩-೫-೦-೯-೪-೧ ಅಂತಲೇ ಪುನಃ ಹೇಳಿದ. ಮಿಲ್ಲಿ ಆ ಅಂಕೆಗಳನ್ನು ಬರೆದು ನೋಡಿದಳು. ಅದು ಅವರು ವರ್ಜೀನಿಯಲ್ಲಿ ವಾಸವಾಗಿದ್ದ ಮನೆಯ ಫೋನ್ ನಂಬರು. ಆಶ್ಚರ್ಯದಿಂದ ಅವಳ ಕಣ್ಣುಗಳು ದೊಡ್ಡ

ದಾಮವು. ೧೯೬೦ರಲ್ಲಿ ಟಿಮ್ ೫ ವರ್ಷದವನಾಗಿದ್ದಾಗ ಟಾಮ್ ಮಿಯಾಮಿಯಲ್ಲಿ ಸರ್ಕಾರಿ ನೌಕರನಾಗಿ ಕೆಲಸ ಮಾಡಿದ್ದ. ಆ ಫ್ಲೋರಿಡ ಫೋನ್ [illegible] ಟಾಮ್ ಕೇಳಿ "ಅಷ್ಟು ಹಿಂದಿನ ದಿನಗಳಲ್ಲಿ ಬಳಸುತ್ತಿದ್ದ ಫೋನಿನ ನಂಬರನ್ನು ಹೇಗೆ ಜ್ಞಾಪಿಸಿಕೊಂಡ" ಎಂದು ಉದ್ಗರಿಸಿದ.

ಸ್ವಲ್ಪ ದಿನಗಳ ಅನಂತರ ಟಿಮ್ ತಾಯಿಯ ಕಡೆ ತಿರುಗಿ "ರಿಕ್ಕಿ ಬರುತ್ತಾನೆಯೆ?" ಎಂದು ಕೇಳಿದ. ರಿಕ್ಕಿ? ಆಮೇಲೆ ಜ್ಞಾಪಿಸಿಕೊಂಡಳು— ಮಿಯಾಮಿಯಲ್ಲಿದ್ದಾಗ ರಿಕ್ಕಿ ಟಿಮ್ಮನ ಅತ್ಯಂತ ಸ್ನೇಹದ ಗೆಳೆಯರಲ್ಲಿ ಒಬ್ಬ ಎಂದು. ಅವನ ಮನೆ ಇವರ ಮನೆ ಪಕ್ಕದ್ದೇ. ಮಿಲ್ಲಿ ಹೇಳಿದಳು "ಇಲ್ಲ ಟಿಮ್, ರಿಕ್ಕಿ ಇಲ್ಲಿ ಬಂದು ಇರುವುದಿಲ್ಲ."

ಪುನಃ ಯೌವನ ಕಾಲದ ಜೀವನ: ಕೊಂಚ ಹೊತ್ತಾದ ಮೇಲೆ ಮಿಲ್ಲಿ "ಟಿಮ್, ನಮ್ಮ ಫೋನ್ ನಂಬರ್ ಎಷ್ಟು" ಎಂದು ಕೇಳಿದಳು. ಈಗ ಅವನು ಮ್ಯಾಕ್ಲೇನಿನಲ್ಲಿ ೧೯೬೫ರಲ್ಲಿ ವಾಸವಾಗಿದ್ದಾಗಿನ ಟಾಮಿನ ಆಫೀಸ್ ಫೋನ್ ನಂಬರ್ ಹೇಳಿದ. ಆಗ ಟಿಮ್ಮಿಗೆ ೬ ವರ್ಷ. ಟಿಮ್ ಈಗ ಮ್ಯಾಕ್ಲೇನಿನಲ್ಲಿದ್ದ ತನ್ನ ಬಾಲ್ಯ ಸ್ನೇಹಿತರ ವಿಷಯ ಕೇಳ ತೊಡಗಿದ.

ಇನ್ನೊಂದು ವಿಷಯ ತನ್ನ ಗಮನಕ್ಕೆ ಬಂದಾಗ ಮಿಲ್ಲಿ ಪುಳಕಗೊಂಡಳು. ಟಿಮ್ಮನ ಧ್ವನಿ, ನಡವಳಿಕೆ ಹಾಗೂ ಆಶ್ಚರ್ಯವಾಗುವಂತೆ ಅವನ ನೋಟ ಕೂಡ, ೬ ವರ್ಷದ ಹುಡುಗನಂತೆಯೇ ಇತ್ತು.

ಟಿಮ್ ಹೀಗೆ ತನ್ನ ಹಿಂದಿನ ಬಾಲ್ಯ ವರ್ಷಗಳನ್ನು ಕ್ರಮಶಃ ಪುನರ್ಜೀವನದಂತೆ ಜ್ಞಾಪಿಸಿಕೊಳ್ಳುತ್ತಿದ್ದರೆ, ಅವನ ಮುಂದಿನ ನೆನಪು ೧೯೬೬–೬೮ರಲ್ಲಿ ಅವರು ಲಾಪ್ರೋಸಿನಲ್ಲಿ ವಾಸಿಸುತ್ತಿದ್ದಾಗಿನದಾಗಿರಬೇಕಾಗಿತ್ತು. ಮಿಲ್ಲಿ ಮತ್ತು ಟಾಮ್ ಆಶಾಯುಕ್ತರಾಗಿ ಕಾಯುತ್ತಲೇ ಇದ್ದರು.

ಟಾಮಿಗೆ ವರ್ಗವಾಗಿ ಅವರು ಲಾಪ್ರೋಸಿಗೆ ಹೋದಾಗ ಟಿಮ್ಮಿಗೆ ೭ ವರ್ಷ. ಲಾಪ್ರೋಸಿನಲ್ಲಿ ಟಾಮ್ ಮತ್ತು ಟಿಮ್ ಪರಸ್ಪರ ಇನ್ನಷ್ಟು ಹತ್ತಿರವಾಗ ತೊಡಗಿದರು. ಟಾಮ್ ಸಣ್ಣ ಹುಡುಗನಾಗಿ ವರ್ಜೀನಿಯದಲ್ಲಿ ಬೆಳೆಯುತ್ತಿದ್ದಾಗ ಸ್ವತಃ ಅವನ ತಂದೆ ಸಂಸಾರವನ್ನು ತ್ಯಜಿಸಿ ದೂರವಾಗಿದ್ದ. ಆಗಿನ ಕಷ್ಟಗಳನ್ನು ಟಾಮ್ ಎಂದೂ ಮರೆತಿರಲಿಲ್ಲ. ಟಿಮ್ ಹುಟ್ಟಿದಾಗ ಅವನಿಗೆ ತಾನು ಅತ್ಯುತ್ತಮ ತಂದೆಯಾಗಿರಬೇಕೆಂದು ಟಾಮ್ ಶಪಥಮಾಡಿದ್ದ.

ಲಾಪ್ರೋಸಿನಲ್ಲಿ ಟಾಮ್ ತನ್ನ ಮಗನನ್ನು ಮೀನು ಹಿಡಿಯುವಾಗ, ಪ್ಲೇನಿನಲ್ಲಿ ಹಾರಾಡುವಾಗ ಎಲ್ಲಿ ಯಾವಾಗಲೂ ತನ್ನ ಜೊತೆಯಲ್ಲಿ ಕರೆದು

ಕೊಂಡು ಹೋಗುತ್ತಿದ್ದನು. ಟಿಮ್ಮಿಗೆ ಬಂದೂಕ ಹಾರಿಸುವುದನ್ನೂ ಕಲಿಸಿದ. ಅವನಿಗೆ ಲಾವೋಸಿನಲ್ಲಿ ಜೀವನ ಪುಳಕಕರವಾಗಿತ್ತು. ಈಗ ಆ ದಿನಗಳ ವಿಚಾರ ಏನಾದರೂ ಜ್ಞಾಪಿಸಿಕೊಳ್ಳುತ್ತಾನೆಯೆ ಎಂದು ಟಾಮಿಗೆ ಆಶಾಜನಕ ಯೋಚನೆ ಉಂಟಾಯಿತು.

ಒಂದು ಮಧ್ಯಾಹ್ನ ಟಿಮ್ "ನಾನು ಜಾನೆಲ್ಲಳನ್ನು ನೋಡಲು ಹೋದರೆ ನೀನೇನಾದರೂ ತಿಳಿದುಕೊಳ್ಳುತ್ತೀಯಾ?" ಎಂದು ತಾಯಿಯನ್ನು ಕೇಳಿದ. ಮಿಲ್ಲಿಗೆ ಜ್ಞಾಪಕಕ್ಕೆ ಬಂತು—ಲಾವೋಸಿನಲ್ಲಿದ್ದಾಗ ಟಿಮ್ ಜೊತೆ ಆಡುತ್ತಿದ್ದ ಸಣ್ಣ ಹುಡುಗಿಯ ಹೆಸರು ಜಾನೆಲ್ ಎಂದು.

ಶೀಘ್ರದಲ್ಲೆ ಟಿಮ್ ಲಾವೋಸಿನಲ್ಲಿ ತಾನು ಆಟಕ್ಕೆ ಬಳಸುತ್ತಿದ್ದ ಆಟದ ಸಾಮಾನಿನ ಸಿಪಾಯಿಗಳನ್ನೂ ಟ್ರಕ್ಕುಗಳನ್ನೂ ನೋಡುತ್ತಿದ್ದ ಕಾಮಿಕ್ ಪುಸ್ತಕಗಳನ್ನೂ ಕೇಳುವುದಕ್ಕೆ ಪ್ರಾರಂಭಿಸಿದ. ಇವುಗಳ ಜೊತೆಗೆ ಟಾಮ್ ಆ ಕಾಲದ ಫೋಟೋಗಳನ್ನೂ ಚಿತ್ರಗಳನ್ನೂ ಟಿಮ್ಮನ ಬಾಲ್ಯದ ಪುಸ್ತಕಗಳನ್ನೂ ಗಾಜಿನ ಚಿತ್ರ ಫಲಕಗಳನ್ನೂ ಒದಗಿಸಿದ. ಇಷ್ಟು ದಿನಗಳಾದ ಮೇಲೆ ಟಿಮ್ ಪುನಃ ಕಲಿಕೆ ಕೇಂದ್ರದಿಂದ ಆಗಾಗ್ಗೆ ತಮ್ಮ ಮನೆಗೆ ಅಲ್ಪಕಾಲಿಕವಾಗಿ ಬಂದು ಹೋಗುತ್ತಿದ್ದ. ಒಂದು ಸಲ ಲಾವೋಸಿನಲ್ಲಿ ತನ್ನ ತಂದೆ ಹಾಕಿಕೊಳ್ಳುತ್ತಿದ್ದ ಒಂದು ಹ್ಯಾಟನ್ನು ಗುರುತಿಸಿದ. ಅವನ್ನು ತಾನೇ ಹಾಕಿಕೊಂಡು ಎಲ್ಲ ಕಡೆಯೂ ಓಡಾಡಬೇಕೆಂದು ನಿರ್ಧರಿಸಿದ.

ಒಂದು ಮುಂಜಾನೆ "ಬೆಕ್ಕಿ ಬರುತ್ತಾಳೆಯೆ?" ಎಂದು ಟಿಮ್ ಕೇಳಿದ. "ಇಲ್ಲ ಟಿಮ್, ಅವಳು ಈಗ ಇಲ್ಲಿಲ್ಲ ಅಂತ ಜವಾಬು ಕೊಟ್ಟದ್ದಾಯಿತು. ಇವರೆಲ್ಲ ಹಾಂಗ್‌ಕಾಂಗಿನಲ್ಲಿ ವಾಸಿಸುತ್ತಿದ್ದಾಗ ಟಿಮ್ಮನ ಸ್ನೇಹಿತರಲ್ಲಿ ಬೆಕ್ಕಿ ಒಬ್ಬಳು. ಆಗ ಟಿಮ್ಮಿಗೆ ೯ ವರ್ಷ ವಯಸ್ಸು. ಶೀಘ್ರದಲ್ಲೆ ನೌಕಾಯುದ್ಧದ ವಿಚಾರವಾಗಿ ಪುಸ್ತಕಗಳು ಬೇಕೆಂದು ಆಸ್ಪತ್ರೆಯವರನ್ನು ಕೇಳಿದ. ಹಾಂಗ್‌ಕಾಂಗ್‌ನಲ್ಲಿದ್ದಾಗ ನೌಕಾಯುದ್ಧ ವಿಷಯಗಳಲ್ಲಿ ಟಿಮ್ ಆಸಕ್ತನಾಗಿದ್ದ. ಡಾಕ್ಟರುಗಳಿಗೆ ಈ ರೀತಿ ಗತಕಾಲದ ಕ್ರಮಶಃ ನೆನಪು ಮಾಡಿಕೊಳ್ಳುತ್ತಿದ್ದುದು ಅರ್ಥವೇ ಆಗದಂತಿತ್ತು. ಹೀಗೆಯೇ ಕಾಲೇಜಿನ ದಿನಗಳತನಕ ಹಳೆಯ ವಿಷಯಗಳನ್ನು ನೆನಪು ಮಾಡಿಕೊಂಡು ಪುನರ್ಜೀವನವನ್ನು ಬದುಕ ಹತ್ತಿದರೆ ತಹಲ್‌ವರೆಗೂ ಅದು ಮುಂದುವರಿಯಬಹುದು—ಮಾನಸಿಕವಾಗಿಯಾದರೂ—ಎಂದು ಒಬ್ಬ ಡಾಕ್ಟರು ಯೋಚಿಸುವ ಧೈರ್ಯ ಮಾಡಿದ.

"ಟಿಮ್ ಕಾದಾಡುವಂಥವನು. ಅವನು ಪೂರ್ಣಗುಣವಾಗುತ್ತಾನೆಂಬ

ಆಸೆಯನ್ನು ನಾವು ಬಿಡುವಹಾಗಿಲ್ಲ. ಹೀಗೆ ಕಾಲಕ್ರಮವಾಗಿ ನೆನಸಿಕೊಳ್ಳು ವುದನ್ನೂ ಅವನೇ ಬಿಟ್ಟುಬಿಡುವುದಕ್ಕೂ ಅವಕಾಶ ಕೊಡುವಹಾಗಿಲ್ಲ. ಡಾಕ್ಟರುಗಳು ಹಿಂದೆ ತಪ್ಪು ಅಭಿಪ್ರಾಯವನ್ನು ಕೊಟ್ಟಿದ್ದರು. ಈಗಲೂ ತಪ್ಪು ಅಭಿಪ್ರಾಯ ಉಳ್ಳವರೇ ಆಗಿರಬಹುದು. ಟಿವಮ್ ತಾನಾಗಿಯೇ ಐಚ್ಛಿಕವಾಗಿ ಗುಣಹೊಂದುವವರೆಗೂ ನಾವು ನಮ್ಮ ಪ್ರಯತ್ನಗಳನ್ನು ಬಿಡಕೂಡದು. ನಾವು ಅಷ್ಟು ಮಾಡಿದ್ದಾದರೆ ಮಿಕ್ಕಿದ್ದನ್ನು ತಾನೇ ನೋಡಿಕೊಳ್ಳುತ್ತಾನೆ" ಎಂದು ಟಾಮ್ ವಿಲ್ಲಿಗೆ ಒತ್ತಿ ಹೇಳಿದ.

ಒಂದು ಸಲ ವಿಲ್ಲಿ ಟಿವಮ್ ಕೈಗೆ ಲೇಖನಿಯನ್ನು ಕೊಟ್ಟು "ನಿನ್ನ ಹೆಸರನ್ನು ಬರಿ" ಎಂದು ಹೇಳಿದಳು. ಗೀಚಿದಂಥ ಅಕ್ಷರಗಳಲ್ಲಿ ಹೆಸರನ್ನು ಹಿಂದುಮುಂದಾಗಿ "ಮಿಟ್" ಅಂತ ಬರೆದ. "ಪುನಃ ಪ್ರಯತ್ನಿಸು" ಎಂದು ತಾಯಿ ಬಲವಂತ ಮಾಡಿದಳು. ಈ ಸಲ ಟಿವಮ್ ಅಂತಲೇ ಸರಿಯಾಗಿ ಬರೆದ. ಮುಂದಕ್ಕೆ ಚಿತ್ರ ಬರೆಯುವಂತೆ ವಿಲ್ ಟಿಮ್ಮನ್ನು ಉತ್ತೇಜಿಸಿದಳು. ಅಪಘಾತಕ್ಕೆ ಮುನ್ನ ಟಿವಮ್‌ಗೆ ಕರಿಬಿಳಿಚಿತ್ರಗಳು, ಬಣ್ಣದ ಚಿತ್ರಗಳು ಎಲ್ಲ ವನ್ನೂ ಬರೆಯಲು ಬಲು ಆನಂದ. ಈಗ ಅವನು ಬರೆದ ಚಿತ್ರ ಸಣ್ಣ ಮಕ್ಕಳು ಬರೆದಂತಿತ್ತು. ಚಿತ್ರದ ಮನುಷ್ಯರು ಕುಂಬಳಕಾಯಿಗೆ ಕೈಕಾಲುಗಳಂತೆ ಕಡ್ಡಿ ಸಿಕ್ಕಿಸಿದ ಹಾಗಿತ್ತು. ಆದರೂ ಕ್ರಮೇಣ ಇದಕ್ಕಿಂತ ಒಳ್ಳೆಯ ಚಿತ್ರಗಳು ಮೂಡುವಂತಾಯಿತು. ಜೊತೆಗೆ ಅವನು ಹೆಚ್ಚು ಹೆಚ್ಚಾಗಿ ಮಾತನಾಡ ತೊಡಗಿದನು. ಅಲ್ಲದೆ ಈಗ ಮಾತುಗಳು ಸಂಬದ್ಧವಾಗಿದ್ದುವು ಕೂಡ.

ದಿನಗಳು ಕಳೆದಂತೆ ಟಿಮ್ಮಿಗೆ ರುಚಿ ಆಹಾರದ ಆಸೆ ವ್ಯಕ್ತಪಟ್ಟಿತು. ಆದರೆ ಊಟವಾದ ಮೇಲೆ ತಾನು ತಿಂದದ್ದು ಏನು ಎಂಬುದರ ನೆನಪೂ ಆಗುತ್ತಿರಲಿಲ್ಲ. ತಿಂದದ್ದು ಸಹ ಜ್ಞಾಪಕಕ್ಕೆ ಬರುತ್ತಿರಲಿಲ್ಲ. ಅವನಿಗೆ ತತ್‌ಪೂರ್ವದ ನೆನಪು ಹೆಚ್ಚು ಕಡಿಮೆ ಪೂರ್ತಿಯಾಗಿ ಹೋಗಿಬಿಟ್ಟಿತ್ತು.

ಇಷ್ಟು ಕಾಲದ ಮೇಲೆ ಹತ್ತಿರದಲ್ಲೆ ಇದ್ದ ಡರ್ ಹ್ಯಾಮಿನಲ್ಲಿಯ ಡ್ಯೂಕ್-ಯೂನಿರ್ವಸಿಟಿ ಮೆಡಿಕಲ್ ಸೆಂಟರಿನಲ್ಲಿ ಮರುಕಲಿಕೆ ವಿಭಾಗಕ್ಕೆ ಅವನನ್ನು ದಾಖಲು ಮಾಡಿದರು. ಇಲ್ಲಿ ಟಿವಮ್ ತನ್ನ ಹಲ್ಲುಜ್ಜಿಕೊಳ್ಳುವುದಕ್ಕೆ, ಬಟ್ಟೆ ಹಾಕಿಕೊಳ್ಳುವುದಕ್ಕೆ, ಆಹಾರ ಸೇವನೆಗೆ ಇನ್ನೊಬ್ಬರ ಸಹಾಯ ಕೋರದೆ ತಾನೇ ಪ್ರಯತ್ನಿಸುತ್ತ ಎಲ್ಲವುಗಳಲ್ಲೂ ಸಫಲನಾದ. ಆದರೆ ಅಂಗಿ, ಇಜಾರ ಧರಿಸಿಕೊಳ್ಳಲು ಕೂಡ ಮುಕ್ಕಾಲು ಗಂಟೆ ತೆಗೆದುಕೊಳ್ಳುತ್ತಿದ್ದ.

ಇಷ್ಟು ಹೊತ್ತಿಗೆ ಟಿವಮ್ ತನ್ನ ಹೈಸ್ಕೂಲು ದಿನಗಳಂತೆ ನಡೆದುಕೊಳ್ಳು

ತ್ತಿದ್ದ. ಅಲ್ಲದೆ ಈ ದಿನಗಳಲ್ಲಿ ತನ್ನ ಹೈಸ್ಕೂಲು ಕಾಲದ ಪ್ರೇಯಸಿ ಲಿನ್ ಬಾಷ್‌ವರ್ತ್ ಎಂಬಾಕೆ ಅವನಿಗೆ ಭೇಟಿ ಕೊಡುತ್ತಿದ್ದಳು. ಅವಳು ಅವನನ್ನು ಗಾಲಿಕುರ್ಚಿಯ ಮೇಲೆ ಕೂಡಿಸಿ ತಳ್ಳುತ್ತ ಕೆಫೆಟೇರಿಯಕ್ಕೆ ಕರೆದುಕೊಂಡು ಹೋಗುತ್ತಿದ್ದಳು. ಹೈಸ್ಕೂಲಿನಲ್ಲಿ ಮಾಡುತ್ತಿದ್ದಂತೆಯೇ ತನಗೆ ಇಷ್ಟವಾಗಿದ್ದ ಚಾಕೊಲೇಟ್ ಮಾಲ್ಟ್ ಪಾನೀಯವನ್ನು ಇಲ್ಲೂ ಆಗಾಗ ತರಿಸಿಕೊಳ್ಳುತ್ತಿದ್ದ. ಹೈಸ್ಕೂಲು ದಿನಗಳಲ್ಲಿ ಲಿನ್ನನ್ನು ಪ್ರೀತಿಸುತ್ತಿದ್ದಂತೆಯೇ ಈಗಲೂ ಅವಳನ್ನು ಪ್ರೀತಿಸುವುದಕ್ಕೆ ಪ್ರಾರಂಭಿಸಿದ. ಅಲ್ಲದೆ ಮದುವೆ ಮಾಡಿಕೊಂಡು ಮಕ್ಕಳನ್ನು ಪಡೆಯಬೇಕೆಂಬ ಆಗಿನ ಆಸೆಯನ್ನು ಪುನಃ ವ್ಯಕ್ತಪಡಿಸಿದ. ಲಿನ್ನೂ ಮರು ಪ್ರೇಮವನ್ನು ತೋರಿಸುವುದಕ್ಕೆ ಪ್ರಾರಂಭಿಸಿದಳು. ಆದರೆ ಕೂಡಲೇ ಟಿಮ್ ಸಿಡುಕುವುದಕ್ಕೆ ಶುರುಮಾಡಿದ. ಒಂದು ದಿನ ಅವಳು ಅವನ ಸಹಾಯಕ್ಕೆಂದು ಬಂದಾಗ "ನನ್ನ ಪಾಡಿಗೆ ನನ್ನನ್ನು ಬಿಟ್ಟು ಹೋಗು" ಎಂದು ರೇಗಾಡಿದ.

ಲಿನ್ನಿಗೆ ಇದು ಹಿಂದಿನ ಕಥೆಯ ಪುನರಾಚರಣೆ. ಹೈಸ್ಕೂಲಿನಲ್ಲಿ ಆಮೇಲೆ ಒಬ್ಬರನ್ನೊಬ್ಬರು ಬಿಟ್ಟು ದೂರವಾಗಿದ್ದರು; ಕಾರಣ ಲಿನ್ ಹೆಚ್ಚು ವಾದ ಮಾಡುತ್ತಿದ್ದಳು. ಈಗ ಟಿಮ್ ತನ್ನನ್ನು ಪ್ರೀತಿಸುವುದಕ್ಕೆ ಪುನಃ ಪ್ರಾರಂಭಿಸಿದ್ದರೂ ಹೈಸ್ಕೂಲಿನ ಹಳೆಯ ಕಥೆ ಮರುಕಳಿಸುತ್ತದೆಂದು ಲಿನ್ನಿಗೆ ತೋರಿತು. ಆದ್ದರಿಂದ ಟಿಮ್ಮನಿಂದ ಅವಳು ಪುನಃ ದೂರವಾದಳು.

ಈ ರೀತಿಯ ಹಳೆ ನೆನಪಿನ ಜೀವನಕ್ಕೆ ಪುನಃ ಬಾಳುತ್ತ ೮ ತಿಂಗಳುಗಳಲ್ಲಿ ತನ್ನ ೫ ವರ್ಷ ವಯಸ್ಸಿನಿಂದ ಹೆಚ್ಚುಕಡಿಮೆ ತಹಲ್‌ವರೆಗೂ ಟಿಮ್ ಬಂದಿದ್ದ. ಅಪಘಾತಕ್ಕೆ ಸ್ವಲ್ಪ ಹಿಂದಿನ ದಿನಗಳಂತೆಯೇ ಈಗಲೂ ನಡೆದುಕೊಳ್ಳುತ್ತಿದ್ದ. ಆದರೂ ಗಾಲಿಕುರ್ಚಿಯ ಬಳಕೆ, ಎಡಗೈ ಸ್ವಾಧೀನವಾಗದಿರುವಿಕೆ, ಅಲ್ಪಕಾಲದ ನೆನಪು ಬಾರದಿರುವುದಕ್ಕೆ ೧೬ ವರ್ಷ ಸ್ಕೂಲುಗಳಲ್ಲಿ ಕಲಿತಿದ್ದ ವಿಷಯಗಳಿಲ್ಲದರ ಮರವು ಇವೆಲ್ಲ ಇದ್ದೇ ಇದ್ದವು.

ಅಪಘಾತವಾಗಿ ವರ್ಷದ ಮೇಲೆ ಒಂದು ದಿನವಾಗಿದ್ದಾಗ ಡ್ಯೂಕ್ ಯೂನಿವರ್ಸಿಟಿ ಮೆಡಿಕಲ್ ಸೆಂಟರಿನಿಂದ ಟಿಮ್ ಮನೆಗೆ ವಾಪಸಾದ. ಮೆಡಿಕಲ್ ಸೆಂಟರಿನ ಡಾಕ್ಟರುಗಳು ತಮಗೆ ಎಷ್ಟು ಸಾಧ್ಯವೋ ಅಷ್ಟು ಚಿಕಿತ್ಸೆ ಶುಶ್ರೂಷೆಗಳನ್ನು ಮಾಡಿದ್ದರು.

ಈಗ ಟಾಮಿಗೆ ೫೭ ವರ್ಷ. ಟಿಮ್ಮಗೆ ಪೂರ್ಣ ಕಾಲ ನೆರವಾಗಲು ತಾನೇ ಇಚ್ಛೆಪಟ್ಟು ಕೆಲಸದಿಂದ ರಿಟೈರ್ ಮಾಡಿಸಿಕೊಂಡ. ಟಾಮ್ ಮತ್ತು ಮಿಲ್ಲಿ ತಮಗೆ ಯುಕ್ತ ಎಂದು ತೋರಿದ ಮರುಕಲಿಕೆ ವಿಧಾನಗಳನ್ನು ಅಳವಡಿಸಿ

ಕೊಂಡು ಒಂದು ಕಾರ್ಯಕ್ರಮವನ್ನು ಆಚರಣೆಗೆ ತಂದರು. ಟಿಮ್ಮಿನ ಕಾಲುಗಳಿಗೆ ಶಕ್ತಿ ಬರಲು ಟಾಮ್ ಮಗನೊಡನೆ ಈಜುಕೊಳದಲ್ಲಿ ಈಜಿ ಈಜಿಸುತ್ತ ವ್ಯಾಯಾಮ ಮಾಡಿಸುತ್ತಿದ್ದ. ಗೋಡೆಗೆ ಏಣಿ ಒರಗಿಸಿ ನಿಲ್ಲಿಸಿ ಟಿಮ್ ತನ್ನ ಬಲಗೈಯಿಂದ ಅದರ ಕಾಲುಗಳನ್ನು ಹಿಡಿದು ನಿಲ್ಲುವಂತೆ ಮಾಡಿದ. ಪ್ಯಾರಲಲ್ ಬಾರನ್ನು ಸ್ಥಾಪಿಸಿ ಟಿಮ್ ಅದರ ಎರಡು ಕಡೆಯೂ ಎರಡು ಕೈಗಳಲ್ಲಿ ಹಿಡಿದು ನಿಂತು ನಡೆಯಲು ಪ್ರಯತ್ನಿಸುವಂತೆ ಮಾಡಿದ. ಮಧ್ಯೆ ಮಧ್ಯೆ ಈ ಮರುಕಲಿಕೆ ಹಿಮ್ಮೊಗನಾಗುತ್ತಿತ್ತು. ಆದರೂ ಎಷ್ಟೋ ಬಾರಿ ಪ್ರಯತ್ನಗಳು ಸಫಲವಾಗುತ್ತಿದ್ದುವು. ೧೯೮೪ರ ಮೇಲೆ ತಿಂಗಳಲ್ಲಿ—ಆಘಾತವಾಗಿ ೩೨ ತಿಂಗಳನಂತರ ಒಂದು ಉಬ್ಬುಸೆಕೆ ದಿನ ಟಿಮ್ ೧೧೦೦ ಮೀಟರ್‌ಗಳಷ್ಟು ದೂರ ನಡೆದ. ಇದಕ್ಕೆ ಎರಡೂವರೆ ಗಂಟೆ ತೆಗೆದುಕೊಂಡು ವಾಪಸ್ಸು ಮನೆಗೆ ಬಂದಾಗ ಬೆವರಿನಿಂದ ಒದ್ದೆಮುದ್ದೆ ಆಗಿದ್ದ. "ಇನ್ನು ಮೇಲೆ ಗಾಲಿಕುರ್ಚಿ ಬಳಸುವುದಿಲ್ಲ" ಅಂತ ಹೆಮ್ಮೆಯಿಂದ ಹೇಳಿದ.

ಹೀಗೆ ಯುಕ್ತಿಯಿಂದ ದೇಹಕಾರ್ಯ ಮರುಕಳಿಸುವಂತೆಯೇ ಬುದ್ಧಿಶಕ್ತಿಯೂ ಮರುಕಳಿಸುವಂತೆ ಉಪಾಯಗಳನ್ನು ಟಾಮ್ ಮತ್ತು ಮಿಲ್ಲಿ ಹುಡುಕಿ ಆಚರಣೆಗೆ ತಂದರು. ಕ್ರಾಸ್‌ವರ್ಡ್ ಸಮಸ್ಯೆಗಳಿಂದ ಪ್ರಾರಂಭಿಸಿ ಬೇರೆ ಬೇರೆ ರೀತಿಯ ಶಬ್ದಪ್ರಯೋಗ ಕ್ರಮಗಳನ್ನು ಅವರು ಬಳಸಿಕೊಂಡರು. ಒಬ್ಬ ಉಪಾಧ್ಯಾಯನೊಡನೆ ಟಿಮ್ ಹೆಣಗುತ್ತ ಓದು ಅಂಕಗಣಿತವನ್ನು ಪುನಃ ಕಲಿತನು. ಸ್ಥಳೀಯ ಕೈಗಾರಿಕಾ ಶಾಲೆಯಲ್ಲಿ ಕಲಿಯಲು ಪ್ರಾರಂಭಿಸಿ ಅನಂತರ ಫೇಯಟ್‌ವಿಲ್ಲಿರ ಮೆಥಡಿಸ್ಟ್ ಕಾಲೇಜನ್ನು ಸೇರಿ ಕಲಿಯುತ್ತ ೨ ವರ್ಷಗಳ ಕಾಲದಲ್ಲಿ ತಾನು ಹಿಂದೆ ಇದ್ದ ಕಾಲೇಜ್ ಕಲಿಕೆ ಮಟ್ಟಕ್ಕೆ ಬಂದನು. ಮಿಲ್ಲಿಗೆ ಇನ್ನೂ ಆತಂಕ ಇದ್ದೇ ಇತ್ತು. ಟಿಮ್ಮಿಗೆ ನೆನಪು ಮರುಕಳಿಸುತ್ತಿದ್ದಂತೆ ಅವನಿಗೆ ಇನ್ನೂ ಪೂರ್ಣವಾಗಿ ಗುಣವಾಗದಿದ್ದುದರ ಬಗ್ಗೆ ಕೋಪ ಉಂಟಾಗುತ್ತಿತ್ತು. ಅದರ ಫಲವಾಗಿ ಅವನು ರೇಗಾಡುವುದಕ್ಕೆ ಪ್ರಾರಂಭಿಸಿ ಯಾವ ಉದ್ಯೋಗವೂ ಯಾವ ಆತ್ಮೀಯ ಸ್ನೇಹವೂ ಫಲಿಸದ ಹಾಗಾಗಿತ್ತು.

"ಅವನು ಪದೇ ಪದೇ ರೇಗಾಡುವುದಕ್ಕೆ ತಲೆಯ ಆಘಾತವೇ ಕಾರಣ; ಆ ಸ್ಥಿತಿ ಶಾಶ್ವತವಾಗಿ ಇರಬಹುದು" ಎಂದು ಕೆಲವು ಡಾಕ್ಟರುಗಳು ಅಭಿಪ್ರಾಯಪಟ್ಟರು. ಆದರೆ ಫೇಯಟ್‌ವಿಲ್ಲಿನವನೇ ಆದ ಮನೋವಿಜ್ಞಾನಿ ಡಾ. ನೀಲ್ ಮಿಚೆಲ್ ಹೆಪಟರಿಗೆ ಆಶಾಯುಕ್ತ ಅಭಿಪ್ರಾಯವನ್ನು ಕೊಟ್ಟ. "ಅವನು ಇನ್ನೂ ಸರಿದಾರಿಗೆ ಬರಲು ಹೆಣಗುತ್ತಿದ್ದಾನೆ. ಅದರೆ ಮನೋಭಾವಗಳನ್ನು

ವ್ಯಕ್ತಪಡಿಸದೇ ಹೋದರೆ ಗುಣಮುಖನಾಗುವುದಿಲ್ಲ” ಎಂದು ಆತ ಹೇಳಿದ. ಟಿಮ್ ಬಾಕಿ ವಿಷಯಗಳನ್ನು ಕಲಿಯುತ್ತಿದ್ದಂತೆಯೇ ತನ್ನ ಮನೋಭಾವವನ್ನು ನಿಯಂತ್ರಿಸಿಕೊಳ್ಳುವುದನ್ನೂ ಕ್ರಮೇಣ ಕಲಿತ.

೧೯೯೦ರಷ್ಟು ಹೊತ್ತಿಗೆ ಆಘಾತಕ್ಕೆ ಒಳಗಾದ ಸುಮಾರು ೧೦ ವರ್ಷಗಳನಂತರ ಟಿಮ್ಮಿನ ಪುನಃ ಕಲಿಕೆ ಪೂರ್ಣವಾಗುವ ಘಟ್ಟ ತಲುಪಿತು. ಮನೆಯಲ್ಲಿ ಸಲೀಸಾಗಿ ಓಡಾಡಬಲ್ಲವನಾಗಿದ್ದರೂ ಹೊರಗೆ ಹೋದಾಗ ಬೆತ್ತವನ್ನು ಬಳಸುತ್ತಿದ್ದನು. ಅಲ್ಲದೆ ತನ್ನ ಎಡಗೈ ಹತೋಟಿಯನ್ನು ಅಸಂಪೂರ್ಣವಾಗಿಯಾದರೂ ಪಡೆದು ಕಾರನ್ನು ಬಿಡಲು ಸಮರ್ಥನಾದನು. ದೀರ್ಘ ಕಾಲದ ಹಾಗೂ ಅದೇ ತರುಣದ ನೆನಪೂ ಅಧಿಕವಾಗಿ ಉಂಟಾಗುತ್ತಿತ್ತು. ಆಘಾತಕ್ಕೆ ಹಿಂದಿನ ಹಾಗೆ ಮಾತನ್ನು ವೇಗವಾಗಿ ಆಡಲಾಗದಿದ್ದರೂ ಸಲೀಸಾಗಿ ಆಡುವಂತಾಯಿತು. ಹಾಸ್ಯದ ಚಟಾಕಿಗಳು, ಹಿಂದೆ ವ್ಯಕ್ತಪಡಿಸುತ್ತಿದ್ದ ಆಸೆ ಇವೂ ಆಗಾಗ ತಲೆದೋರುತ್ತಿದ್ದುವು. “ನಾನು ಪ್ರೀತಿಸಿ ಮದುವೆ ಮಾಡಿಕೊಳ್ಳಬಹುದಾದ ಹೆಂಗಸು ಒಬ್ಬಳು ಇದ್ದೇ ಇದ್ದಾಳೆ. ಅವಳನ್ನು ಕಂಡುಕೊಳ್ಳುವಷ್ಟು ಅದೃಷ್ಟ ಇನ್ನೂ ನನಗೆ ಒದಗಿಲ್ಲ” ಎಂದು ಟಿಮ್ ಮಿಲ್ಲಿಗೆ ಹೇಳುತ್ತಲೇ ಇದ್ದ.

೧೯೯೧ನೇ ವರ್ಷ ಹುಟ್ಟುವ ಹಿಂದಿನ ಸಾಯಂಕಾಲ ಒಬ್ಬ ಸ್ನೇಹಿತ ಕೊಡಲಿದ್ದ ಪಾರ್ಟಿಗೆ ಹೋಗಲು ಟಿಮ್ ತವಕಗೊಳ್ಳುತ್ತಿದ್ದ. ಮಧ್ಯರಾತ್ರಿಗೆ ಸ್ವಲ್ಪ ಮುಂಚೆ ಅವನು ಅಡುಗೆ ಮನೆಗೆ ಹೋದಾಗ ದುರ್ಬಲ ಮನಸ್ಸಿನ ಮಕ್ಕಳಿಗೆ ಓದು ಬರಹ ಕಲಿಸುವ ಹುದ್ದೆಯಲ್ಲಿದ್ದ ಪ್ಯಾಮ್ ಕ್ಯಾಷ್‌ಬೌ ಎಂಬ ತರುಣಿಯನ್ನು ಅಲ್ಲಿ ಸಂಧಿಸಿದ. ಪ್ಯಾಮಿಗೆ ಅವನಷ್ಟೆ ವಯಸ್ಸು—೩೧ ವರ್ಷ. ನಾಚಿಕೊಳ್ಳುವ ಹಾಗೂ ಮೃದು ಮಾತಿನ ಈಕೆ ವಿಶ್ವಸನೀಯ ನಡವಳಿಕೆಯನ್ನು ಹೊಂದಿದ್ದಳು. ಟಿಮ್ ಮೊದಲಿಗೇ ಅವಳನ್ನು ಮೆಚ್ಚಿದ. ಪ್ಯಾಮ್ ಯಾವಾಗಿನಿಂದಲೂ ಹೃತ್ಪೂರ್ವಕವಾಗಿ ಮಾತಾಡುವಾಕೆ. ಗುರುತಾದ ತರುಣದಲ್ಲಿ ಒಂದು ದಿನ ಅವರಿಬ್ಬರೇ ಎಲ್ಲೋ ಹೋಗಿದ್ದಾಗ ಅವಳು ಅವನಿಗೆ ಒಂದು ಗುಟ್ಟನ್ನು ತಿಳಿಸಿದಳು—“ನಾನು ನಿನ್ನನ್ನು ಮೊದಲು ಸಂಧಿಸಿದ ರಾತ್ರಿ ಮನೆಗೆ ಹೋದ ಮೇಲೆ ತುಂಬ ಅತ್ತುಬಿಟ್ಟೆ; ನೀನು ಅಷ್ಟೊಂದು ಅಪಾಯಕಾರಿ ಆಘಾತದಿಂದ ಚೇತರಿಸಿಕೊಂಡು ತುಂಬ ಕಷ್ಟಪಟ್ಟು ಮರುಕಲಿಕೆಯನ್ನು ಸಾಧಿಸಿದ್ದನ್ನು ಕೇಳಿ ನನಗೆ ತಡೆಯಲಾರದಷ್ಟು ದುಃಖವಾಯಿತು” ಎಂದು.

“ನಾನೇನೂ ಅಸಂತುಷ್ಟನಾಗಿಲ್ಲ; ಇಷ್ಟುವರೆಗೆ ಗುಣವಾಗಿದ್ದೇನಲ್ಲ,

ಇನ್ನೂ ಎಷ್ಟುಮಟ್ಟಿಗೆ ಗುಣವಾಗಬಹುದು ಎಂದು ನನ್ನ ಯೋಚನೆ. ಇನ್ನೂ ಗುಣವಾಗಲೇಬೇಕಾಗಿರುವ ಸ್ಥಿತಿಗಳ ಯೋಚನೆಯನ್ನು ನಾನು ಮರೆತಿಲ್ಲ" ಅಂತ ಟಿಮ್ ಹೇಳಿದ. ಏಪ್ರಿಲ್ ತಿಂಗಳ ಕೊನೆಯಲ್ಲಿ ಟಿಮ್ ಪ್ಯಾಮಿನ ಜೊತೆ ತನ್ನ ತಂದೆ ತಾಯಿಗಳು ಇದ್ದಲ್ಲಿಗೆ ಹೋಗಿ ತಾವಿಬ್ಬರೂ ಮದುವೆಮಾಡಿಕೊಳ್ಳಬೇಕೆಂದು ಉದ್ದೇಶಿಸಿರುವುದಾಗಿ ತಿಳಿಸಿದ. ಈ ದಿನಗಳಲ್ಲಿ ಟಿಮ್ಮನ ಆತ್ಮವಿಶ್ವಾಸ ಹೆಚ್ಚುತ್ತಿರುವಂತೆ ತೋರಿತು. ಆಗ ತಾನು ಮಾಡುತ್ತಿದ್ದ ಪೋಸ್ಟ್ ಆಫೀಸಿನ ಕೆಲಸದಿಂದ ನಿರಾಶನಾಗಿ ರಿಸರ್ಚ್ ಅನಾಲಿಸ್ಟ್ ಆಗಬೇಕೆಂದು ಅದಕ್ಕಾಗಿ ಹಲವಾರು ಪರೀಕ್ಷೆಗಳನ್ನು ತೆಗೆದುಕೊಂಡ. ಆದರೆ ಎರಡನೇ ಬಾರಿಯೂ ಅನುತ್ತೀರ್ಣನಾಗಿ ಕೊನೆಗೆ ಮೂರನೇ ಸಲ ೧೯೯೧ರಲ್ಲಿ ಉತ್ತೀರ್ಣನಾಗಿ ತಾನು ಇಚ್ಛೆಪಟ್ಟಿದ್ದ ಉದ್ಯೋಗವನ್ನು ಗಿಟ್ಟಿಸಿಕೊಂಡ.

ಟಿಮ್ ಮತ್ತು ಪ್ಯಾಮ್ ೧೯೯೨ರ ಏಪ್ರಿಲ್ ೪ರಂದು ಮದುವೆ ಆದರು. ೧೫೦ಕ್ಕೂ ಮೇಲ್ಪಟ್ಟು ಅತಿಥಿಗಳು ಸಮಾರಂಭಕ್ಕೆ ಬಂದಿದ್ದರು. ಟಿಮ್ಮನ ತಂದೆ ತಾಯಿಯರು ಉಲ್ಲಸಿತಮುಖರಾಗಿ ಮುಂದಿನ ಸಾಲಿನಲ್ಲಿ ಕುಳಿತಿದ್ದರು. ಮದುವೆಯ ಶಾಸ್ತ್ರಗಳು ಮುಗಿದ ಮೇಲೆ ಟಿಮ್ ಕೋಲನ್ನು ಒತ್ತಟ್ಟಿಗಿಟ್ಟು ಆಸರೆಗಾಗಿ ಪ್ಯಾಮಿನ ಕೈಹಿಡಿದು ನಡೆದುಕೊಂಡು ಹೊರಕ್ಕೆ ಬಂದ. ಇದನ್ನು ನೋಡುತ್ತಲೇ ಇದ್ದ ಟಾಮ್ ಕೂಡ ವಿಲ್ಲಿಯನ್ನು ತಬ್ಬಿ ಹತ್ತಿರಕ್ಕೆ ಎಳೆದುಕೊಂಡ. ನೋಡುತ್ತಿದ್ದವರೆಲ್ಲ ಚಪ್ಪಾಳೆ ತಟ್ಟುತ್ತ ಆನಂದದಿಂದ ಕಣ್ಣೀರು ಬಿಟ್ಟರು.

[ವೈದ್ಯ ತಜ್ಞರು ಹೇಳುವುದೇನೆಂದರೆ ಟಿಮ್ಮನ ನೆನಪಿನ ಪುನಃ ಪ್ರಾಪ್ತಿ ಒಂದು ತರ ಹಿಮ್ಮುಖನ್ನಾದ ಮರವಿನ ಬಗೆ–ರಿಟ್ರೋಗ್ರೇಡ್ ಆಮ್ನೀಸಿಯ. ವ್ಯಕ್ತಿಯ ಜೀವನದ ಪೂರ್ಣ ಅನುಭವಗಳೆಲ್ಲವೂ ಅವನ ಸುಪ್ತಜ್ಞಾನದಲ್ಲಿ ಅಡಗಿರುತ್ತವೆ. ಸಾಮಾನ್ಯವಾಗಿ ಸ್ವಲ್ಪವೇ ಹಿಂದಿನ ಅನುಭವಗಳು ಚೆನ್ನಾಗಿ ಜ್ಞಾಪಕಕ್ಕೆ ಬರುತ್ತವೆ. ಯಾರಿಗಾದರೂ ಟಿಮ್ಮನಂತೆ ಹಿಮ್ಮುಖನ್ನಾದ ಮರವು ಉಂಟಾದರೆ ಈ ರೀತಿಯ ಜ್ಞಾಪಕ ನಷ್ಟವಾಗಿ ತುಂಬ ಹಿಂದಿನವು ಜ್ಞಾಪಕಕ್ಕೆ ಬರುವುದಕ್ಕೆ ಅವಕಾಶವಾಗುತ್ತದೆ.

ಟಿಮ್ ಇದಕ್ಕಿಂತ ಸ್ವಲ್ಪ ಹೆಚ್ಚಾಗಿಯೇ ಹಿಮ್ಮುಖನ್ನಿನ ಮರೆವಿನ ಜ್ಞಾಪಕದ ಅನುಭವ ಪಡೆದ. ಅವನ ಅತಿ ಹಿಂದಿನ ಜ್ಞಾಪಕಗಳು ಕಾಲ

ಕ್ರಮೇಣದಂತೆ ಫಲಿಸಿದುವು. ವಾಸ್ತವವಾಗಿ ಅವನು ಒಂದು ರೀತಿಯಲ್ಲಿ ಮರು ಜೀವನವನ್ನೆ ಅನುಭವಿಸಿದ. ಈ ರೀತಿ ಆದ್ದರಿಂದ ಅವನಿಗೆ ತಾನು ಯಾವ ರೀತಿ ಮನುಷ್ಯನಾಗಬೇಕೆಂದಿತ್ತೊ, ಎಂಥ ಸಂಸಾರ ಮಾಡಬೇಕೆಂದಿತ್ತೊ, ಯಾವ ರೀತಿಯ ಭವಿಷ್ಯವನ್ನು ಅನುಭವಿಸಬೇಕೆಂದಿತ್ತೊ ಅವೆಲ್ಲ ಜ್ಞಾಪಕಕ್ಕೆ ಬಂದು ಅವೇ ಪುನಃ ಸಫಲವಾಗುವುದಕ್ಕೆ ಅವಕಾಶ ಮಾಡಿಕೊಟ್ಟಂತಾಯಿತು.]

ಡಾ|| ಎಸ್. ರಾಮರಾವ್



ದೇವರೇ ಇಲ್ಲ ಎನ್ನುವವರು ನೀರಲ್ಲಿದ್ದೂ ನೀರು ಕುಡಿಯುವುದಿಲ್ಲ ಎಂದು ಬೂಟಾಟಿಕೆ ಹೇಳುವ ಮೀನಿನಂತೆ. ನೀರಿನಿಂದ ಹೊರಗೆಳೆದು ಹಾಕಿದರೆ ಆ ಮೀನಿನ ಬಣ್ಣ ಬಯಲಾಗುವಂತೆ ಅವರ ಗತಿಯೂ ಅಷ್ಟೇ!

—ಸ್ವಾಮಿ ರಾಮದಾಸ

ನಿದ್ರಾಹೀನತೆ

ಜಗದ ಜಂಜಾಟಗಳನ್ನು ಬದುಕಿನ ಬವಣೆಗಳನ್ನು ಕೊಂಚಕಾಲವಾದರೂ ಮರೆಯಲು ನೆರವಾಗುತ್ತದೆ ನಿದ್ರೆ. ಸ್ವಲ್ಪ ಹೊತ್ತು ಚೆನ್ನಾಗಿ ನಿದ್ರಿಸಿದರೂ ಸಾಕು, ಏಳುವ ವೇಳೆಗೆ ಹೊಸ ಉತ್ಸಾಹ-ಚೈತನ್ಯ-ಲವಲವಿಕೆಗಳು ವ್ಯಕ್ತಿಯಲ್ಲಿ ಮೂಡಿರುತ್ತವೆ. ಕೆಲವು ರೋಗಗಳಿಗಂತೂ ನಿದ್ದೆಯೇ ಮದ್ದು. ಆದರೆ ನಿದ್ರೆ ಬರದಿರುವುದೇ ಒಂದು ರೋಗವಾಗಿ ಕಾಡತೊಡಗಿದರೆ?

ನಿದ್ರಾಹೀನತೆಯ ಕಾರಣಗಳು ಮತ್ತು ಚಿಕಿತ್ಸೆಗೆ ಸಂಬಂಧಪಟ್ಟಂತೆ ನಿದ್ರಾ ತಜ್ಞರಲ್ಲಿ ಒಮ್ಮತವಿಲ್ಲ. ಆದರೆ ಅದು ಸ್ವತಃ ಒಂದು ರೋಗವಲ್ಲ, ಬದಲಾಗಿ ಎದೆನೋವು ಅಥವಾ ತಲೆನೋವಿನಂತೆ ಒಂದು ರೋಗ ಚಿಹ್ನೆ ಮಾತ್ರ ಎಂಬ ಸಾಮಾನ್ಯ ಅಭಿಪ್ರಾಯ ಒಂದಂತೂ ಇದ್ದೇ ಇದೆ. ನಿದ್ರಾಹೀನತೆಗೆ ಕಾರಣಗಳು ಅನೇಕ. ಇವುಗಳಲ್ಲಿ ಕೆಲವು ದೈಹಿಕ, ಇನ್ನು ಕೆಲವು ಮಾನಸಿಕ. ಹತ್ತು ಹಲವು ಕಾರಣಗಳ ವಿಶೇಷ ಸಂಯೋಗದಿಂದ ವ್ಯಕ್ತಿ ನಿದ್ರಾಹೀನತೆಗೆ ಬಲಿಯಾಗುತ್ತಾನೆ. ಎಂತೆಂತಹ ಕಾರಣಗಳು ಒಂದುಗೂಡಿ ವ್ಯಕ್ತಿ ಅನಿದ್ರಾರೋಗಕ್ಕೆ ಈಡಾದ ಎಂದು ತಿಳಿದುಕೊಂಡ ಅನಂತರ ಮಾತ್ರ ಯಶಸ್ವಿ ಚಿಕಿತ್ಸೆ ನಡೆಸುವುದು ಸಾಧ್ಯ.

ನಿದ್ರಾ ಸಂಶೋಧಕರ ಪ್ರಕಾರ ನಿದ್ರಾಹೀನತೆಯಲ್ಲಿ ಎರಡು ವಿಧ: i) ಸಾಮಾನ್ಯ ನಿದ್ರಾಹೀನತೆ ಮತ್ತು ii) ಹೆಚ್ಚು ಗಂಭೀರವಾದ ನಿದ್ರಾಹೀನತೆ. ಕೆಲಸದಲ್ಲಿ ತೀವ್ರವಾದ ಹಿನ್ನಡೆ, ಮೇಲಧಿಕಾರಿಯೊಂದಿಗೆ ಸಂಘರ್ಷ ಅಥವಾ ಸದ್ಯವೆ ಪ್ರಾರಂಭವಾಗಲಿರುವ ಪರೀಕ್ಷೆ—ಇವೇ ಮೊದಲಾದ ಕಾರಣಗಳಿಂದ, ಪ್ರತಿಯೊಬ್ಬರೂ ಆಗಾಗ ಕೆಲವು ರಾತ್ರಿ ನಿದ್ರೆಯಿಂದ ವಂಚಿತರಾಗುವುದು ಸಹಜ. ಆತ್ಮೀಯರ ಅಗಲಿಕೆ, ವಿವಾಹವಿಚ್ಛೇದನ, ಸ್ಥಳ ಬದಲಾವಣೆ, ಅನಾರೋಗ್ಯ ಮೊದಲಾದುವೂ ನಿದ್ದೆ ಬರದಿರುವುದಕ್ಕೆ ಕಾರಣವಾಗಬಹುದು. ಆದರೆ ಇವೆಲ್ಲ, ಹೆಚ್ಚೆಂದರೆ ಒಂದೆರಡು ವಾರಗಳಷ್ಟು ಕಾಲ ಮಾತ್ರ ಮುಂದು ವರಿಯಬಹುದಾದ 'ಅಲ್ಪ ಕಾಲೀನ' ನಿದ್ರಾಹೀನತೆ. ಹೆಚ್ಚು ತೀವ್ರವಾದು ದೆಂದರೆ, ತಿಂಗಳುಗಳ ಕಾಲ, ಅಷ್ಟೇ ಏಕೆ? ವರ್ಷಗಳ ಕಾಲವೂ ಮುಂದುವರಿಯ ಬಹುದಾದ ಬೇರೂರಿದ ಅಥವಾ ಅಸ್ಥಿಗತ ನಿದ್ರಾಹೀನತೆ.

೧೯೮೭ ನೆಯ ಸೆಪ್ಟೆಂಬರ್ ತಿಂಗಳ 'ರೀಡರ್ಸ್ ಡೈಜೆಸ್ಟ್' ಸಂಚಿಕೆಯಲ್ಲಿ ಪ್ರಕಟವಾದ ಜಾನೆಟ್ ಹಾಪ್ಸನ್ ಅವರ 'ಇನ್‌ಸಾಮ್ನಿಯ' ಎಂಬ ಲೇಖನದ ಆಧಾರದಿಂದ.

ಒಂದು ರಾತ್ರಿಯಲ್ಲಿ ಎಷ್ಟು ಗಂಟೆಗಳ ಕಾಲ ಅಥವಾ ಒಂದು ತಿಂಗಳಿನಲ್ಲಿ ಎಷ್ಟು ರಾತ್ರಿ ನಿದ್ರೆ ಮಾಡಲು ವ್ಯಕ್ತಿ ಅಸಮರ್ಥನಾದ ಎಂಬ ಅಂಕಿಅಂಶಗಳ ಆಧಾರದ ಮೇಲೆ ನಿದ್ರಾಹೀನತೆ ಎಷ್ಟು ತೀವ್ರವಾದುದು ಎಂದು ನಿರ್ಧರಿಸುವುದೂ ಸಾಧ್ಯವಿಲ್ಲ. ಏಕೆಂದರೆ ವ್ಯಕ್ತಿಗಳ ನಿದ್ರಾಪ್ರಮಾಣ ಒಂದೇ ಬಗೆಯಾಗಿರುವುದಿಲ್ಲ. ನವಜಾತ ಶಿಶುಗಳು ದಿನಕ್ಕೆ ೧೪ ರಿಂದ ೧೮ ಗಂಟೆಗಳಷ್ಟು ಕಾಲ ನಿದ್ರೆ ಮಾಡುತ್ತವೆ. ಹತ್ತು ವರ್ಷವಾಗುವ ವೇಳೆಗೆ ೯ ಅಥವಾ ೧೦ ಗಂಟೆಗಳ ನಿದ್ರೆ ಮಕ್ಕಳಿಗೆ ಸಾಕಾಗುತ್ತದೆ. ವಯಸ್ಕರಲ್ಲಿ ಮೂರನೆಯ ಎರಡು ಭಾಗ ಜನರು ರಾತ್ರಿ ಏಳೆಂಟು ಗಂಟೆ ಮಾತ್ರ ನಿದ್ರೆ ಮಾಡಿದರೆ, ಐದನೆಯ ಒಂದು ಭಾಗ ಜನರಿಗೆ ೬ ಗಂಟೆಗಳಿಗಿಂತಲೂ ಕಡಮೆ ಕಾಲದ ನಿದ್ರೆ ಸಾಕಾಗುತ್ತದೆ. ವೃದ್ಧಾಪ್ಯದಲ್ಲಿ ಮತ್ತೂ ಕಡಿಮೆ ನಿದ್ರೆ ಸಾಕಾಗುತ್ತದೆ. ವೃದ್ಧರ ಸರಾಸರಿ ನಿದ್ರಾ ಪ್ರಮಾಣ ಕೇವಲ ಆರೂವರೆ ಗಂಟೆ. ಏನಿದ್ದರೂ ನಿದ್ರಾಹೀನತೆ ಗಂಭೀರ ಸಮಸ್ಯೆಯೆನಿಸುವುದು ಹಗಲಿನಲ್ಲಿ ಸಮರ್ಪಕವಾಗಿ ಕೆಲಸ ನಿರ್ವಹಿಸುವುದು ಹಾಗೂ ವರ್ತಿಸುವುದರ ಮೇಲೆ ಅದು ದುಷ್ಪರಿಣಾಮ ಬೀರುವಂತೆ ಆದಾಗ ಮಾತ್ರ.

ವ್ಯಕ್ತಿ ಅನಿದ್ರಾರೋಗಕ್ಕೆ ಈಡಾಗುವುದು ಏಕೆ? ಹಿಂದೆಯೆ ಹೇಳಿದಂತೆ ಯಾವುದೇ ಒಂದು ಕಾರಣದಿಂದ ಸಾಮಾನ್ಯವಾಗಿ ನಿದ್ರಾಹೀನತೆ ಉಂಟಾಗುವುದಿಲ್ಲ. ಅನೇಕ ಅಂಶಗಳ ಪರಸ್ಪರ ಪ್ರಭಾವದಿಂದ ವ್ಯಕ್ತಿಗೆ ಅನಿದ್ರಾರೋಗ ಬರುತ್ತದೆ. ಈ ಕೆಳಗಿನ ನಿದರ್ಶನಗಳನ್ನು ಗಮನಿಸಿ: i) ಕೆಲಸದ ಒತ್ತಡವಿದ್ದಾಗ ಸುಲಭವಾಗಿ ನಿದ್ದೆ ಮಾಡಲೆಂದೇ ಕೆಲವು ದುಶ್ಚಟಗಳನ್ನು ಬೆಳೆಸಿಕೊಂಡಿದ್ದಾಳೆ ರೀಟಾ. ಅವಳ ಕಾಲಿನಲ್ಲಿ ಇನ್ನೂ ಮಾಯದ ಹಳೆಯ ಗಾಯವೊಂದಿದ್ದು ಅದು ಆಗಾಗ ನೋಯುತ್ತದೆ. ಅವಳು ಪುಟ್ಟ ಮಗುವಿನ ತಾಯಿ. ii) ಜಾನ್ ಥೈರಾಯಿಡ್ ಔಷಧ ಸೇವಿಸುತ್ತಾನೆ. ಅವನ ಮನೆಯಿರುವುದು ವಿಮಾನನಿಲ್ದಾಣದ ಸಮೀಪ. ಅವನ ಮಡದಿಗೆ ಗೊರಕೆ ಹೊಡೆಯುವ ಅಭ್ಯಾಸವಿದೆ. iii) ಆತಂಕ ಮತ್ತು ಖಿನ್ನತೆ ಉಂಟಾದಾಗ ನಿದ್ರೆಗಾಗಿ ಮಾತ್ರೆಗಳನ್ನು ನುಂಗುವ ಅಭ್ಯಾಸ ರಾಬರ್ಟ್‌ನಿಗೆ ಉಂಟು. ಕೆಲಸದ ಅವಧಿಗೆ ಸಂಬಂಧಿಸಿದ ನಿರ್ದಿಷ್ಟ ವೇಳಾಪಟ್ಟಿಯಿಲ್ಲದಿರುವುದರಿಂದಾಗಿ ಪ್ರತಿದಿನ ಒಂದೇ ವೇಳೆಗೆ ಮಲಗುವುದು ಅವನಿಗೆ ಸಾಧ್ಯವಾಗುವುದಿಲ್ಲ.

ಹೀಗೆ ಈ ಮೂವರ ನಿದ್ರಾಹೀನತೆಗೂ ಒಂದೇ ಒಂದು ಕಾರಣವಲ್ಲ.

ಸಂಕೀರ್ಣವಾಗಿರುವ ಅನೇಕ ದೈಹಿಕ ಹಾಗೂ ಮನೋವೈಜ್ಞಾನಿಕ ಪರಸ್ಪರ ಕ್ರಿಯೆಗಳ ಪರಿಣಾಮವಾಗಿ ಕಾಣಿಸಿಕೊಳ್ಳುವ ನಿದ್ರಾಹೀನತೆಗೆ ನಿದ್ರಾ

ಸಂಶೋಧಕರು ಈಗ 'ಡಿಮ್ಸ್' (DIMS—'Disorders of Initiating and Maintaining Sleep') ಎಂಬ ಹೊಸ ಹೆಸರನ್ನೇ ಇಟ್ಟಿದ್ದಾರೆ. ಕನಿಷ್ಠ ನಾಲ್ಕು ಶೀರ್ಷಿಕೆಗಳಲ್ಲಿ ಡಿಮ್ಸ್‌ಗೆ ಕಾರಣಗಳನ್ನು ವಿಶ್ಲೇಷಿಸಬಹುದು.

i) **ಜೀವ ವೈಜ್ಞಾನಿಕ :** ವಿದುಳು ಪ್ರಾಯಶಃ ಎರಡು ಬಗೆಯ ವ್ಯವಸ್ಥೆಗಳಲ್ಲಿ ನಿದ್ರೆ ಹಾಗೂ ಎಚ್ಚರಗಳನ್ನು ನಿಯಂತ್ರಿಸುತ್ತದೆ. ಇವೇ i) 'ಉತ್ತೇಜಕ' ವ್ಯವಸ್ಥೆ ಮತ್ತು 'ಶಾಮಕ' ವ್ಯವಸ್ಥೆ. ನಿದ್ರೆ ಬರಬೇಕಾದರೆ ಉತ್ತೇಜಕ ವ್ಯವಸ್ಥೆಯ ಕಾರ್ಯಚಟುವಟಿಕೆಗಳು ಸ್ಥಗಿತಗೊಳ್ಳಬೇಕು. ಉದ್ವೇಗ ಆತಂಕದ ಸಮಯಗಳಲ್ಲಿ ಉತ್ತೇಜಕ ವ್ಯವಸ್ಥೆ ಅತ್ಯಧಿಕ ಚಟುವಟಿಕೆ ನಡೆಸುವುದರಿಂದ ವ್ಯಕ್ತಿಗೆ ನಿದ್ರೆ ಬರುವುದಿಲ್ಲ.

ವೈದ್ಯಕೀಯ ಸಮಸ್ಯೆಗಳೂ ನಿದ್ರಾಹೀನತೆಗೆ ಕಾರಣವಾಗುವುದುಂಟು. ಇವುಗಳಲ್ಲಿ ಪ್ರಧಾನವಾದವೆಂದರೆ—ಸಂಧಿವಾತದಿಂದ ಕಾಣಿಸಿಕೊಳ್ಳುವ ದೈಹಿಕ ನೋವು, ಅಲ್ಸರ್, ಗಂಟಲ ಊತ, ಅರೆತಲೆ ಶೂಲೆ, ಅಸ್ತಮ, ಕಷ್ಟದಿಂದ ಕೂಡಿದ ಶ್ವಾಸೋಚ್ಛ್ವಾಸ, ಅನಿಯತವಾದ ಎದೆಬಡಿತ, ಮೂತ್ರಪಿಂಡ ಹಾಗೂ ಥೈರಾಯಿಡ್‌ಗೆ ಸಂಬಂಧಿಸಿದ ಸಮಸ್ಯೆಗಳು, ಗರ್ಭಿಣಿಯಾಗಿರುವುದು, ಕಾಲುಗಳಲ್ಲಿ ಕಾಣಿಸಿಕೊಳ್ಳುವ ಸೆಳವು ಇತ್ಯಾದಿ. ಮೊದಲೇ ಹೇಳಿದಂತೆ ವಯಸ್ಸಾಗುವಿಕೆಯೂ ನಿದ್ರೆಮಾಡುವ ಸಾಮರ್ಥ್ಯ ಕಡಮೆಯಾಗಲು ಕಾರಣವಾಗುತ್ತದೆ.

ii) **ಔಷಧಗಳು :** ಮದ್ಯಪಾನ ಹಾಗೂ (ಕಾನೂನುಬದ್ಧವಾದ ಅಥವಾ ಕಾನೂನು ಬಾಹಿರವಾದ ಮತ್ತು ವೈದ್ಯರು ಗೊತ್ತುಪಡಿಸಿದ ಅಥವಾ ಸ್ವಯಂ ಇಚ್ಛೆಯಿಂದ ಅಂಗಡಿಗಳಿಂದ ಖರೀದಿಸುವ) ಇತರ ಅನೇಕ ಔಷಧಗಳ ಸೇವನೆ—ಇವುಗಳ ಪರಿಣಾಮವಾಗಿಯೂ ನಿದ್ರೆಗೆ ಸಂಬಂಧಿಸಿದ ತೊಂದರೆಗಳು ಕಾಣಿಸಿಕೊಳ್ಳುವುದು ಸಾಬೀತಾಗಿದೆ. ೫೦೦೦ ರೋಗಿಗಳ ಮೇಲೆ ಅಮೆರಿಕದಲ್ಲಿ ನಡೆಸಿದ ಅಧ್ಯಯನವೊಂದರಿಂದ ಸುಮಾರು ಶೇಕಡಾ ೧೨ರಷ್ಟು ರೋಗಿಗಳ ತೀವ್ರ ನಿದ್ರಾಹೀನತೆಗೆ ಮದ್ಯಪಾನ ಮತ್ತು ಔಷಧ ಸೇವನೆಯೇ ಮುಖ್ಯ ಕಾರಣವೆಂದು ತಿಳಿದುಬಂದಿದೆ. ಉತ್ತೇಜಕ, ಶಾಮಕ ಹಾಗೂ ಮಾಂದ್ಯಜನಕ ಔಷಧಗಳಂತೆ, ಥೈರಾಯಿಡ್ ಔಷಧಗಳು, ಗರ್ಭನಿರೋಧಕಗಳು, ಪ್ರತಿ—ಮಾಂದ್ಯಜನಕಗಳು ಮತ್ತು ಹೃದ್ರೋಗಕ್ಕೆ ಬಳಸುವ ಔಷಧಗಳು ಕೂಡ ನಿದ್ರಾಹೀನತೆಗೆ ಕಾರಣವಾಗುತ್ತವೆ. ಕ್ಯಾಲಿಫೋರ್ನಿಯ ವಿಶ್ವವಿದ್ಯಾನಿಲಯದ ನಿದ್ರಾ ರೋಗ

ಚಿಕಿತ್ಸಾಲಯದ ನಿರ್ದೇಶಕರೂ ಮನೋರೋಗ ಚಿಕಿತ್ಸಕರೂ ಆಗಿರುವ ಜರ್ಮನ್ ಸ್ಟೈನೋ-ಮರ್ಸಿಯ ಅವರ ಅಭಿಪ್ರಾಯದಂತೆ, ತಮಾಷೆಯಾಗಿ ಹೇಳುವುದಾದರೆ, "ನಿದ್ರಾರೋಗಿಯ ಕಾಲುಗಳನ್ನು ಹಿಡಿದು ತಲೆಕೆಳಗೆ ಮಾಡಿ, ಅವನ ಜೇಬುಗಳಿಂದ ಎಲ್ಲ ಔಷಧಗಳೂ ಕೆಳಗೆ ಬೀಳುವಂತೆ, ಜೋರಾಗಿ ಅತ್ತ ಇತ್ತ ಅವನನ್ನು ಅಲ್ಲಾಡಿಸುವುದೇ ಅತ್ಯಂತ ಉತ್ತಮವಾದ ಚಿಕಿತ್ಸೆ."

ಮದ್ಯಪಾನ ಮತ್ತು ನಿದ್ರೆಮಾತ್ರೆಗಳ ಸೇವನೆ—ಇವೆರಡೂ ಉತ್ತಮ ನಿದ್ರೆ ಬರಲು ನೆರವಾಗುತ್ತವೆ ಎಂದು ಕಂಡುಬಂದರೂ, ವಾಸ್ತವವಾಗಿ ಹೇಳುವುದಾದರೆ, ಇವುಗಳಿಂದ ಗಾಢನಿದ್ರೆಯೇನೂ ಬರುವುದಿಲ್ಲ; ನಡುನಡುವೆ ಎಚ್ಚರವಾಗುತ್ತದೆಯಷ್ಟೇ ಅಲ್ಲದೆ ವ್ಯಕ್ತಿಗೆ ಬಹಳ ಬೇಗನೆ ಸಂಪೂರ್ಣ ಎಚ್ಚರವಾಗುತ್ತದೆ. ಸ್ಟೈನೋ-ಮರ್ಸಿಯ ಅವರ ಪ್ರಕಾರ ಅಂಥ ಔಷಧಗಳನ್ನು ಸೇವಿಸುವ ವ್ಯಕ್ತಿಗಳು "ನಿದ್ರೆಯನ್ನು ಎರವಲು ತೆಗೆದುಕೊಳ್ಳುತ್ತಾರೆ" ಅಷ್ಟೆ. ಏಕೆಂದರೆ ಇದೇ ಕಾರಣದಿಂದ ಮುಂದೆ ಅವರು ನಿದ್ರಾಹೀನತೆಗೆ ತುತ್ತಾಗುತ್ತಾರೆ.

iii) ನಿದ್ರಾ ದುರಭ್ಯಾಸಗಳು : ಅನೇಕ ಜನರ ವಿಚಾರದಲ್ಲಿ, ಪ್ರತಿಕೂಲ ಪರಿಸರ ಅಥವಾ ದುರಭ್ಯಾಸಗಳು ನಿದ್ರೆಯ ಮೇಲೆ ಗಾಢವಾದ ಪರಿಣಾಮ ಬೀರುತ್ತವೆ. ಅತಿಸದ್ದುಗದ್ದಲಗಳಿಂದ ತುಂಬಿದ ಅಥವಾ ಅತ್ಯಂತ ಬೆಚ್ಚಗಿನ ಅಥವಾ ತಣ್ಣನೆಯ ಕೊಠಡಿಯಲ್ಲಿ ನಿದ್ರೆಬಾರದಿರಬಹುದು. ಅಂತೆಯೆ ಅತ್ಯಧಿಕ ಅಥವಾ ಅತ್ಯಲ್ಪ ಆಹಾರ ಸೇವನೆಯ ಪರಿಣಾಮವಾಗಿ ಕೆಟ್ಟುಹೋಗಿ ಗಡಗಡ ಸದ್ದು ಮಾಡುವ ಹೊಟ್ಟೆ, ಮಲಗಹೋಗುವ ಕೆಲವೇ ಕಾಲದ ಮೊದಲು ಮಾಡಿದಂತಹ ವ್ಯಾಯಾಮ, ಅತ್ಯಧಿಕ ಮಾನಸಿಕ ಚೋದನೆಗೆ ಕಾರಣವಾಗುವ ಅಮಿನೊ-ಆಮ್ಲಯುಕ್ತವಾದ ಚಾಕೊಲೆಟ್, ಚೀಸ್‌ಗಳಂತಹ ಆಹಾರ ಪದಾರ್ಥಗಳ ಸೇವನೆ—ಇವೂ ನಿದ್ರಾಹೀನತೆಗೆ ಕಾರಣವಾಗಬಹುದು. ಮನಸ್ಸಿಗೆ ಬಂದಾಗ ಮಲಗುವ ಹಾಗೂ ಏಳುವ ಕ್ರಮರಹಿತ ನಿದ್ರಾಭ್ಯಾಸವೂ ನಿದ್ರಾಹೀನತೆಯನ್ನು ಉಂಟುಮಾಡಬಹುದು.

iv) ನಕಾರಾತ್ಮಕ ಭಾವನೆ ಹಾಗೂ ಸ್ಥಿತಿಗತಿಗಳು : ಕೆಲವು ಸಲ 'ನಿದ್ರೆ ಬರುವುದಿಲ್ಲ' ಎಂಬ ಭಯದಿಂದಲೆ ವ್ಯಕ್ತಿ ಅನಿದ್ರಾರೋಗಕ್ಕೆ ಬಲಿಯಾಗುವುದುಂಟು. ತಾರಸಿಯ ಮೇಲೆ ಆಕಾಶ ನೋಡುತ್ತ ಸಾಕಷ್ಟು ಕಾಲ ಕಳೆಯುವುದರಿಂದ ಅಥವಾ ಮಲಗುವ ಮುನ್ನ ಹಲ್ಲುಜ್ಜುವುದು ಅಥವಾ ಸಡಿಲಾದ ಪೈಜಾಮ ಧರಿಸುವುದರಿಂದ ಕೂಡಲೆ ನಿದ್ರೆ ಬರುತ್ತದೆ ಎಂದರೆ ಅದು ಸುಳ್ಳು. ಇಂಥ ಕೆಲವು

ಭಾವನೆಗಳು ಆತಂಕಕ್ಕೆ ಕಾರಣವಾಗುವ ಸಂಭವವೇ ಹೆಚ್ಚು. ನಿದ್ರೆ ಮಾಡಲು ಹೆಚ್ಚು ಹೆಚ್ಚು ಪ್ರಯತ್ನಿಸಿದರೂ ಫಲಿತಾಂಶ ಅಷ್ಟಷ್ಟು ನಿರಾಶಾದಾಯಕವಾಗುತ್ತದೆ.

ಯಾವುದೇ ಚಿಕಿತ್ಸೆ ಪ್ರಾರಂಭಿಸುವ ಮೊದಲು ಸರಿಯಾದ ರೀತಿಯಲ್ಲಿ ರೋಗ ನಿದಾನ ಮಾಡುವುದು ಅಗತ್ಯ. ಪೆನ್ಸಿಲ್ವೇನಿಯಾ ಸ್ಟೇಟ್ ವಿಶ್ವವಿದ್ಯಾನಿಲಯದ ವೈದ್ಯಕೀಯ ಕಾಲೇಜಿನ ನಿದ್ರಾರೋಗ ಚಿಕಿತ್ಸಾಲಯದಲ್ಲಿ ಮನೋರೋಗ ಚಿಕಿತ್ಸಕರಾಗಿರುವ ಆಂಥೋನಿ ಕೇಲ್ಸ್ ಅವರ ರೋಗಿಗಳು ಚಿಕಿತ್ಸೆ ಪಡೆಯುವ ಮೊದಲು ಎರಡು ದಿನಗಳ ದೀರ್ಘ ಪರಿಶೀಲನೆಗೆ ಒಳಪಡಬೇಕಾಗುತ್ತದೆ. ಇದರಲ್ಲಿ ಮನೋವಿಜ್ಞಾನಿಗಳೊಡನೆ ಸಂದರ್ಶನ, ಸಮಗ್ರ ವೈದ್ಯಕೀಯ ಪರೀಕ್ಷೆ ಹಾಗೂ ರೋಗಿಯ ಸವಿವರ ನಿದ್ರಾ ಇತಿಹಾಸದ ಅಧ್ಯಯನಗಳು ಸೇರಿರುತ್ತವೆ. ರೋಗಿಗಳು ಅವಶ್ಯವೆನಿಸಿದಲ್ಲಿ ಚಿಕಿತ್ಸಾಲಯದ ಪ್ರಯೋಗ ಶಾಲೆಯಲ್ಲಿಯೂ ಒಂದು ರಾತ್ರಿ ಕಳೆಯಬೇಕಾಗಬಹುದು. ಅಲ್ಲಿ ತಜ್ಞರು ರೋಗಿಗಳ ಮಿದುಳು–ಅಲೆಗಳು, ಹೃದಯದ ಚಟುವಟಿಕೆ, ಕಣ್ಣುಗಳು ಹಾಗೂ ಕಾಲುಗಳ ಚಲನೆ ಮತ್ತು ಶ್ವಾಸೋಚ್ಛ್ವಾಸಗಳನ್ನು ಪರೀಕ್ಷಿಸಿ ದಾಖಲಿಸುತ್ತಾರೆ.

ಕೇಲ್ಸ್ ಅನುಸರಿಸುವಂತಹ ಬಹು–ಆಯಾಮ ಚಿಕಿತ್ಸೆಯಲ್ಲಿ ಈ ಕೆಳಕಾಣಿಸಿದ ಕಾರ್ಯಕ್ರಮಗಳೂ ಸೇರಿರುತ್ತವೆ: ನಿದ್ರಾ ಅಭ್ಯಾಸ ಸುಧಾರಣೆಗೆ ಸಲಹೆ ಮಾರ್ಗದರ್ಶನ ನೀಡಿಕೆ, ವಿಶ್ರಾಂತಿ ಪಡೆಯುವ ಬಗೆಗಿನ ತರಬೇತಿ ಹಾಗೂ ಮನೋರೋಗ ಚಿಕಿತ್ಸೆ.

ಸ್ಟ್ಯಾನ್‌ಫೋರ್ಡ್ ಚಿಕಿತ್ಸಾಲಯದಲ್ಲಿ ನೈನೋ–ಮರ್ಸಿಯ ಅವರು ರೋಗಿಗಳ ದೈಹಿಕ ಹಾಗೂ ಮಾನಸಿಕ ಸ್ಥಿತಿಗತಿಗಳನ್ನು ಅವಲಂಬಿಸಿ ತಕ್ಕ ಚಿಕಿತ್ಸೆ ನೀಡುತ್ತಾರೆ. ಅವರ ರೋಗಿಗಳಲ್ಲೊಬ್ಬಳು 'ನಿದ್ರಾನಿಯಂತ್ರಣ' ಚಿಕಿತ್ಸೆ ಪಡೆದು ತನ್ನ 'ನಿದ್ರೆ–ಎಚ್ಚರ ಚಕ್ರ'ವನ್ನು ನಿಯಂತ್ರಿಸಿಕೊಳ್ಳಲು ಕಲಿತಿದ್ದಾಳೆ. ಏನಾದರೂ ಕೆಲಸದಲ್ಲಿ ತೊಡಗಿದ್ದು ತೂಕಡಿಕೆ ಬರಲು ಶುರುವಾದ ತತ್‌ಕ್ಷಣ ಮಲಗುವಂತೆ ಅವಳಿಗೆ ಸೂಚನೆ ನೀಡಲಾಯಿತು. ಮೊದಮೊದಲು ರಾತ್ರಿ ಎರಡು ಗಂಟೆಯತನಕ ಅವಳು ತೂಕಡಿಸುತ್ತಿರಲಿಲ್ಲ. ನಿದ್ರಾ ಹವ್ಯಾಸ ಒಂದು ನಿಯತಕ್ರಮಕ್ಕೆ ಬರತೊಡಗಿದಂತೆ, ಹನ್ನೆರಡು–ಹನ್ನೆರಡೂವರೆ ಗಂಟೆಗೇ ನಿದ್ರಿಸುವುದು ಅವಳಿಗೆ ಸಾಧ್ಯವಾಯಿತು. ಈಗ ಅವಳಿಗೆ ಪ್ರತಿದಿನ ರಾತ್ರಿ ೧೧-೩೦ ವೇಳೆಗೆ ನಿದ್ರೆ ಬರುತ್ತದೆ. ಅಷ್ಟೇ ಅಲ್ಲದೆ ತೂಕಡಿಸದೆ, ಮಲಗಿದೊಡನೆ ನಿದ್ರೆ ಮಾಡಲು ಹಾಗೂ ಎಚ್ಚರಾದೊಡನೆ ಏಳಲು ಅವಳಿಗೆ ಸಾಧ್ಯವಾಗಿದೆ.

"ಈಗ ಆಕಸ್ಮಾತ್ ಯಾವ ದಿನವಾದರೂ ನಿದ್ರೆ ಬರುವುದಿಲ್ಲವೆಂದು ಅನಿಸಿದರೆ ಆ ರಾತ್ರಿ ಬೇಗ ಮಲಗದೆ ಸಾಧ್ಯವಾದಷ್ಟು ತಡವಾಗಿ ಮಲಗಹೋಗುತ್ತೇನೆ. ಆದರೆ ಮಲಗಿದ ತತ್‌ಕ್ಷಣ ನಿದ್ರೆ ಬರುತ್ತದೆ" ಎನ್ನುತ್ತಾಳೆ ಅವಳು.

ವಿಶೇಷ ಚಿಕಿತ್ಸಾಲಯದಲ್ಲಿ ತಜ್ಞ ವೈದ್ಯರಿಂದ ಚಿಕಿತ್ಸೆ ಪಡೆದರೂ ಪ್ರತಿಯೊಬ್ಬ ಅನಿದ್ರಾರೋಗಿ ಗುಣಹೊಂದುತ್ತಾನೆ ಎಂಬ ಭರವಸೆಯೇನೂ ಇಲ್ಲ. ಆದರೆ ಚಿಕಿತ್ಸೆಯಿಂದ ಕೆಲಮಟ್ಟಿನ ಪರಿಹಾರ ಸಿಗುವ ಆಶಾಭಾವನೆಯಂತೂ ಇದ್ದೇ ಇದೆ.

ಅನಿದ್ರಾರೋಗಿಗಳಿಗೆ ಇಲ್ಲಿ ಕೆಲವು ಸೂಚನೆಗಳಿವೆ:

* ರಾತ್ರಿ ನಿದ್ರೆ ಬಂದಿಲ್ಲವೆಂಬ ಕಾರಣದಿಂದ ಹಗಲು ನಿದ್ರಿಸಬೇಡಿ ಅಥವಾ ತೂಕಡಿಸಬೇಡಿ. ನಿಮ್ಮ ವಯಸ್ಸು ೪೦ಕ್ಕಿಂತ ಕಮ್ಮಿಯಾಗಿದ್ದ ಪಕ್ಷದಲ್ಲಿ ಪ್ರತಿ ದಿನ ಬೆಳಗ್ಗೆ ಒಂದೇ ಸಮಯಕ್ಕೆ ಏಳುವ ಅಭ್ಯಾಸ ಬೆಳೆಸಿಕೊಳ್ಳಿ. ಆಗ ನಿಮ್ಮ ದೇಹದ 'ನಿದ್ರೆ-ಎಚ್ಚರ ಗಡಿಯಾರ' ಸಿದ್ಧವಾಗುತ್ತದೆ. ನಿಮಗೆ ೬೦ಕ್ಕಿಂತ ಹೆಚ್ಚು ವಯಸ್ಸಾಗಿದ್ದರೆ ಹಗಲು ಚಿಕ್ಕನ ನಿದ್ರೆ ಮಾಡಬೇಡಿ. ದಿನವೂ ರಾತ್ರಿ ಒಂದೇ ವೇಳೆಗೆ ಮಲಗಿರಿ. ಆದರೆ ಆಯಾಸವಾಗಿರದಿದ್ದ ದಿನ ಕೊಂಚ ತಡವಾಗಿ ಮಲಗಿದರೂ ಚಿಂತೆಯಿಲ್ಲ.

* ರಾತ್ರಿ ನಿದ್ರೆಯ ನಡುವೆ ನಿಮಗೆ ಎಚ್ಚರವಾದರೆ ಹಾಸಿಗೆಯಲ್ಲಿಯೆ ಒರಗಿ ಕೊಂಚ ವಿಶ್ರಾಂತಿ ಪಡೆಯಿರಿ; ಮತ್ತೆ ಕ್ಷಿಪ್ರವೇ ನಿದ್ರೆ ಬರುತ್ತದೆ. ಎಚ್ಚರಾದಾಗ ಏನಾದರೂ ಓದಲು, ಸಂಗೀತ ಕೇಳಲು ಅಥವಾ ಟಿ. ವಿ. ನೋಡಲು ಪ್ರಯತ್ನಿಸಿ. ಇದರಿಂದ ಪ್ರಯೋಜನ ಕಂಡುಬರದಿದ್ದರೆ, ಮತ್ತೆ ನಿದ್ರೆ ಬರುವವರೆಗೆ ಉತ್ಸಾಹದಿಂದ ಏನಾದರೊಂದು ಕೆಲಸದಲ್ಲಿ ತೊಡಗಿರಿ.

* ಮದ್ಯಪಾನ, ಸಿಗರೇಟು, ಚಾಕೋಲೇಟು, ಕಾಫಿ, ಚಹಾ ಹಾಗೂ ಕ್ಯಾಫಿಈನ್‌ಯುಕ್ತವಾದ ಎಲ್ಲ ಆಹಾರ ಪಾನೀಯಗಳನ್ನೂ ಸಂಪೂರ್ಣವಾಗಿ ವರ್ಜಿಸಿ. ಮುಖ್ಯವಾಗಿ ಮಧ್ಯಾಹ್ನ ನಂತರ ಇವುಗಳನ್ನು ಸೇವಿಸಬೇಡಿ.

* ನಿಮ್ಮ ಮಲಗುವ ಕೊಠಡಿಯಲ್ಲಿ ಉಂಟಾಗುವ ಸದ್ದುಗದ್ದಲಗಳ ಮೇಲೆ, ಅಲ್ಲಿನ ಸೆಕೆ ಅಥವಾ ಚಳಿಗಳ ಮೇಲೆ ಸದಾ ನಿಗಾ ಇಟ್ಟುಕೊಂಡು ಅಲ್ಲಿನ

ವಾತಾವರಣವನ್ನು ನಿಮಗೆ ಹಿತಕರವಾಗುವಂತೆ ಬದಲಾಯಿಸಿಕೊಳ್ಳಲು ಪ್ರಯತ್ನಿಸಿ.


* ಮಲಗುವ ಮೊದಲು ಅತಿಯಾಗಿ ಆಹಾರ ಸೇವಿಸದಿರಿ. ರಾತ್ರಿಯ ಮಧ್ಯೆ ಏನೂ ಸೇವಿಸಬೇಡಿ. ಏನಾದರೂ ತಿನ್ನಬೇಕೆನಿಸಿದರೂ ಬಹಳ ಲಘುವಾದ ತಿಂಡಿಗಳನ್ನೇ ತಿನ್ನಿ.

* ನಿಯತವಾಗಿ ವ್ಯಾಯಾಮ ಮಾಡಿ. ಆದರೆ ವ್ಯಾಯಾಮ ಹಾಗೂ ನಿದ್ರೆಗೆ ತೊಡಗುವ ಕಾಲದ ನಡುವೆ ಹೆಚ್ಚು ಅಂತರವಿರಲಿ.

* ನಿದ್ರಿಸಹೋಗುವ ಮೊದಲು ಉದ್ವೇಗ–ಒತ್ತಡಗಳನ್ನು ತಡೆಯಲು, ಸ್ನಾಯುಗಳನ್ನು ಬಿಗಿಗೊಳಿಸುವುದು ಹಾಗೂ ಸಡಿಲುಗೊಳಿಸುವುದೇ ಮೊದಲಾದ ಅಭ್ಯಾಸ ಬೆಳೆಸಿಕೊಳ್ಳಿ. ಇಲ್ಲವೇ ಸ್ವಲ್ಪ ಅಡ್ಡಾಡಿ ಪ್ರಶಾಂತ ನಿಸರ್ಗಸೌಂದರ್ಯವನ್ನು ಸವಿದು ಬನ್ನಿ. ಆಗಾಗ ಗೋಡೆಗಡಿಯಾರವನ್ನು ನೋಡುತ್ತಿರಬೇಡಿ.

ಮತ್ತೂ ನಿಮಗೆ ನಿದ್ದೆ ಸರಿಯಾಗಿ ಬಾರದೆ ಇದ್ದರೆ ತಜ್ಞ ವೈದ್ಯರನ್ನು ನೋಡಹೋಗಿ.

ಶಂಸ ಐತಾಳ



ದುರ್ಜನರ ಹೃದಯ ಬೆಣ್ಣೆಯಂತೆ ತನಗೆ ತಾಪವಾದಾಗ ಮಾತ್ರ ಕರಗುವುದು. ಆದರೆ ಸಜ್ಜನರ ಹೃದಯ ಹಾಗಲ್ಲ. ಇತರರಿಗೆ ತಾಪವಾದರೂ ಕರಗುವುದು.

—ವಿದ್ಯಾರಣ್ಯ

ಪಂಜಾಬಿ ಕತೆ

ನಾ ಯಾರು ? ಯಾರಿಗೆ ಗೊತ್ತು ?

ಪಂಜಾಬಿನ ಸ್ಥಿತಿ-ಗತಿಗಳನ್ನು ಕುರಿತಂತೆ ನಮ್ಮ ಮಧ್ಯೆ ಹೃದಯ ಹಿಂಡುವಂಥ ಮಾತುಗಳು ನಡೆದಿದ್ದುವು. ಅವನ್ನು ಮರೆಸಲು ಆ ಪರಿಧಿಯಿಂದ ಹೊರ ಬರಲು ನಾನು ಶಾಮನನ್ನು ಉದ್ದೇಶಿಸಿ 'ಯಾರಾದರೂ ನಿನ್ನ ಹತ್ಯೆ ಮಾಡಿದರೆ ನಾನು ನಿನ್ನ ಬಗ್ಗೆ ಮನ ಮಿಡಿಯುವಂಥ, ಕಣ್ಣುಗಳು ತೇವ ಗೊಳ್ಳುವಂಥ ಶ್ರದ್ಧಾಂಜಲಿ ಬರೆಯುತ್ತೇನೆ' ಅಂದಾಗ, ಅವನು 'ಆಯಿತು, ಅದರಲ್ಲಿ ನೀನು ನನ್ನನ್ನು ಶ್ರೇಷ್ಠ ಲೇಖಕ, ನಮ್ಮ ನಡುವೆಯಿದ್ದ ವರಿಷ್ಠ ಲೇಖಕ, ಪಂಜಾಬಿಯ ಮೇಲ್ಮಟ್ಟದ ಕತೆಗಾರ ಶಾಮ್‌ಸ್ವರೂಪ್ ಎಂದೆಲ್ಲ ಬರಿ' ಅಂದ.

ನಾವಿಬ್ಬರೂ ನಕ್ಕೆವು. ಅದೇ ಸಮಯಕ್ಕೆ ತಿಂಡಿ ತಟ್ಟೆಗಳನ್ನು ಹಿಡಿದು ನಮ್ಮ ಬಳಿ ಬಂದ ನನ್ನ ಹೆಂಡತಿ ಸಿಟ್ಟು ಮಾಡಿಕೊಂಡು, ಇಬ್ಬರನ್ನೂ ಉದ್ದೇಶಿಸಿ, 'ಎಂಥ ಕೆಟ್ಟ ಮಾತನಾಡ್ತೀರಿ ನೀವು....ನೀವಿಬ್ಬರೂ ಹೇಗಿದ್ದೀರಿ ಅಂದ್ರೆ ಒಬ್ಬರಕ್ಕೆ ಒಂದು ಚೂರು ತರಚಿದರೂ ಇನ್ನೊಬ್ಬರು ಸಹಿಸಿಕೊಳ್ಳೊಲ್ಲ, ಅಂಥ ಸ್ನೇಹ ನಿಮ್ಮದು' ಅಂದಳು. ಆದರೆ ನಾವು ಆಕೆಯ ಮಾತುಗಳನ್ನು ಕಿವಿಯ ಮೇಲೆ ಹಾಕಿಕೊಳ್ಳದೆ ಮುಕ್ತವಾಗಿ ನಕ್ಕೆವು. ನಗುತ್ತಲೇ ಇದ್ದೆವು. ಹೀಗೆ ನಗುತ್ತಿದ್ದ ಶಾಮು ತನ್ನ ನಗುವನ್ನು ಒಮ್ಮೆಗೆ ನಿಲ್ಲಿಸಿದ್ದೇ, 'ಆ ದಶರಥನಿಗೆ ಹೊಡೆತಗಳು ಬಿದ್ದ ಆ ಘಟನೆ ನಿನಗೆ ನೆನಪಿದೆಯಾ?' ಅಂತ ಕೇಳಿದ. ಈಗ ಕೊಂಚ ಕಡಿಮೆಯಾಗಿದ್ದ ನಗು ಪುನಃ ಉಕ್ಕಿ ಬಂದು ಪ್ರತಿಧ್ವನಿಸಿತು. ನನ್ನ ಹೆಂಡತಿ ನಮಗೆ ಏನನ್ನಾದರೂ ಅನ್ನುವ ಬದಲು ತನ್ನಷ್ಟಕ್ಕೆ ತಾನೇ 'ಈ ಮಂದಿಗೆ ಈ ಪ್ರಪಂಚದ ಪ್ರಜ್ಞೆಯೇ ಇಲ್ಲ' ಎಂದಂದುಕೊಂಡು ಅಡುಗೆ ಮನೆಯತ್ತ ಹೋದಳು.

ಶಾಮು ಬಹಳ ವರ್ಷಗಳ ಹಿಂದಿನ ಆ ಘಟನೆಯನ್ನು ಹೇಳಲಾರಂಭಿಸಿದ— ದಶರಥ ಇಬ್ಬರು ಪಂಜಾಬಿ ಕವಿಗಳಿಗೆ ಕಾಫಿ ಹೌಸ್‌ನಲ್ಲಿ ಹೊಡೆದು, ಆಮೇಲೆ ತಾನೇ ಪತ್ರಿಕಾ ಕಾರ್ಯಾಲಯಕ್ಕೆ ಹೋಗಿ ಈ ಘಟನೆಯನ್ನು ಸುದ್ದಿ ಮಾಡಿ ಕೊಟ್ಟು ಬಂದಿದ್ದ. ಈ ಸುದ್ದಿ ಅಚ್ಚಾಗುವ ಮೊದಲೇ ಗಾಳಿಮಾತಾಗಿ ಊರ

ಶ್ರೀ ಗುರುಬಚನ್ ಸಿಂಗ್ ಭುಲ್ಲರ್ ಅವರ ಪಂಜಾಬಿ ಲೇಖನದ ಅನುವಾದ.

ತುಂಬ ಹಬ್ಬಿದಾಗ ದಶರಥ ಪತ್ರಿಕಾ ಕಾರ್ಯಾಲಯಕ್ಕೆ ಹೋಗಿ ತಾನು ಕೊಟ್ಟ ಸುದ್ದಿಯನ್ನು ವಾಪಸ್ಸು ತೆಗೆದುಕೊಳ್ಳಲು ಪ್ರಯತ್ನಿಸಿದ. ಆದರೆ ಸಂಪಾದಕರು 'ಒಬ್ಬ ಲೇಖಕ ಇನ್ನೊಬ್ಬ ಲೇಖಕನಿಗೆ ಹೊಡೆದ ಅಸ್ತ್ರ ಪ್ರದಕ್ಕಿಂತಲೂ ಮಹತ್ವದ ಸುದ್ದಿ ನನಗೆ ಇನ್ನೇನುಂಟು' ಎಂದು ಹೇಳಿ ಸುದ್ದಿಯನ್ನು ಹಿಂತಿರುಗಿಸಲು ನಿರಾಕರಿಸಿದರು. ಕೊನೆಗೆ ದಶರಥ ಅದು–ಇದು ಯೋಚನೆಮಾಡಿ ಹೇಳಿದ— 'ಆಯಿತು ಸ್ವಾಮಿ, ಸುದ್ದಿಯನ್ನು ನೀವು ಖಂಡಿತ ಅಚ್ಚುಮಾಡಿ. ದಪ್ಪಕ್ಷರ ಗಳಲ್ಲಿ ಅಚ್ಚುಮಾಡಿ. ಆದರೆ ನನ್ನ ಹೆಸರಿನ ಮುಂದೆ 'ಶ್ರೇಷ್ಠಕವಿ' ಅಂತ ಖಂಡಿತ ಹಾಕಬೇಕು' ಅಂದ.

ನಮ್ಮ ನಡುವೆ ಆದ ಅದೆಷ್ಟೋ ಮಾತುಕತೆಗಳ ಪ್ರಸಂಗಗಳಲ್ಲಿ ಪುನರಾವರ್ತಿತ ಗೊಂಡಿದ್ದ ಮೇಲಿನ ಘಟನೆಯನ್ನು ಈಗಲೂ ನೆನಪು ಮಾಡಿಕೊಂಡು—'ನನ್ನ ಶ್ರದ್ಧಾಂಜಲಿ ಬರೆಯುವಾಗ ನೀನು ಸಹ ನಮ್ಮ ಶ್ರೇಷ್ಠ ಸಾಹಿತಿ, ಪಂಜಾಬಿಯ ಶ್ರೇಷ್ಠ ಕತೆಗಾರ ಶಾಮಸ್ವರೂಪ್' ಎಂದೇ ಬರೆಯಬೇಕೆಂದು ತಾಕೀತು ಮಾಡಿದ.

ಶಾಮು ಕೆಲದಿನಗಳ ಹಿಂದಷ್ಟೇ ಪಂಜಾಬ್‌ನಿಂದ ಬಂದಿದ್ದ. ಇಲ್ಲಿ, ದೆಹಲಿ ಯಲ್ಲಿರುವ ನಮಗೆ ಪ್ರತಿದಿನ ಪಂಜಾಬಿನಲ್ಲಿ ನಡೆಯುತ್ತಿದ್ದ ಘಟನೆಗಳನ್ನು ತಿಳಿದುಕೊಳ್ಳಲು ಇದ್ದ ಏಕಮಾತ್ರ ಸಾಧನಗಳೆಂದರೆ ರಾಷ್ಟ್ರೀಯ ಎಂದು ಹೇಳಿ ಕೊಳ್ಳುತ್ತಿದ್ದ ವೃತ್ತಪತ್ರಿಕೆಗಳೇ ಆಗಿದ್ದುವು. ಅವು ತಮ್ಮ ಅಸಮತೋಲನೆ ಯಿಂದ ಕೂಡಿದ ದೃಷ್ಟಿಯಿಂದಾಗಿ ಇಲಿಯನ್ನು ಹುಲಿಯಾಗಿಯೂ ಹುಲಿ ಯನ್ನು ಇಲಿಯಾಗಿಯೂ ಚಿತ್ರಿಸುತ್ತಿದ್ದುವು. ಶಾಮು ಬಂದಾಗ, ನಾನೂ ಅವನೂ ಒಟ್ಟಿಗೆ ಕೂತು ತಲೆ ಸೇರಿ ಕೈಯಿಟ್ಟುಕೊಂಡು ಪಂಜಾಬನ್ನು ಕುರಿತಂತೆ ಮಾತನಾಡುತ್ತಿದ್ದೆವು. ಒಳಗಡೆಯಿಂದ ಪುನಃ 'ತಿಂಡಿಗೆ ಬನ್ನಿ' ಎಂಬ ಕೂಗು ಬರುತ್ತಲೇ, ತಲೆ ತುಂಬ ಹೊತ್ತ ಆ ನೋವಿನ ಸಮೇತ ಬಂದು ಊಟದ ಮೇಜಿನ ಮುಂದೆ ಕುಳಿತೆವು. ಅಲ್ಲಿಯವರೆಗೆ ಭಾರವಾಗಿ ತಲೆಯು ನೋಯುತ್ತಿತ್ತು ಹಾಗೂ ಒಂದು ಸಣ್ಣ ಗಂಟಿನಂತೆ ಗಂಟಲಿನೊಳಗೆ ಸಿಕ್ಕಿಕೊಂಡಂಥ ಅನುಭವವಾಗುತ್ತಿತ್ತು. ಆ ಗಂಟನ್ನು ದಾಟಿ ತುತ್ತು ಒಳಗೆ ಹೋಗುವುದೂ ಸಾಧ್ಯವಾಗದಂಥ ಸ್ಥಿತಿಗೆ ಬಂದಿತ್ತು. ಅಂಥ ಸ್ಥಿತಿಯಲ್ಲಿ ನಾನು ಮಾತನ್ನು ಬದಲಿಸಲು ಬೇಕೆಂದೇ ಶಾಮುವಿನ ಶ್ರದ್ಧಾಂಜಲಿಯ ವಿಷಯ ಪ್ರಸ್ತಾಪಿಸಿದ್ದೆ.

ಶಾಮುವಿನೊಂದಿಗೆ ನನ್ನ ಸ್ನೇಹ ಮೂವತ್ತು ವರ್ಷಗಳಷ್ಟು ಹಳೆಯದು. ಮೊದಲು ಕಾಲೇಜಿನಲ್ಲಿ ಒಟ್ಟಿಗೆ ಓದಿದೆವು. ಆ ಮೇಲೆ ಸಾಹಿತ್ಯ ಕ್ಷೇತ್ರದಲ್ಲೂ

ಒಟ್ಟಿಗೆ ಬರೆಯಲಾರಂಭಿಸಿದೆವು. ಅವನು ಪಂಡಿತರ ಕುಟುಂಬದಿಂದ ಬಂದವನು, ತಂದೆ-ತಾಯಿಗಳು ಪಕ್ಕಾ ಹಿಂದೂಗಳು. ಆದರೆ ಸ್ಕೂಲಿನಲ್ಲಿ ಕಲಿಯುತ್ತಿದ್ದ ದಿನಗಳಿಂದಲೇ ಅವನಿಗೆ ಪೇಟ ಕಟ್ಟಿಕೊಳ್ಳುವ ಅಭ್ಯಾಸ ಬಂದುಬಿಟ್ಟಿತ್ತು. ಒಂದು ದಿನ ಏನಾಯಿತೆಂದರೆ ಒಬ್ಬ ಜಾಟ್ ಹುಡುಗ ತುಂಬ ಚೆನ್ನಾಗಿ ಪೇಟವನ್ನು ಕಟ್ಟಿಕೊಂಡಿದ್ದ. ಅದನ್ನು ನೋಡಿದ್ದೇ ಅನಾಮತ್ತಾಗಿ ಅದನ್ನು ತೆಗೆದು ಕೊಂಡು ತನ್ನ ತಲೆಗೆ ಇಟ್ಟುಕೊಂಡ. ಅವನ ಮುದ್ದಾದ ಮುಖಕ್ಕೆ ಆ ಪೇಟ ಎಷ್ಟು ಚೆನ್ನಾಗಿ ಒಪ್ಪುತ್ತಿತ್ತೆಂದರೆ, ಅಲ್ಲಿದ್ದ ಎಲ್ಲ ಹುಡುಗರು ಒಂದೇ ಧ್ವನಿಯಲ್ಲಿ 'ಹೇ ಶಾಮು, ನೀನು ದಿನವೂ ಪೇಟ ಕಟ್ಟಿಕೊಂಡು ಬಾ, ನಿನಗೆ ತುಂಬ ಚೆನ್ನಾಗಿ ಕಾಣುತ್ತೆ' ಅಂದರು.

ಸರಿ, ಅವನು ಪೇಟ ತೊಟ್ಟುಕೊಳ್ಳಲಾರಂಭಿಸಿದ. ಅಲ್ಲಿಂದ ಮುಂದೆ ಎಷ್ಟೋ ವರ್ಷಗಳಾದ ಮೇಲೆ ಮುಖದ ಮೇಲೆ ಗಡ್ಡ ಮೂಡಿದಾಗ, ಆ ಮುಖಕ್ಕೆ ಪೇಟ ಇನ್ನೂ ಚೆನ್ನಾಗಿ ಕಾಣತೊಡಗಿತು. ಅವನು ಹೆಸರು ಬದಲಿಸಲಿಲ್ಲ. ಧರ್ಮ ಬದಲಿಸಲಿಲ್ಲ, ಕೂದಲನ್ನು ಬೆಳಸಿದ, ಪೇಟವನ್ನು ಸಜ್ಜುಗೊಳಿಸಿ ಕಟ್ಟ ತೊಡಗಿದ, ಅಷ್ಟೆ. ಈ ರೂಪದಲ್ಲಿ ಅವನು ಥೇಟ್ ಸರದಾರ್‌ಜಿ ಮಗನಂತೆ ಕಾಣುತ್ತಿದ್ದ.

ಇನ್ನೊಮ್ಮೆ ತಿಂಡಿ ಹಾಕಲು ಬಂದ ನನ್ನ ಹೆಂಡತಿ ನುಡಿದಳು—'ಸಾಕು.... ಸಾಕು....ನಗು ತುಂಬ ಜಾಸ್ತಿಯಾಯಿತು. ಈಗ ಆರಾಮವಾಗಿ ತಿಂಡಿ ತಿನ್ನಿ' ಅಂತ. ಬಹುಶಃ ಸಾವಿನ ಬಗೆಗೆ, ಶ್ರದ್ಧಾಂಜಲಿ ಬಗೆಗೆ ನಾವು ಆಡುತ್ತಿದ್ದ ಮಾತುಗಳು ಆಕೆಗೆ ಹಿಡಿಸಲಿಲ್ಲ ಅಂತ ಕಾಣುತ್ತದೆ.

ನಾನಂದೆ—'ನೋಡು, ಇವನು ಹಿಂದೂ. ಪೇಟ ಧರಿಸೋದು, ಗಡ್ಡ ಬಿಡೋದು ಇವನ ಖುಷಿ. ಈ ಹಿಂದೂವನ್ನು ಯಾವ ಸಿಕ್ಖನೂ ಸಾಯಿಸೊಲ್ಲ. ಇನ್ನು, ಇವನ ರೂಪನೋಡಿ ಯಾವನಾದರೂ ಧರ್ಮರಕ್ಷಕ, ರಾಷ್ಟ್ರ ರಕ್ಷಕ ಹಿಂದೂ ಕೊಲ್ಲಬೇಕಷ್ಟೆ.'

'ಹೌದು ಮಿತ್ರ, ನೀ ಹೇಳೋದು ಸರಿ'—ಶಾಮು ನನ್ನ ಮಾತಿಗೆ ದನಿಗೂಡಿಸಿದ.

'ನೀನು ಸತ್ತು ನೋಡು ಗೊತ್ತಾಗುತ್ತೆ....' ನಾನಂದೆ.

ಶಾಮು ಹೇಳಿದ—'ನಾನು ಅಂದರೆ ಈ ಶ್ರೇಷ್ಠ ಸಾಹಿತಿ, ಪಂಜಾಬಿಯ ಶ್ರೇಷ್ಠ ಕತೆಗಾರ ಶಾಮು ಸ್ವರೂಪ ಸತ್ಯೇ ಸಾಯ್ತಾನೆ.'

ನಾವು ಪುನಃ ಗಹಗಹಿಸಿ ನಕ್ಕೆವು. ನನ್ನ ಹೆಂಡತಿ 'ನಿಮಗೆ ಇನ್ನು ಏನಾದರೂ

ಹೇಳೋದು ಅಂದ್ರೆ ಕೋಣನ ಮುಂದೆ ಕಿನ್ನರಿ ಬಾರಿಸಿದಂತೆಯೇ ಸರಿ’ ಎಂದನ್ನುತ್ತ ಒಳಗೆ ಹೋದಳು.

ನನ್ನ ಮತ್ತು ಶಾಮುವಿನ ಸ್ನೇಹವಾದದ್ದು ನಾವು ಪಟಿಯಾಲಾ ಕಾಲೇಜಿನಲ್ಲಿ ಓದುತ್ತಿದ್ದಂಥ ದಿನಗಳಲ್ಲಿ. ಅಲ್ಲಿ ನಮಗೆ ಇನ್ನೊಬ್ಬ ಮಿತ್ರನಿದ್ದ—ಸಿಮ್ಮಿ, ಸಿಮರ್‌ಜಿತ್ ಅಂತ. ನಮ್ಮ ಮೂವರ ಸ್ನೇಹವನ್ನು ನೋಡಿ ಇತರೆಯವರು ಹೊಟ್ಟೆಕಿಚ್ಚು ಪಡುತ್ತಿದ್ದರು. ಇಬ್ಬರ ಮಧ್ಯೆ ಮೂರನೆಯವ ಬಂದರೆ ಕೆಲಸ ಹಾಳು ಎಂಬ ಗಾದೆಮಾತನ್ನು ನಾವು ಸುಳ್ಳುಮಾಡಿದ್ದೆವು. ನಾವು ಒಟ್ಟಿಗೇ ಇರುತ್ತಿದ್ದೆವು, ಒಟ್ಟಿಗೆ ತಿನ್ನುತ್ತಿದ್ದೆವು. ಒಟ್ಟಿಗೆ ತಿರುಗುತ್ತಿದ್ದೆವು. ವಿದ್ಯಾರ್ಥಿ ಜೀವನ ಕಳೆದುಹೋದ ಮೇಲೆ ನಾವು ನಮ್ಮ ನಮ್ಮ ಕಾರ್ಯಕ್ಷೇತ್ರಗಳ ಕಾರಣದಿಂದಾಗಿ ಬೇರೆ ಬೇರೆಯಾದುದೆಂಬುದು ನಿಜವಾದರೂ, ಶಾರೀರಿಕವಾಗಿ ನಾವು ಹೀಗೆ ಬೇರೆ ಬೇರೆಡೆಯಿದ್ದರೂ ನಮ್ಮ ವಿದ್ಯಾರ್ಥಿ ಜೀವನದ ಆ ದಿನಗಳು ನಮ್ಮ ಮೈ ಮನಸಗಳಲ್ಲಿ ಹಚ್ಚ ಹಸಿರಾಗಿದ್ದು ಚೇತೋಹಾರಿಯಾಗಿದ್ದುವು. ಅದಕ್ಕಾಗಿಯೇ ನನ್ನ ಹೆಂಡತಿ ಹೇಳುತ್ತಿದ್ದುದು ಇವತ್ತಿಗೂ ನಿಮ್ಮಲ್ಲಿಯ ಯಾರೊಬ್ಬರ ಕೈ ತರಚಿದರೂ ಅದನ್ನು ಸಹಿಸುವುದು ಯಾರಿಂದಲೂ ಸಾಧ್ಯವಿಲ್ಲಾಂತ. ಒಬ್ಬರು ಸಾಯಿ ಅಂದಾಕ್ಷಣಕ್ಕೆ ಇನ್ನೊಬ್ಬರು ಸತ್ತು ಬಿಡುತ್ತಾರೇನು? ಮರುದಿನ ಬೆಳಗ್ಗೆ ಶಾಮುವನ್ನು ಬೀಳ್ಕೊಡುವಾಗ ನಾನು ನನ್ನ ಒಳಗಿನ ಭಯದಿಂದ ಮೂಡಿಬಂದ ಎಚ್ಚರಿಕೆಯ ಮಾತುಗಳನ್ನಾಡುವಾಗಲೂ ಅದೇ ಮೊದಲಿನ ತಮಾಷೆಯ ಮಾತುಗಳನ್ನೇ ಆಡಿದೆ—‘ಯಾವಾಗಲೂ ಎಚ್ಚರಿಕೆಯಿಂದಿರಿ ಮಾನ್ಯ ಶ್ರೇಷ್ಠ ಸಾಹಿತಿಗಳೇ....’

ಮಧ್ಯಾಹ್ನವೇ ಸಿಮ್ಮಿಯಿಂದ ಫೋನ್ ಬಂತು. ಅವನು ಸಹ ಒಂದು ದಿನ ದಿಲ್ಲಿಯಲ್ಲಿದ್ದು ಹೋದನಂತೆ. ನಾ ಹೇಳಿದೆ-‘ಥೂ ನಿನ್ನ ....ನೀನು ಎಲ್ಲಿಗೆ ಹೋಗಿಬಿಟ್ಟಿದ್ದೋ, ಮೊನ್ನೆ ಬಂದ ಶಾಮು ಇಲ್ಲೇ ಇದ್ದ. ನೀನು ಬಂದಿದ್ದರೆ ಅದರ ಮಜವೇ ಬೇರೆಯಿತ್ತು.’

‘ವಾಹೇ ವಾಹ್ ! ನನಗೆ ಅದೃಷ್ಟವಿಲ್ಲ ಬಿಡು. ನಾನು ನನ್ನ ಕೆಲಸ ಕಾರ್ಯಗಳಲ್ಲಿ ಎಷ್ಟರಮಟ್ಟಿಗೆ ವ್ಯಸ್ತನಾಗಿಬಿಟ್ಟೆನೆಂದರೆ ನಿನ್ನನ್ನು ನೋಡಲಿಕ್ಕೆ ಬರಬೇಕು ಅಂತ ಅಂದುಕೊಂಡರೂ ಬರಲಿಕ್ಕಾಗಲಿಲ್ಲ. ಶಾಮು ಬಂದಿದ್ದಾನೆ ಅಂತ ಗೊತ್ತಾಗಿದ್ದಿದ್ದರೆ ಎಲ್ಲ ಕೆಲಸಗಳನ್ನು ಬಿಟ್ಟ ಹಾಗೆ ಬಿಟ್ಟು ಬಂದುಬಿಡುತ್ತಿದ್ದೆ’ ಸಿಮ್ಮಿ ಪಶ್ಚಾತ್ತಾಪದ ಧ್ವನಿಯಲ್ಲಿ ಹೇಳಿದ.

‘ನಾವು ಅರ್ಧರಾತ್ರಿಯವರೆಗೆ ನಿನ್ನನ್ನು ನೆನಪು ಮಾಡಿಕೊಳ್ತಿದ್ದೆವು.

ಮಾತಿನ ಮಧ್ಯೆ ನೀನು ಅದೆಷ್ಟೋ ಸಾರಿ ನೆನಪಾದೆ.'-ಮೂರೂ ಜನ ದಿಲ್ಲಿಯಲ್ಲಿದ್ದರೂ ಎರಡು ಗುಂಪಾಗಿ ಉಳಿದದ್ದಕ್ಕೆ ಸಿಮ್ಮಿ ಏನಾದರೂ ಅಂದಾನು ಎಂಬ ಭಯ ನನಗೆ ಇದ್ದೇಯಿತ್ತು.

ಅವನು ಹೇಳಿದ-'ನಾನು ನಿನ್ನೆ ನಿಮ್ಮಿಂದ ಶಾಶ್ವತವಾಗಿ ಬೀಳ್ಕೊಂಡು ಹೋಗುವವನಿದ್ದೆ. ಆದರೆ ದೇವರು ದೊಡ್ಡವನು, ಉಳಿಸಿಕೊಂಡ'-ಇಷ್ಟು ಹೇಳುತ್ತ ಅವನು ಒಮ್ಮೆಗೇ ಗಂಭೀರನಾಗಿಬಿಟ್ಟ.

ಅವನು ಹೇಳಿದ್ದನ್ನು ಕೇಳಿ, ನಂಬಿಕೆ ಬರಲಿಲ್ಲ. ಹರಿಯಾಣದಲ್ಲಿ ಬಸ್ಸುಗಳನ್ನು ಇದ್ದಕ್ಕಿದ್ದಂತೆಯೇ ತಡೆದು ನಿಲ್ಲಿಸಿದ್ದರು. ಟ್ರಕ್ಕು-ಟ್ರಾಕ್ಟರುಗಳಲ್ಲಿ ಜನಗಳನ್ನು ತುಂಬಿಕೊಂಡು ಹೋಗಿ ಹಳ್ಳಿಗಳಿಗೆ ತಲುಪಿಸುತ್ತಿದ್ದರು. ಹೀಗೆ ತುಂಬಿಕೊಂಡು ಬರುವಾಗ ಜಾತ್ರೆಗೆ ಹೋಗುತ್ತಿರುವರೇನೋ ಎಂಬಂತೆ ಡೋಲು-ಮದ್ದಳೆ ಬಾರಿಸುತ್ತ ಬರುತ್ತಿದ್ದರು. ಆ ಜನ ಪಂಜಾಬ್‌ನಲ್ಲಿ ಕದ್ದು-ಮುಚ್ಚಿ-ಕಣ್ತಪ್ಪಿಸಿ ಹತ್ಯೆಗೊಳಗಾದ ಹಿಂದೂಗಳ ಪರವಾಗಿ ಸಿಕ್ಖರ ಮೇಲೆ ಹಾಡು-ಹಗಲಲ್ಲೇ ಪೋಲೀಸರ ಕಣ್ಮುಂದೆಯೇ ಜಿ. ಟಿ. ರೋಡ್‌ನಲ್ಲಿ ದ್ವೇಷ ತೀರಿಸಿಕೊಳ್ಳುತ್ತಿದ್ದರು. ಬಹಳ ಜನಕ್ಕೆ ಅರ್ಧ ಜೀವ ಮಾಡಿಬಿಟ್ಟಿದ್ದರು, ಎಷ್ಟೋ ಜನಗಳ ಗಡ್ಡಗಳನ್ನು-ತಲೆಗಳನ್ನು ಬೋಳಿಸಿ ಹಾಕಿದರು.

'ನೀನು ಕ್ಷೇಮವಾಗಿದ್ದೀ ತಾನೆ ? ನಾನು ಆತಂಕದಿಂದ ಕೇಳಿದೆ.

'ಏನೋ ದೇವರ ದಯೆ ! ನಾನು ಬಚಾವಾದೆ. ನಾನು ಸಿಕ್ಖರ ತರಹ ಕಾಣಿಸ್ತಿರಲಿಲ್ವಲ್ಲ, ಅದಕ್ಕೆ'-ಅವನು ಬಿಕ್ಕಳಿಸುತ್ತ ಹೇಳಿದ. 'ದೇವರು ದೊಡ್ಡವನು. ನೀನು ಬದುಕಿಕೊಂಡೆಯಲ್ಲ. ನೀನು ಸಿಕ್ಖರ ತರಹ ಕಾಣಿಸ್ತಿರಲಿಲ್ಲ, ಒಳ್ಳೆಯದೇ ಆಯಿತು.'-ನಾನು ಕಣ್ಮುಚ್ಚಿಕೊಂಡು ನೆಮ್ಮದಿಯ ನಿಟ್ಟುಸಿರು ಬಿಟ್ಟೆ.

ಸಿಮ್ಮಿ ಸಿಕ್ಖ್ ಕುಟುಂಬದಿಂದ ಬಂದವನು. ಅವನು ತುಂಬ ಆಸಕ್ತಿಯಿಂದ ಬೆಳೆಸಿಕೊಂಡಿದ್ದ ಪೈಲ್ವಾನ್‌ನಂಥ ಶರೀರ ನಮ್ಮ ಕಾಲೇಜಿನಲ್ಲಿ ಪ್ರಸಿದ್ಧವಾಗಿತ್ತು. ಆದರೆ ಅವನಿಗೆ ಪೇಟ ಕಟ್ಟುವ ರೀತಿಯೇ ಗೊತ್ತಿರಲಿಲ್ಲ. ಅವನು ಪೇಟ ಕಟ್ಟಿದಾಗಲೆಲ್ಲ ಶಾಮು ನಗುತ್ತಿದ್ದ-'ನಮ್ಮ ಹಳ್ಳಿಯ ಗೌಡ ಮುಕುಂದನ ಪೇಟ ಇದ್ದಾಗೆ ಇದೆಯಲ್ಲೋ' ಅಂತ. ಸಿಮ್ಮಿ ನಾವು ಹಳ್ಳಿಯ ಗೌಡನ ಪೇಟ ಅಂದ ಕೂಡಲೇ ಕೋಪಿಸಿಕೊಳ್ಳುತ್ತಿದ್ದ. ಆಗ ನಾವು ಇನ್ನೂ ರೇಗಿಸುತ್ತಿದ್ದೆವು.

ನಾನು ಮತ್ತು ಶಾಮು ಪೇಟವನ್ನು ಚೆನ್ನಾಗಿ ಕಟ್ಟುವ ವಿಧಿ ವಿಧಾನಗಳನ್ನು ಹೇಳಿಕೊಡುತ್ತಿದ್ದೆವು. ಅವನು ಪೇಟ ಕಟ್ಟಿಕೊಳ್ಳಲು ಶುರು ಮಾಡು

ಮಾಡುತ್ತಿದ್ದಂತೆಯೇ, ನಾವು ಅಲ್ಲೇ ಪಕ್ಕದಲ್ಲಿ ನಿಂತು ಆ ಕೊನೆ ಇಲ್ಲಿಗೆ ಬರಬೇಕು, ಈ ಕೊನೆ ಅಲ್ಲಿಗೆ ಹೋಗಬೇಕು ಎಂದೆಲ್ಲ ಹೇಳಿಕೊಡುತ್ತಿದ್ದೆವು. ಅವನು ನಾವು ಹೇಳಿದ ರೀತಿಯಲ್ಲಿ ಪೇಟ ಸುತ್ತುವ ಗತಿಯನ್ನು ಬದಲಿಸುತ್ತಿದ್ದ. ಕೊನೆ ಸುತ್ತನ್ನು ಸುತ್ತಿ ಅವನು ಮುಖವನ್ನು ನಮ್ಮ ಕಡೆ ಮಾಡಿದಾಗ, ನಾವು ನಕ್ಕು 'ಅದೇ ಹಳ್ಳಿ ಗೌಡನ ಪೇಟ' ಎಂದೆನ್ನುತ್ತಿದ್ದೆವು.

ಎಷ್ಟೋ ಸಾರಿ ಅವನು ಸಾಕಾಗಿ ಪೇಟವನ್ನು ಎಸೆದುಬಿಡುತ್ತಿದ್ದನಾದರೂ ಕೊನೆಗೆ ಅಂತೂ ಇಂತೂ ಕಟ್ಟಿಕೊಳ್ಳುತ್ತಿದ್ದ. ನನ್ನ ತಲೆ ಮತ್ತು ಶಾಮುವಿನ ತಲೆ ಕೊಂಚ ದಪ್ಪನಾಗಿದ್ದುದರಿಂದ, ನಾವು ನಮ್ಮ ತಲೆಗೆ ಕಟ್ಟಿಕೊಂಡ ಪೇಟವನ್ನು ಅವನ ತಲೆಗೆ ಇಡೋಣವೆಂದರೆ ಸಡಿಲವಾಗುತ್ತಿತ್ತು. ನಾವು ನಮ್ಮ ತಲೆಗೆ ಪೇಟವನ್ನು ನಮಗೆ ಬೇಕಾದ ಭಂಗಿಯಲ್ಲಿ ಕಟ್ಟಿಕೊಳ್ಳಬಲ್ಲವರಾಗಿದ್ದೆವಾದರೂ ಸಿಮ್ಮಿಯ ತಲೆಗೆ ಪೇಟ ಕಟ್ಟಲು ಕೈಗಳು ಓಡುತ್ತಿರಲಿಲ್ಲ. ಬೇರೆಯವರ ತಲೆಗೆ ಪೇಟ ಕಟ್ಟುವ ಕಲೆ ನಮಗೆ ಕರಗತವಾಗಿರಲಿಲ್ಲ.

ಸಿಮ್ಮಿ ನಾವು ಮೂವರಲ್ಲಿ ತುಂಬ ಸುಂದರವಾಗಿದ್ದ. ನಾವು ಅವನಿಗೆ ಚುಡಾಯಿಸುತ್ತಿದ್ದೆವು–'ಮಗನೆ, ನಿನ್ನ ಈ ಸುಂದರ ಮುಖದ ಮೇಲೆ ಈ ದಪ್ಪನೆಯ ಪೇಟ ಇಲ್ಲದೇ ಹೋಗಿದ್ದರೆ ಕಾಲೇಜಿನ ಹುಡುಗಿಯರೆಲ್ಲ ಬಂದು ನಿನ್ನ ಎದೆಯ ಮೇಲೆ ಬಿದ್ದು ಹೊರಳಾಡುತ್ತಿದ್ದರು ಕಣೋ' ಅಂತ. ಅದಕ್ಕೆ ಅವನು, 'ಈಗೇನು ಹೊರಳಾಡಲು ತಾನು ಮುಂದು, ನಾನು ಮುಂದು ಅಂತ ಬರ್ತಿಲ್ಲವೇನು ?' ಎಂದನ್ನುತ್ತ ಎದೆ ಉಬ್ಬಿಸುತ್ತಿದ್ದ. ಈಗಲೂ ಲಾಜವಂತಿಯ ಚಪ್ಪಾಳೆಯ ಧ್ವನಿ ಕಿವಿಗಳಲ್ಲಿ ಮಾರ್ದನಿಸುತ್ತಿದೆ ಅಂದ.

ಲಾಜವಂತಿ ನಮ್ಮ ಸಹಪಾಠಿನಿ. ಎತ್ತರದ, ಕೊಂಚ ದಪ್ಪನೆಯ ಹುಡುಗಿ. ಆಕೆ ನೋಡಲು ಎಷ್ಟು ಸುಂದರಳಾಗಿದ್ದಳೋ ಅಷ್ಟೇ ಸೊಗಸಾಗಿ ಹಾಡುತ್ತಿದ್ದಳು. ಹುಡುಗಿಯರಲ್ಲಿ ತುಂಬ ಚೆನ್ನಾಗಿ ಲಾಜವಂತಿ ಹಾಡಿದರೆ ಹುಡುಗರಲ್ಲಿ ತುಂಬ ಚೆನ್ನಾಗಿ ಹಾಡುತ್ತಿದ್ದವನೆಂದರೆ ಸಿಮ್ಮಿ. ಎಷ್ಟೋ ಸಾರಿ ಅವನು ನಾನು ಬರೆದ ಅಥವಾ ಶಾಮು ಬರೆದ ಕವಿತೆಗಳನ್ನು ಹಾಡಿ ಸಂತೋಷಪಡಿಸುತ್ತಿದ್ದ. ಅವನು ಹೀರ್–ರಾಂಜಾಳ ಪ್ರೇಮಗೀತೆಯನ್ನು ಅಥವಾ ಜನಪದಗೀತೆಗಳನ್ನು ಹಾಡಲಾರಂಭಿಸಿದ ಅಂದರೆ ಶ್ರೋತೃಗಳು ಭಾವಸಮುದ್ರದಲ್ಲಿ ಮುಳುಗಿ ಹೋಗುತ್ತಿದ್ದರು.

ಒಂದು ಕಡೆ ಸಿಮ್ಮಿಯ ಗಾಯನಕಲೆಯ ಸಂಗೀತನಾಟಕಲತೆ! ಇನ್ನೊಂದು ಕಡೆ ಅವನ ಸ್ಟೈಲಾದ ಪೇಟ! ನಮ್ಮ ಇಬ್ಬರ ಮನೆಗಳಿಂದ ಯಾರ

ಮನೆಯಿಂದಲಾದರೂ ತುಪ್ಪ ಬರಲಿ, ನಾವು ಒಂದು ಬಾಟಲಿಯಲ್ಲಿ ಅದನ್ನು ಹಾಕಿ ತೆಗೆದುಕೊಂಡುಹೋಗಿ ಅವನ ಮುಂದೆ ಇಡುತ್ತಿದ್ದೆವು. ಹೀಗೆ ನಮ್ಮ ಮನೆಯ ತುಪ್ಪವೆಲ್ಲ ಅವನಿಗಾಗಿಯೇ ಖರ್ಚಾಗಿಬಿಡುತ್ತಿತ್ತು. ಎಷ್ಟಾದರೂ ವಯಸ್ಸಿನಲ್ಲಿ ಅವನು ಮೂವರಲ್ಲಿ ಚಿಕ್ಕವನು. ನಾನು ಮತ್ತು ಶಾಮು ದೊಡ್ಡ ಅಣ್ಣಂದಿರಂತೆ ಅವನು ಪೈಲ್ವಾನ್ ತರಹ ಶರೀರ ಬೆಳೆಸುವುದನ್ನು ನೋಡಿ ತುಂಬ ಸಂತೋಷಪಡುತ್ತಿದ್ದೆವು.

ಕಾಲೇಜಿನಲ್ಲಿ ವಾರ್ಷಿಕ ಕ್ರೀಡಾ ಸ್ಪರ್ಧೆಗಳ ಸಮಯ ಬಂತು. ಸಿಮ್ಮಿ ಭಾರ ಎತ್ತುವ ಸ್ಪರ್ಧೆಗೆ ತನ್ನ ಹೆಸರನ್ನು ಬರೆಸಿದ. ಶಾಮು ಮತ್ತು ನಾನು ಅವನಿಗೆ ತಮಾಷೆ ಮಾಡುತ್ತಿದ್ದೆವು—'ನಮ್ಮ ಸಿಮ್ಮಿ ಕೀಕರ್‌ಸಿಂಹ ಆಗಲಿಕ್ಕೆ ಹೊರಟಿದ್ದಾನೆ ಅಂತ. ಒಂದಿಪ್ಪತ್ತು ದಂಡ ಹೊಡೆದು ಭಾರ ಎತ್ತುವುದಕ್ಕಾಗುತ್ತ್ಯಾ ಅಂತ.' ಆದರೆ ಸ್ಪರ್ಧೆಯಲ್ಲಿ ಅವನು ನಿಜಕ್ಕೂ ಮೊದಲ ಬಹುಮಾನವನ್ನೇ ತೆಗೆದುಕೊಂಡು ಬಂದ. ಆಟದ ಮೈದಾನದಲ್ಲಿ ಬೆವರಿನಿಂದ ತೊಯ್ದು ಅವನ ಶರೀರ ಮೀನಿನ ಮೈಯಂತೆ ಮಿರಿ ಮಿರಿ ಮಿಂಚುತ್ತಿತ್ತು. ಪ್ರತಿ ರಾಂಡ್‌ನಲ್ಲೂ ಆತ ಮೊದಲಿಗಿಂತಲೂ ಹೆಚ್ಚಿನ ಭಾರವನ್ನು ಎತ್ತಿದಾಗ ಲಾಜವಂತಿಯ ಕೈ ಚಪ್ಪಾಳೆಗಳು ಎಲ್ಲರಿಗಿಂತಲೂ ಜೋರಾಗಿ ಕೇಳಿಸುತ್ತಿದ್ದುವು ಹಾಗೂ ಎಲ್ಲರ ಚಪ್ಪಾಳೆಗಳು ನಿಂತಮೇಲೆ ಅವಳ ಚಪ್ಪಾಳೆಗಳು ನಿಲ್ಲುತ್ತಿದ್ದುವು.

ಅದಾದನಂತರ ಅವನು ವ್ಯಾಯಾಮವನ್ನು ನಿಜಕ್ಕೂ ಗಂಭೀರವಾಗಿ ತೆಗೆದುಕೊಂಡ. ಒಂದು ದಿನ ಅವನು ಪೇಟೆಯಿಂದ ಬಂದಾಗ, ಮೊದಲ ನೋಟಕ್ಕೆ ಅವನನ್ನು ನಾವು ಯಾರೋ ಬೇರೆಯವನು ಅಂದುಕೊಂಡೆವು. ಅವನು ಗುರುತೇ ಸಿಗಲಿಲ್ಲ. ಪೇಟವನ್ನು ತೆಗೆದು ಹಿಂದೆ ಅವಿಸಿಟ್ಟುಕೊಂಡಿದ್ದ. ನಾವು ಒಂದು ನಿಮಿಷ ತಬ್ಬಿಬ್ಬಾದುದನ್ನು ಕಂಡು ಅವನು ನಕ್ಕ. ಶಾಮು ಮತ್ತು ನಾನು ಗುರುತು ಹಿಡಿದು ಅಪ್ಪಿಕೊಂಡೆವು.ಅವನ ಕೆನ್ನೆಗಳಿಗೆ ಮುತ್ತುಗಳ ಮಳೆಗರೆದು ಕೆನ್ನೆಗಳನ್ನು ಕೆಂಪು ಮಾಡಿದೆವು. ಅವನ ತಲೆಮೇಲೆ ಕೈಗಳನ್ನಾಡಿಸಿ ಆಡಿಸಿ ತಲೆ ಕೆಡಿಸಿದೆವು. ಅಂತೂ ಕೊನೆಗೆ ನಮ್ಮ ಅಪ್ಪುಗೆಯಿಂದ ಹೊರಬಂದು, ನಮಗೆ ಬೈಯುತ್ತ ಕನ್ನಡಿಯ ಮುಂದೆ ನಿಂತುಕೊಂಡು ಕೆದರಿದ ತಲೆಯನ್ನು ಬಾಚಿಕೊಳ್ಳತೊಡಗಿದ. ನಾನು ಮತ್ತು ಶಾಮು ಅಲ್ಮಾರವನ್ನು ಅಲ್ಲಿದ್ದ ಪೇಟಗಳನ್ನು ಅವನರ್ಧ, ನಾನರ್ಧ ಹಂಚಿಕೊಂಡೆವು.

ಇವತ್ತು, ಕತ್ತರಿಸಿದ ಅವನ ಕೂದಲುಗಳಿಂದಾಗಿಯೇ ಅವನ ಜೀವ ಉಳಿದುಕೊಂಡಿತು.

ನನ್ನ ಮನಸ್ಸಿನಲ್ಲಿ ಒಮ್ಮೆಗೇ ಒಂದು ಆತಂಕ ತಲೆಹಾಕಿತು. ಶಾಮು ಸಹ ನಿನ್ನೆಯೇ ಹೋಗಿದ್ದಾನೆ. ಅವನು ಪೇಟ ಸುತ್ತಿದ್ದಾನೆ. ಗಡ್ಡ ಬಿಟ್ಟಿದ್ದಾನೆ. ಶಾಮುವಿನ ಮನೆಯಲ್ಲಿ ಫೋನೂ ಇರಲಿಲ್ಲ. ಅವನು ತನ್ನ ಪಕ್ಕದ ಮನೆಯ ಫೋನ್ ನಂಬರ್ ಕೊಟ್ಟಿದ್ದುದು ನೆನಪಾಯಿತು. ಫೋನ್ ಮಾಡಿದೆ. ಸಂಪರ್ಕವಾಗಲೇಯಿಲ್ಲ. ದೇವರನ್ನು ಬೇಡುತ್ತ ಅದೆಷ್ಟೋ ಸಾರಿ ಫೋನ್ ಮಾಡಿದಾಗ ಕೊನೆಗೂ ಸಂಪರ್ಕ ಸಿಕ್ಕಿತು. ಆ ಕಡೆಯಿಂದ ಮಾತನಾಡಿದವರು ಹೇಳಿದರು– 'ನಿನ್ನೆ ಕರ್ನಾಲ್ ಬಳಿ ಬಸ್‌ನಲ್ಲಿ ಹೋಗುತ್ತಿದ್ದಾಗ ಶಾಮುವನ್ನು ಸಿಕ್ಖ ಎಂದು ಭಾವಿಸಿ ಬಸ್‌ನಿಂದ ಹೊರಗೆ ಎಳೆದುಕೊಂಡು ಕ್ರೂರವಾಗಿ ಹತ್ಯೆ ಮಾಡಿದರಂತೆ. ಈಗ ಅವನ ಹೆಣವನ್ನು ತರಲು ಹೋಗಿರುವ ಜನರ ಬರುವಿಕೆಯನ್ನು ನಿರೀಕ್ಷಿಸಲಾಗುತ್ತಿದೆಯಂತೆ.' ಈ ಸುದ್ದಿ ಕೇಳಿ ನಾನು ದಿಕ್ಕು ತೋಚದವನಂತಾದೆ.

ನಾನು ಬೆಂಕಿಯ ಮೇಲೆ ಕುಳಿತವನಂತೆ ದಿಲ್ಲಿಯಲ್ಲಿ ಕುಳಿತಿದ್ದೆ. ಶಾಮುವಿನ ಕ್ರಿಯಾಕರ್ಮಗಳು ಹರಿಯಾಣದ ಅವನದಲ್ಲದ ಊರಿನಲ್ಲಿ ನಡೆಯುವುದರಲ್ಲಿತ್ತು. ಸಿಮ್ಮಿಗೆ ಫೋನ್ ಮಾಡುವ ಮನಸ್ಸಾಯಿತು. ನನಗೆ ಫೋನ್ ಮಾಡಿದ ಮೇಲೆ ಅವನಿಗೂ ಶಾಮುವಿನ ಸಾವಿನ ಸುದ್ದಿ ಗೊತ್ತಾಗಿ ಅವನೂ ಪುನಃ ಫೋನ್ ಮಾಡಲು ಪ್ರಯತ್ನಿಸುತ್ತಿದ್ದ. ನಮ್ಮಿಬ್ಬರ ಕೈಗಳೂ ಮುರಿದಂತಾಗಿದ್ದುವು. ನಾವು ಒಬ್ಬರಿಗೊಬ್ಬರು ಯಾವ ರೀತಿಯ ಸಮಾಧಾನ ಹೇಳಿಕೊಳ್ಳಬೇಕೆಂಬುದೇ ತೋಚುತ್ತಿರಲಿಲ್ಲ.

'ಮಿತ್ರ, ನಾವು ಯಾರು, ಏನಾಗ್ತಿದ್ದೇವೆ ಹೇಳಬಲ್ಲೆಯಾ?' ಸಿಮ್ಮಿ ಅಳುತ್ತಲೇ ಫೋನಿನಲ್ಲಿ ಕೇಳುತ್ತಿದ್ದ–'ಶಾಮುವನ್ನು, ಓರ್ವ ಹಿಂದೂವನ್ನು ಅವನು ಬೆಳೆಸಿದ್ದ ಗಡ್ಡ, ಧರಿಸಿದ್ದ ಪೇಟದ ಕಾರಣದಿಂದಾಗಿ, ಸಿಕ್ಖನೆಂದು ಭಾವಿಸಿ ಹಿಂದೂಗಳು ಕೊಂದರು. ಅದೇ ನಾನು ಸಿಕ್ಖನಾಗಿದ್ದರೂ ಕೂದಲು ಕತ್ತರಿಸಿಕೊಂಡಿದ್ದರೂ, ನನ್ನನ್ನು ಹಿಂದೂವೆಂದು ಭಾವಿಸಿ ಹಿಂದೂಗಳು ನನ್ನನ್ನು ಕೊಲ್ಲದೇ ಬಿಟ್ಟುಬಿಟ್ಟರು....

'ನಾಳೆ, ಯಾವನಾದರೂ ಹಿಂದೂ ನೀನು ಸಿಕ್ಖ ಅಂತ ನಿನ್ನನ್ನು ಕೊಲ್ಲಬಹುದು ಅಥವಾ ಯಾವನಾದರೂ ಸಿಕ್ಖ ನಿನ್ನನ್ನು ಹಿಂದೂ ಅಂತ ಭಾವಿಸಿಕೊಂಡು ಕೊಲ್ಲಬಹುದು. ನಿಜವಾಗಿಯೂ ಹೇಳು, ನಾವು ಯಾವ ದೇಶದಲ್ಲಿದ್ದೇವೆ ಅಂತ'. ನನ್ನ ತಲೆ ತಿರುಗಲಾರಂಭಿಸಿತ್ತು.

'ನಾವು ಹಿಂದೂ ಅಥವಾ ಸಿಕ್ಖ ಆಗುವುದಕ್ಕಿಂತ ಮೊದಲು ಮನುಷ್ಯರಾಗೆ

ಬೇಕಿತ್ತು. ಆದರೆ ಎಲ್ಲೋ ಒಂದೆಡೆ ನಾವು ತಪ್ಪುತ್ತಿದ್ದೇವೆ'—ಸಿಮ್ಮಿ ನಿಟ್ಟುಸಿರು ಬಿಟ್ಟು ಹೇಳಿದ.

'ನೀನು ಅತ್ತಿಗೆ ಮತ್ತು ಮಕ್ಕಳ ಬಳಿ ಬೇಗ ಹೋಗು. ನಾನು ಸಹ ಯಾವುದಾದರೂ ದಾರಿ ಹುಡುಕಿಕೊಂಡು ಬಂದು ನಿನ್ನನ್ನು ಸೇರಿಕೊಳ್ಳುತ್ತೇನೆ'—ಫೋನಿಡುವ ಮುಂಚೆ ನಾನು ಹೇಳಿದೆ.

'ಬೇಡ ಬೇಡ, ನೀನು ಬರಬೇಡ ಇಲ್ಲಿಗೆ, ಖಂಡಿತ ಬರಬೇಡ. ದಾರಿ ತಪ್ಪಿದವರಿಗೆ ದಾರಿ ತೋರಿಸುವಂಥವನೇ ಹೊರಟು ಹೋದನಲ್ಲ!'—ಸಿಮ್ಮಿ ಬೈದ.

ಶಾಮು ಹೊರಟು ಹೋದ. ಸಿಮ್ಮಿ ಹೋಗುತ್ತ–ಹೋಗುತ್ತ ಉಳಿದುಕೊಂಡ. ನಾನು ಮತ್ತು ನನ್ನ ಹೆಂಡತಿ ನಮ್ಮ ಮೂವರ ಮೂರು ದಶಕಗಳ ಸ್ನೇಹದ ದಿನಗಳನ್ನು ನೆನಪು ಮಾಡಿಕೊಳ್ಳುತ್ತ ಕುಳಿತೆವು. ಕಾಲೇಜಿನ ಆ ದಿನಗಳು! ನಿಜದ ಮತ್ತು ಕಾಲ್ಪನಿಕ ಪ್ರೇಮ! ನಿಜವಾದ ಮತ್ತು ಭ್ರಮೆ ಮೂಡಿಸುವ ಕಲ್ಪನೆಗಳು! ಏನೇನೆಲ್ಲ ನೆನಪಾದುವು. ನಾವು ಮೂವರು ಪಂಜಾಬಿನ ಸಾಹಿತ್ಯಿಕ ವಲಯದಲ್ಲಿ ಹೆಸರು ಮಾಡಿದ್ದು ನೆನಪಾಯಿತು. ಶಾಮು ಮತ್ತು ನಾನು ಲೇಖಕರಾಗಿ ಕ್ರಮ-ಕ್ರಮೇಣ ಎತ್ತರಕ್ಕೆ ಹೋದೆವು. ಸಿಮ್ಮಿ ಪಂಜಾಬ್‌ನ ರಂಗಭೂಮಿಯಲ್ಲಿ ಖ್ಯಾತಿ ಗಳಿಸಿದ.

ನಾನು ಮತ್ತು ನನ್ನ ಹೆಂಡತಿ ಮಾತಾಡುತ್ತ–ಮಾತಾಡುತ್ತ ಸುಮ್ಮನಾದೆವು. ಆಮೇಲೆ ಆಗೊಮ್ಮೆ–ಈಗೊಮ್ಮೆ ಭಾರವಾದ ಮನಸ್ಸಿನಿಂದ ಒಂದೊಂದು ಮಾತಾಡುತ್ತಿದ್ದೆವು. ಪುನಃ ನಮ್ಮ ಮಧ್ಯೆ ಮೌನ ಹೆಪ್ಪುಗಟ್ಟುತ್ತಿತ್ತು. ಹೊತ್ತು ಭಾರವಾದ ಹೆಜ್ಜೆಗಳನ್ನಿಡುತ್ತ ಸಾಗುತ್ತಿತ್ತು.

ಸುದ್ದಿ ಪ್ರಸಾರದ ಸಮಯ ಬಂತು. ರೇಡಿಯೋ ಹೇಳುತ್ತಿತ್ತು–'ಹರಿಯಾಣದಲ್ಲಿ ನಿನ್ನೆ ಕೆಲವು ಸಣ್ಣಪುಟ್ಟ ಘರ್ಷಣೆಗಳು ನಡೆದುವು. ಸರ್ಕಾರಿ ಸುದ್ದಿ ಮೂಲಗಳು ಹತ್ಯೆಗಳು ನಡೆದುವು ಎಂಬ ವದಂತಿಗಳನ್ನು ಕಟುವಾಗಿ ಖಂಡಿಸಿವೆ.' ಈ ಸುದ್ದಿಯ ನಂತರ ಕೇಳಿದ ಸುದ್ದಿಯಿಂದ ನಮ್ಮ ಕಿವಿಗಳಿಗೆ ಕಾದ ಸೀಸದ ನೀರನ್ನು ಹಾಕಿದಂತಾಯಿತು—'ಪಂಜಾಬ್‌ನಲ್ಲಿ ಕೆಲವು ಹತ್ಯೆಗಳು ನಡೆದ ಸುದ್ದಿ ಬಂದಿದೆ. ಈಗ ತಾನೇ ಬಂದಿರುವ ಸುದ್ದಿಯ ಪ್ರಕಾರ ಪ್ರಸಿದ್ಧ ಗಾಯಕ ಮತ್ತು ನಟ ಸಿಮರ್‌ಜೀತ್ ಸಿಂಹ ಸಿಮ್ಮಿ ಅವರನ್ನು ಹಿಂದೂ ಎಂದು ಭಾವಿಸಿ ಗುಂಡು ಹಾರಿಸಿ ಕೊಲೆ ಮಾಡಲಾಗಿದೆ. ಅವರು ಸಿಕ್ಖರಾಗಿದ್ದರೂ ಕೂದಲು ಬಿಟ್ಟಿರಲಿಲ್ಲ....' ಈ ಸುದ್ದಿ ಕೇಳಿ ನಾನು ಕುಸಿದು ಹೋದೆ, ಮಾತಿಲ್ಲದ ಮೂಕನಾದೆ.

ಡಾ॥ ತಿಪ್ಪೇಸ್ವಾಮಿ

Statement of ownership and other particulars about the monthly periodical "**PUSTAKA PRAPANCHA**" as required to be published under rule 8 of the Registration of Newspapers (Central) Rules 1956.

FORM IV

Place of Publication	—	Karnataka State Adult Education Council. 5/1 Vinoba Road, Manasagangothri Campous, Mysore-6
Periodicity	—	Monthly
Printer's Name	—	Sri H. V. Srinivasachar
Nationality & Address	—	Indian Karnataka State Adult Education Council Printing Press, 5/1 Vinoba Road, Manasagangothri Campous, Mysore-6
Publisher's Name & Address	—	General Secretary Karnataka State Adult Education Council 5/1 Vinoba Road, Manasagangothri Campous, Mysore-6
Nationality	—	Indian
Editor's Name	—	Sri R. Boraiah
Nationality	—	Indian
Address	—	Karnataka State Adult Education Council 5/1 Vinoba Road, Manasagangothri Campous, Mysore-6

I, the General Secretary hereby declare that the particulars given above are true to the best of my knowledge and belief.

R. Shantharaj
General Secretary
KARNATAKA STATE ADULT EDUCATION COUNCIL
MYSORE

1 March 1994

Reg. No. KRNN. 29 / WPP 6

LICENSE No. 21
LICENSED TO POST WITH PAYMENT

ನೀವು ಓದಲೇಬೇಕಾದ ಪುಸ್ತಕಗಳು....

ಯುದ್ಧ ಮತ್ತು ಶಾಂತಿ (3 ಸಂಪುಟಗಳಲ್ಲಿ)

ಶರಣಚರಿತಾಮೃತ

ಪ್ರಥಮ ಚಿಕಿತ್ಸೆ

ನನ್ನೂರು

ನಳಚರಿತ್ರೆ ಸಂಗ್ರಹ

ವಿದ್ಯಾಪೀಠಗಳು

ನೈಟಿಂಗೇಲ್ ಮತ್ತು ಇತರ ಕಥೆಗಳು

ರಾಮಕೃಷ್ಣ ಪರಮಹಂಸ

ಬಸವಣ್ಣನವರ ಮಾತು

ಹಿಂದೂಧರ್ಮ ಭಾಗ ೧ ಮತ್ತು ೨

ನಾಗರಮರಿ

ಮಹಾಶ್ವೇತೆ

ಅಶೋಕನ ಶಿಲಾ ಶಾಸನಗಳು

ಶ್ರೀಶಂಕರಾಚಾರ್ಯ

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು ತರಿಸಿ ಓದಿರಿ

Edited by R. Boraiah, Printed by H. V. Sreenivasachar, Manager at Karnataka State Adult Education Council Press and Published by Karnataka State Adult Education Council, Mysore city (India)